# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

(‘ನವ ಮಾನವ ಮಾಸಿಕ’ದ ನೋಂದಿತ ಆವೃತ್ತಿ)

ಏಪ್ರಿಲ್, ೨೦೧೩ ಸಂಪುಟ: ೧ ಸಂಚಿಕೆ: ೫

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ ವಿವರ:** ವಾರ್ಷಿಕ: ರೂ. ೧೨೫/-(ವ್ಯಕ್ತಿಗಳಿಗೆ) ರೂ. ೨೦೦/-(ಸಂಸ್ಥೆ/ಗ್ರಂಥಾಲಯಗಳಿಗೆ)

**ವಿಳಾಸ:** ಎಚ್.ಐ.ಜಿ-೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇದು ಅತ್ಯಾಚಾರಗಳ ಮಹಾ ಕಾಲ ಎಂದು ಕಾಣುತ್ತದೆ! ಎಲ್ಲ ರೀತಿಯ-ಲೈಂಗಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಪಾರಿಸರಿಕ ಇತ್ಯಾದಿ-ಅತ್ಯಾಚಾರಗಳ ಕಾಲವಿದು. ನನ್ನ ಈ ಹಿಂದಿನ ಟಿಪ್ಪಣಿಯೊಂದರಲ್ಲಿ ಸೂಚಿಸಿದ್ದಂತೆ ಇವೆಲ್ಲ ಒಂದಕ್ಕೊಂದು ಸಂಬಂಧ ಪಡೆದ ಅತ್ಯಾಚಾರಗಳು. ಈ ಹಿಂದಿನ ಸಂಚಿಕೆಯೊಂದರ ಲೇಖನದಲ್ಲಿ ಖ್ಯಾತ ಸ್ತ್ರೀಪರ ಚಿಂತಕಿ ವಂದನಾ ಶಿವ ವಾದಿಸಿದ್ದಂತೆ ಜಾಗತೀಕರಣದ ಆತ್ಯಂತಿಕ ಪರಿಣಾಮದ ಪ್ರತೀಕದಂತೆ ಗೋಚರವಾಗುತ್ತಿರುವ ಭೂಮಿಯ ಮೇಲಿನ ಅತ್ಯಾಚಾರ ತನ್ನ ತಾರ್ಕಿಕ ಅಂತ್ಯವನ್ನು ಹೆಣ್ಣು ಜೀವದ ಮೇಲಿನ ಅತ್ಯಾಚಾರಗಳಲ್ಲಿ ಕಂಡುಕೊಳ್ಳುತ್ತಿದೆ. ಇದನ್ನು ಅರಿಯದ, ಅದಕ್ಕೂ ಮುಖ್ಯವಾಗಿ ಅರಿಯಲು ನಿರಾಕರಿಸುವ ಜಾಗತೀಕರಣದ ನೇರ ಫಲಾನುಭವಿಗಳಾದ ನಮ್ಮ ರಾಜಕೀಯ ಲೋಕ ಮತ್ತು ಅದನ್ನೇ ಅವಲಂಬಿಸಿರುವ ಖಂಡನೆಗೆ ಒಳಗಾಗಿರುವ ಮಾಧ್ಯಮ ಲೋಕ ಲೈಂಗಿಕ ಅತ್ಯಾಚಾರದ ವಿಷಯವನ್ನೇ ಒಂದು ಒಂಟಿ ಜ್ವಲಂತ ಸಮಸ್ಯೆ ಚರ್ಚಿಸುತ್ತಿವೆ.

ಇತ್ತೀಚೆಗಂತೂ ತಮ್ಮ ಮಾತಿನ ಅಂಗಡಿಗಳಲ್ಲಿ ವ್ಯಾಪಾರ ಮಾಡಲು ರೋಚಕ ರಾಜಕೀಯ ಸರಕಿಲ್ಲದೇ ಹೋದಾಗಲೆಲ್ಲ ನಮ್ಮ ರಾಷ್ಟ್ರೀಯ (ಅಂದರೆ ಇಂಗ್ಲಿಷ್) ಮಾಧ್ಯಮಗಳು-ನಿರ್ದಿಷ್ಟವಾಗಿ ಟಿವಿ ವಾಹಿನಿಗಳು-ಲೈಂಗಿಕ ಅತ್ಯಾಚಾರ ಮತ್ತು ಅದಕ್ಕೆ ಸಂಬಂಧಿಸಿದ ನೈತಿಕ ಮತ್ತು ಕಾನೂನಾತ್ಮಕ ಸಂಗತಿಗಳನ್ನು ಬಹು ಗಂಭೀರವಾಗಿ ಚರ್ಚಿಸ ತೊಡಗಿರುವುದನ್ನು ನಾವು ನೋಡುತ್ತಿದ್ದೇವೆ. (ನಮ್ಮ ಪ್ರಾದೇಶಿಕ ಮಾಧ್ಯಮಗಳ ಸುದ್ದಿ ಸದ್ಯಕ್ಕೆ ಬೇಡ!) ಈ ವಾಹಿನಿಗಳು ದೆಹಲಿ ಸಾಮೂಹಿಕ ಅತ್ಯಾಚಾರದ ವಿರುದ್ಧ ದಿನಗಟ್ಟಲೆ ನಡೆದ ಪ್ರತಿಭಟನೆಗಳ ನೇರ ಪ್ರಸಾರ ಮಾಡುತ್ತಿದ್ದ ಹೊತ್ತಿನಲ್ಲೇ ಪ್ರತಿಭಟನಾ ಸ್ಥಳದಿಂದ ಒಂದೂವರೆ ಕಿ.ಮೀ. ದೂರದಲ್ಲಿಯೇ ಬಸ್ಸೊಂದರಲ್ಲಿ ಹುಡುಗಿಯೊಬ್ಬಳ ಮೇಲೆ ನಡೆದ ಅತ್ಯಾಚಾರದ ಪ್ರಯತ್ನ ವರದಿಯಾಯಿತು! ಜೊತೆಯಲ್ಲೇ ದೇಶಾದ್ಯಂತ ಲೈಂಗಿಕ ಅತ್ಯಾಚಾರದ ಪ್ರಕರಣಗಳು ಎಡಬಿಡದ ರೀತಿಯಲ್ಲಿ ವರದಿಯಾಗತೊಡಗಿದವು. ಇನ್ನು ಇತ್ತೀಚೆಗೆ ಮಹಿಳಾ ದೌರ್ಜನ್ಯ ತಡೆ ಕಾಯಿದೆ ಬಗ್ಗೆ ಮಾಧ್ಯಮಗಳಲ್ಲಿ ಎಳೆ ಎಳೆಯಾಗಿ (ಮುಕ್ತ ಕಾಮವನ್ನು ಕಾನೂನುಬದ್ಧಗೊಳಿಸಬಹುದಾದ ವಯಸ್ಸಿನ ಬಗ್ಗೆ!) ಚರ್ಚೆ ನಡೆಯುತ್ತಿರುವಾಗಲೇ ಮಧ್ಯಪ್ರದೇಶದಲ್ಲಿನ ಗ್ರಾಮಾಂತರದಲ್ಲಿ ಸ್ವಿಸ್ ಮಹಿಳೆ ಮೇಲೆ ನಡೆದ ಅತ್ಯಚಾರ ವರದಿಯಾಯಿತು. ಸಂಬಂಧಿತ ಮಸೂದೆ ಸಂಸತ್ತಿನಲ್ಲಿ ಚರ್ಚೆಯಾಗುವ ಹೊತ್ತಿನಲ್ಲೇ ದೆಹಲಿಯ ಹೋಟೆಲೊಂದರಲ್ಲಿ ತಂಗಿದ್ದ ಬ್ರಿಟಿಷ್ ಮಹಿಳೆಯೊಬ್ಬಳು ಹೊಟೆಲ್ ಮಾಲಿಕನ ಲೈಂಗಿಕ ದಾಳಿಯಿಂದ ತಪ್ಪಿಸಿಕೊಳ್ಳಲು ಕಿಟಕಿಯಿಂದ ಹಾರಿ ಗಾಯಗೊಂಡ ಘಟನೆ ನಡೆಯಿತು!

ಇದೆಲ್ಲ ಏನು ಸೂಚಿಸುತ್ತದೆ? ನಮ್ಮ ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು, ಬುದ್ಧಿಜೀವಿಗಳು ನಡೆಸುವ ಇಂತಹ ರಾಷ್ಟ್ರೀಯ ಚರ್ಚೆಗಳಿಗೂ ರಾಷ್ಟ್ರದ ಸಾರ್ವಜನಿಕ ಜೀವನಕ್ಕೂ ಯಾವುದೇ ಸಂಬಂಧವಿಲ್ಲ. ಅಂದರೆ ಪರಸ್ಪರ ಸಂಪರ್ಕ ತಪ್ಪಿ ಹೋಗಿದೆ. ರಾಷ್ಟ್ರದ ಮಾನಸಿಕತೆಯ ಚಲನಶೀಲತೆಯನ್ನು, ಅದರ ಸೂಕ್ಷ್ಮ ಚಾಲೂ-ಚಹರೆಗಳನ್ನು ರಾಷ್ಟ್ರೀಯ ಎಂದು ಹೇಳಿಕೊಳ್ಳುವ ಚರ್ಚೆಗಳು, ಅವನ್ನು ರೂಪಿಸುವ ಸಂಸ್ಥೆಗಳು, ಬೌದ್ಧಿಕ ಪರಿಕರಗಳು ಅರ್ಥ ಮಾಡಿಕೊಳ್ಳುವಲ್ಲಿ ಸೋಲುತ್ತಿವೆ.

ಹಾಗಾಗಿಯೇ ದೆಹಲಿ ಅತ್ಯಾಚಾರದ ಪ್ರಕರಣದ ಬಗ್ಗೆ ರಾಷ್ಟ್ರೀಯ ಚರ್ಚೆಯೆಂಬುದು ಎಷ್ಟು ಹುಸಿ ತೀವ್ರತೆಯಲ್ಲಿ ನಡೆಯಿತೆಂದರೆ, ಅದನ್ನು ಗಂಭೀರವಾಗಿ, ನಿರಂತರವಾಗಿ ಕೇಳಿದ ಯಾವನೇ ಗಂಡಸು ಪಾಪಪ್ರಜ್ಞೆಯಿಂದ ನರಳಿ ನಪುಂಸಕನೇ ಆಗುವಷ್ಟು! ಇನ್ನು ಲೈಂಗಿಕ ಅತ್ಯಾಚಾರ ತಡೆಯುವ ರಾಷ್ಟ್ರದ ದೃಢ ಸಂಕಲ್ಪದ ಪ್ರತೀಕವಾಗಿ ತ್ವರಿತ ಗತಿಯಲ್ಲಿ ರೂಪಿಸಲಾಗಿದೆಯೆಂದು ಹೇಳಲಾದ ಮಹಿಳಾ ದೌರ್ಜನ್ಯ ತಡೆ ಮಸೂದೆ ಬಗ್ಗೆ ಮೊನ್ನೆ ಇಂಗ್ಲಿಷ್ ಟಿವಿ ವಾಹಿನಿಯೊಂದರಲ್ಲಿ ಚರ್ಚೆ ನಡೆಸಿಕೊಟ್ಟ ಮಹಿಳಾ ಮಣಿಯೊಬ್ಬರು ಸಂಸತ್ತಿನಲ್ಲಿ ಶರದ್ ಯಾದವ್ ಮತ್ತು ಇನ್ನೊಬ್ಬಿಬ್ಬರು ಈ ಮಸೂದೆಯಲ್ಲಿನ ಅಸಹಜತೆ ಮತ್ತು ಅವಿವೇಕಗಳನ್ನು ಸೂಚಿಸುತ್ತಾ, ‘ಹರೆಯದಲ್ಲಿ ಹುಡುಗಿಯೊಬ್ಬಳನ್ನು ಹಿಂಬಾಲಿಸದ, ಚುಡಾಯಿಸಿದ ಗಂಡಸು ಯಾರಿದ್ದಾರೆ ಹೇಳಿ!’ ಎಂದು ಕೇಳಿ ಇವುಗಳನ್ನು ಶಿಕ್ಷಾರ್ಹ ಅಪರಾಧಗಳನ್ನಾಗಿ ಘೋಷಿಸುವ ಮಸೂದೆಯ ಅಂಶಗಳನ್ನು ವಿರೋಧಿಸಿದ್ದನ್ನು ಗಂಡು ಮೃಗತ್ವವೆಂದು ಕರೆದು ಚರ್ಚೆಯನ್ನು ಕಟ್ಟತೊಡಗಿದ್ದು ನಮಗೆ ತಗುಲಿರುವ ಕಾಯಿಲೆ ಎಷ್ಟು ಆಳವಾದದ್ದು, ವಿಕ್ಷಿಪ್ತವಾದದ್ದು ಎಂಬುದನ್ನು ಸೂಚಿಸುವಂತಿದೆ.

ನಿಜ, ಪುರುಷತ್ವ ಎನ್ನುವುದು ಹೆಚ್ಚು ಸ್ಥೂಲವೂ, ರೂಕ್ಷವೂ, ಆಕ್ರಮಣಕಾರಿಯೂ ಆಗುತ್ತಾ ತನ್ನ ವಿವೇಕ-ಸೂಕ್ಷ್ಮತೆಗಳನ್ನು ಕಳೆದುಕೊಳ್ಳುತ್ತಿದೆ. ಆದರೆ ಅದಕ್ಕೆ ಕಾರಣ ಬರೀ ಪುರುಷರಲ್ಲ. ಅದು ಸಾಧ್ಯವೂ ಇಲ್ಲ! ಏಕೆಂದರೆ ಅದು ಕೇವಲ ಜೈವಿಕ ವಿದ್ಯಮಾನವಾಗಿರದೆ, ಒಂದು ಸಾಮಾಜಿಕ-ರಾಜಕೀಯ ವಿದ್ಯಮಾನವೂ ಆಗಿರುತ್ತದೆ. ಇಡೀ ಸಮಾಜ ಅದರೊಳಗಿನ ಹೆಂಗಸರೂ ಸೇರಿದಂತೆ ಕ್ರಮೇಣ ತನ್ನ ಹೆಣ್ಣು ಗುಣವನ್ನು ಕಳೆದುಕೊಂಡು ಹೆಚ್ಚೆಚ್ಚು ಗಂಡಾಗುತ್ತಿರುವುದರ ಸೂಚನೆ ಇದಷ್ಟೆ. ಅಂದರೆ ಹೆಣ್ಣೂ ಗಂಡಾಗುತ್ತಿರುವ ಮೂಲಭೂತ ಅಸಮತೋಲನದ ದುರಂತ ಚಿತ್ರವಿದು. ಇದು ಮತ್ತೆ ಕೇವಲ ಹೆಣ್ಣಿಗೆ ಸಂಬಂಧಿಸಿದ ಸಂಗತಿಯಲ್ಲ. ಗಂಡು ಗಂಡಾಗಿದ್ದು, ಹೆಣ್ಣು ಹೆಣ್ಣಾಗಿರುವ ಪ್ರಕೃತಿ ಸಹಜ ಸಮತೋಲನದಲ್ಲಿ ನಾಗರೀಕತೆಯ ಹೆಸರಿನಲ್ಲಿ ನಡೆದಿರುವ ಹಸ್ತಕ್ಷೇಪ ಸೃಷ್ಟಿಸಿರುವ ದೊಡ್ಡ ದುರಂತವಿದು. ಈ ದುರಂತದ ಹಿಂದಿರುವ ಶಕ್ತಿಗಳು ಯಾವುವು ಎಂಬುದನ್ನು ನಾವು ಗುರುತಿಸಬೇಕಿದೆ. ಅಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ವಂದನಾ ಶಿವ ಅವರು ಸೂಚಿಸಿದಂತೆ, ನವ ಉದಾರೀಕರಣ ನೀತಿ ಜಾರಿಯಾಗುತ್ತಾ ಬಂದ ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ದೇಶದಲ್ಲಿ ಹೆಣ್ಣಿನ ಮೇಲೆ ಲೈಂಗಿಕ ಅತ್ಯಾಚಾರ ಏಕೆ ಹೆಚ್ಚಿದೆ ಎಂಬುದನ್ನು ಆಳವಾಗಿ ವಿಶ್ಲೇಷಿಸಬೇಕಿದೆ. ಹಾಗೇ ಯಾರನ್ನೂ ಮುಟ್ಟದ ಏನನ್ನೂ ಗ್ರಹಿಸದೆ, ನಮ್ಮನ್ನು ದಾರಿ ತಪ್ಪಿಸುತ್ತಿರುವ ಈ ರಾಷ್ಟ್ರೀಯ ಚರ್ಚೆಗಳ ಮೂಲ ನೆಲೆಗಳನ್ನು ಪ್ರಶ್ನಿಸಬೇಕಿದೆ.

**-ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಅಫ್ಜಲ್ ಗುರು ಕುರಿತ ನಿಮ್ಮ ಸಂಪಾದಕೀಯ ಮತ್ತು ಲೋಹಿಯಾ ಕುರಿತ ಪು.ಲ. ದೇಶಪಾಂಡೆಯವರ ಲೇಖನ ನನ್ನ ಮನಸ್ಸನ್ನು ಕಲಕಿದವು. ನಿಮಗೆ ಕೃತಜ್ಞತೆಗಳು.

**–ಡಾ. ಯು.ಆರ್. ಅನಂತಮೂರ್ತಿ,** ಬೆಂಗಳೂರು

ಲೋಹಿಯಾರನ್ನು ಕುರಿತ ಪು.ಲ. ದೇಶಪಾಂಡೆಯವರ ಲೇಖನ ಅರ್ಥಪೂರ್ಣವಾಗಿದೆ. ಲೋಹಿಯಾ ಅವರ ವ್ಯಕ್ತಿತ್ವದ ಎಲ್ಲ ಮಗ್ಗುಲುಗಳನ್ನು ಸುಂದರ ಮತ್ತು ಪರಿಣಮಕಾರಿಯಾಗಿ ಕಟ್ಟಿಕೊಡುವ ಈ ಲೇಖನ ಈ ಸಂಚಿಕೆಯನ್ನು ಸಂಗ್ರಹಯೋಗ್ಯವಾಗಿಸಿದೆ.

**–ಸಿ. ಚೆನ್ನಬಸವಣ್ಣ,** ಬಳ್ಳಾರಿ

ಮೂರು ಮಹಿಳಾ ಕೃತಿಗಳನ್ನು ಕುರಿತ ಸವಿತಾ ನಾಗಭೂಷಣರ ಟಿಪ್ಪಣಿ ಸ್ತ್ರೀವಾದಿ ವಿಮರ್ಶೆಯೂ ಸೇರಿದಂತೆ ನಮ್ಮ ವಿಮರ್ಶಾಲೋಕದ ಭಂಡತನವನ್ನು ಬಹು ಪರಿಣಾಮಕಾರಿಯಾಗಿ ಸೂಚಿಸುವಂತಿದೆ. ರಾಜೇಂದ್ರ ಚೆನ್ನಿಯವರು ಮಾಡಿರುವ ಡಿ.ಎಸ್. ನಾಗಭೂಷಣ ಅವರ ಪುಸ್ತಕದ ವಿಮರ್ಶೆಯ ಕೆಲವು ಮಾತುಗಳಿಗೆ ಲೋಹಿಯಾ ಕುರಿತ ಪು.ಲ.ದೇಶಪಾಂಡೆಯವರ 'ರಸಿಕರುದ್ರ ತಪಸ್ವಿ' ಎಂಬ ಲೇಖನದಲ್ಲಿ ಉತ್ತರಗಳಿರುವಂತಿವೆ.

**–ಎನ್. ಮಂಗಳಾ,** ಹಾಸನ

ಫೆಬ್ರುವರಿಯ 'ಹೊಸ ಮನುಷ್ಯ' ಒಂದು ಕಾರಣಕ್ಕೆ ವಿಶಿಷ್ಟವೆನಿಸಿತು. ಹತಾಶೆ ಮತ್ತು ಸಿನಿಕತೆಗಳ ಬದಲಾಗಿ ನಂಬಿಕೆ ಮತ್ತು ಆಶಾವಾದಗಳನ್ನು ಒಳಗಿಟ್ಟುಕೊಂಡು ಬರೆದಿರುವ ಅನೇಕ ಲೇಖನಗಳು ಇಲ್ಲಿವೆ. ಹಾಸನದ ಅಧ್ಯಯನ ಶಿಬಿರ ಕುರಿತ ಸಂಪಾದಕೀಯ ಟಿಪ್ಪಣಿಗಳು, ಧನಂಜಯ ಜೀವಾಳರ 'ಶಾಲೆಗೊಂದು ಬಹಿರಂಗ ಪತ್ರ,' ಮಂಜುಳಾ ಎಂ. ರಾಜು ಅವರ 'ಗ್ರಾಮಾಂತರ ಪಿಯುಸಿ ಪಕ್ಕಳು' ಮುಂತಾದ ಬರಹಗಳು ಈ ರೀತಿಯವು. ಕಾಶ್ಮೀರ ಕುರಿತ ದೀರ್ಘ ಬರಹ ಮತ್ತು ಅದಕ್ಕೆ ಬರೆದಿರುವ ಸಂಪಾದಕ ಟಿಪ್ಪಣಿ 'ಅಕೆಡೆಮಿಕ್' ಆಗಿಯೂ ಆಸಕ್ತಿ ಹುಟ್ಟಿಸುತ್ತವೆ. 'ಎದೆಗೆ ಬಿದ್ದ ಅಕ್ಷರ' ಕುರಿತ ಕೆ.ಬಿ.ಸಿದ್ದಯ್ಯನವರ ಬರಹ ಅದರ ಒಂದೆರಡು ಲಕ್ಷಣಗಳನ್ನು ಮಾತ್ರ ಚರ್ಚಿಸಿದಂತಿದೆ. ಈ ಸಂವಾದ ಮುಂದುವರೆಯಬೇಕು. ನಮ್ಮ ಸಮಾಜದ ಎಲ್ಲ ಸಮುದಾಯಗಳಿಂದ.

**–ಡಾ. ಎಚ್.ಎಸ್. ರಾಘವೇಂದ್ರ ರಾವ್,** ಬೆಂಗಳೂರು

# 'ನಮ್ಮ ಸಮಾಜವಾದಿಗಳು': ಒಂದು ಪ್ರತಿಕ್ರಿಯೆ

ಪ್ರತಿ ಸಂಚಿಕೆಯಲ್ಲೂ ಪ್ರಕಟವಾಗುತ್ತಿರುವ ಸಮಾಜವಾದಿ ವ್ಯಕ್ತಿತ್ವಗಳ ವ್ಯಕ್ತಿಚಿತ್ರಗಳು ಸಮಾಜವಾದದ ಪ್ರೇರಣೆಗಳನ್ನು ಕುರಿತಂತೆ ಈ ತಲೆಮಾರಿನ ಓದುಗರನ್ನು ಹೊಸ ಚಿಂತನೆಗೆ ಪ್ರೇರೇಪಿಸುತ್ತಿದೆಯೆಂದು ನನ್ನ ನಂಬಿಕೆ. ರಾಚಪ್ಪನವರು('ನಮ್ಮ ಸಮಾಜವಾದಿಗಳು': ಹೊಸ ಮನುಷ್ಯ: ಮಾರ್ಚ್, ೨೦೧೩) ತಮ್ಮ ಜೀವನದ ಕೊನೆಯ ಕ್ಷಣಗಳಲ್ಲಿ ಹೇಳುವ ಹಾಗೆ ಸಮಾಜವಾದವೆಂದರೆ, ಸಮಾಜವಾದಿಯಾಗಿ ಇರುವುದೆಂದರೆ, ಹೊಸ ಮನುಷ್ಯನ, ಹೊಸ ಜೀವನಶೈಲಿಯ ಕನಸಿನ ಸಾಕ್ಷಾತ್ಕಾರಕ್ಕಾಗಿ ತ್ಯಾಗ ಮಾಡುವುದು(ವೈಯುಕ್ತಿಕ ಮತ್ತು ಕೌಟುಂಬಿಕ ನೆಲೆಗಳಲ್ಲಿ) ಸಮಾಜವಾದದ ಮುಖ್ಯ ಮತ್ತು ಸೌಂದರ್ಯಾತ್ಮಕ ಪ್ರೇರಣೆಯಾಗಿತ್ತು. ವ್ಯಕ್ತಿತ್ವವು ನಿರ್ಮಾಣಗೊಳ್ಳುವ ಯೌವ್ವನದ ದಿನಗಳಲ್ಲಿ ಮನುಷ್ಯರು ಒಂದು ವಿಚಾರ ಮತ್ತು ಒಂದು ಚಳುವಳಿಯ ಕಡೆಗೆ ತುಡಿಯುವುದು ಇಂತಹ ನೈತಿಕ ಮತ್ತು ಸೌಂದರ್ಯಾತ್ಮಕ ಪ್ರೇರಣೆಗಳಿಂದಾಗಿ. ನಂತರ ಕಾರ್ಯಕ್ರಮಗಳು, ಚುನಾವಣೆ, ಹೋರಾಟ ಇತ್ಯಾದಿ. ಭೂ ಸುಧಾರಣೆ, ಮೀಸಲಾತಿ, ಸಮಾನತೆಗಾಗಿ ನಾನಾ ರೀತಿಯ ಹೋರಾಟಗಳನ್ನು ಕೇವಲ ಚಳುವಳಿಗಳಾಗಿ ರಾಜಕೀಯ ಕಾರ್ಯಸೂಚಿಯಾಗಿಯೂ ಮಂಡಿಸಬಹುದು. ಇಲ್ಲಾ ಇವುಗಳ ಹಿಂದಿರುವ ಜೀವನ ಸೌಂದರ್ಯ, ಜೀವನಶೈಲಿ, ತಾತ್ವಿಕತೆಯ ಪ್ರಶ್ನೆಯನ್ನಾಗಿಯೂ ಮಂಡಿಸಬಹುದು. ಎರಡನೇ ರೀತಿಯ ಪ್ರೇರಣೆಯು ಸಮಾಜವಾದಿ ಚಿಂತನೆಯನ್ನು ರಾಜಕೀಯ ಪಕ್ಷಗಳ ಕಾರ್ಯಸೂಚಿಯಿಂದಾಚೆಗೆ ಹೊರತಂದು ನಮ್ಮೆಲ್ಲರ ವೈಯುಕ್ತಿಕ–ಕೌಟುಂಬಿಕ ನೆಲೆಗಳಿಗೆ ಪ್ರವೇಶಿಸುವಂತೆ ಮಾಡುತ್ತದೆ.

ಇಂತಹ ಸೌಂದರ್ಯವನ್ನು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ವ್ಯಕ್ತಿಚಿತ್ರಗಳು ಬೇರೆ ಬೇರೆ ನೆಲೆಗಳಲ್ಲಿ ಸೂಚಿಸುತ್ತವೆ. ಇವರೆಲ್ಲರೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿದ್ದಾಗ ಕಾಂಗ್ರೆಸ್ಸಿನ ಏಕಚಕ್ರಾಧಿಪತ್ಯವೇ ಚಾಲ್ತಿಯಲ್ಲಿದ್ದು; ಸರ್ಕಾರ ರಚಿಸುವುದು, ಮಂತ್ರಿಗಳಾಗುವುದು ಇವುಗಳ ಕನಸು ಕೂಡಾ ಇರಲಿಲ್ಲ. ನಗರಕ್ಕೆ ನಗರವೇ, ಜಿಲ್ಲೆಗೆ ಜಿಲ್ಲೆಯೇ ಇಡೀ ಜಾತಿ ಬಂಧುವರ್ಗವೇ ಪಕ್ಷ ರಾಜಕಾರಣದ, ಅಧಿಕಾರ ರಾಜಕಾರಣದ ಗುಂಗಿನಲ್ಲಿ ಮುಳುಗಿಹೋಗಿರುತ್ತಿರುವಾಗ ಇಂತಹ ಕೆಲವರು ದಶಕಗಳ ಕಾಲ ಇವರೆಲ್ಲರೆದುರಿಗೆ ಆತ್ಮವಿಶ್ವಾಸದಿಂದ, ಚಾರಿತ್ರಿಕ ಪ್ರಜ್ಞೆಯಿಂದ ಕೆಲಸ ಮಾಡುತ್ತಿದ್ದುದು ಸೋಜಿಗವಾಗಿ ಕಾಣುತ್ತಿತ್ತು. ಕಾರ್ಮಿಕರ ರ್‍ಯಾಲಿಯನ್ನು ಇಂದು ಸಂಜೆ ಉದ್ದೇಶಿಸಿ ಮಾತನಾಡಿದ, ಕ್ರಾಂತಿಯನ್ನು ತನ್ನ ಮಾತುಗಾರಿಕೆ–ಕಳಕಳಿಯಿಂದ ಭೂಮಿಗೆ ಇಳಿಸೇಬಿಟ್ಟ ನಾಯಕರೊಬ್ಬರು ಮಾರನೇ ದಿನ ದಿನಸಿಯಂಗಡಿಗೆ ಬಂದಾಗ ಮುಕ್ಕಾಲು ಕೇಜಿ ರವೆ ಕೊಂಡು ಎಷ್ಟು ದೊಡ್ಡು ಕೊಡಬೇಕೆಂದು ಕೇಳಲಾಗಿ ಷರಟಿನ ಜೇಬುಗಳನ್ನೆಲ್ಲ ಹುಡುಕಾಡಿದರೂ ಹನ್ನೆರಡಾಣೆ ಸಿಗಲಿಲ್ಲ. ಹೀಗಿದ್ದರೂ ಈತ ಶಾಸಕ–ಮಂತ್ರಿಗಳೊಂದಿಗೆ, ಬಂಧುಮಿತ್ರರೊಂದಿಗೆ ಆತ್ಮವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದ ರೀತಿ ಹೊಸ ಸಮಾಜಕ್ಕೆ ಕನವರಿಸುತ್ತಿದ್ದ ರೀತಿ ಮನ ಕಲುಕುವಂತಿತ್ತು. ನಾವು ಹೇಗಿದ್ದರೂ ಚುನಾವಣೆಗಳಲ್ಲಿ ಸೋತೇ ಸೋಲುತ್ತೇವೆ, ಹಾಗಾಗಿ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಿಂದ ಒಕ್ಕಲಿಗರಲ್ಲದ ಬೇರೆ ಬೇರೆ ಜಾತಿಯ ಪಕ್ಷದ ಕಾರ್ಯಕರ್ತರನ್ನು ಉಮೇದುವಾರರನ್ನಾಗಿ ನಿಲ್ಲಿಸೋಣ. ಹಾಗಾದಾಗ ಸಮಾಜವಾದಿ ಪಕ್ಷವೂ ಎಲ್ಲ ಜಾತಿಗಳಿಗೆ ಸೇರಿದ ಪಕ್ಷವೆಂದು ಜನರಿಗೆ ಮನದಟ್ಟಾಗುತ್ತದೆ ಎಂದು ಕಿರಿಗಾಣಿಗರ ಜಾತಿಗೆ ಸೇರಿದ ಕಾರ್ಯಕರ್ತರೊಬ್ಬರು ಒಕ್ಕಲಿಗರೇ ತುಂಬಿದ್ದ ಸಭೆಯಲ್ಲಿ ಕಳಕಳಿಯಿಂದ ತುಂಬ ಹೊತ್ತು ಮಾತನಾಡಿದ್ದು ನನಗೆ ನೆನಪಿದೆ.

ವ್ಯಕ್ತಿಚಿತ್ರಗಳು ಸೂಚಿಸುವ ಹಾಗೆ ಸಮಾಜವಾದವು, ಗಾಂಧಿವಾದವು ಎಲ್ಲ ಸ್ತರಗಳ ಜನರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿತ್ತು. ಮೇಲುವರ್ಗದವರು, ಭೂಮಾಲಿಕ ಜಾತಿಗಳಿಂದ ಬಂದವರು, ಮಧ್ಯಮ ವರ್ಗದವರು, ಬೇರೆ ಬೇರೆ ವೃತ್ತಿಗಳಿಗೆ ಸೇರಿದವರು ಹೀಗೆ ಉತ್ತಮ, ತಂಪಾದ ಹಿನ್ನೆಲೆಯಿಂದ ಬಂದವರು ಕೂಡ ಸಹಜವಾಗಿ ಸಮಾಜಮುಖಿಗಳಾಗುವಂತೆ ಪ್ರೇರೇಪಣೆ ಹುಟ್ಟಿಸುವ ವ್ಯಕ್ತಿತ್ವ–ಚಿಂತನೆಯ ಪ್ರಖರತೆ ರಾಮಮನೋಹರ ಲೋಹಿಯಾ ಮತ್ತು ಗಾಂಧಿಯವರಲ್ಲಿ ಇತ್ತೆಂದು ಕಾಣುತ್ತದೆ. ಶ್ರೀಮಂತ ದೇಶಗಳು, ಶ್ರೀಮಂತರು, ಮೇಲುವರ್ಗದವರು ಕೂಡ ಏಕೆ ಸಮಾಜವಾದದ ಕನಸು ಕಾಣಬೇಕು, ಸಮಾಜವಾದವು ಹೇಗೆ ಇವರನ್ನು ಕೂಡ ಒಳಗೊಳ್ಳುತ್ತದೆ ಎಂದು ರಾಮಮನೋಹರ ಲೋಹಿಯಾ ಅಮೆರಿಕಾ ಭೇಟಿಯ ಸಂದರ್ಭದಲ್ಲಿ ಮಾತನಾಡಿದ್ದಂತೆ ನೆನಪು. ಸಾಧ್ಯವಾದರೆ ಈ ಭಾಷಣವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ.

ಮುಂದೆ ಸಮಾಜವಾದಿಗಳು ಎಲ್ಲ ರೀತಿಯ ಪಕ್ಷಗಳನ್ನು ಸೇರಿಕೊಂಡು ಸರ್ಕಾರದಲ್ಲಿ ನಾನಾ ರೀತಿಯಲ್ಲಿ ಭಾಗಿಗಳಾದಾಗ ನೀವು ಪ್ರಕಟಿಸಿದ ವ್ಯಕ್ತಿಚಿತ್ರಗಳಿಗೆ ಕಾರಣರಾದ ಯಾರೂ ಕೂಡ ಮುಂಚೂಣಿಗೆ ಏಕೆ ಬರಲಿಲ್ಲವೆಂಬುದನ್ನು ಕೂಡ ನಾವು ಯೋಚಿಸಬೇಕು.

**–ಕೆ. ಸತ್ಯನಾರಾಯಣ,** ಬೆಂಗಳೂರು

# ಒಂದು ಶ್ರದ್ಧಾಂಜಲಿ : ಹ್ಯೂಗೋ ಚಾವೆಝ್ ಚಿರಾಯುವಾಗಲಿ!



**ವೆ**ನೆಜುವೇಲಾದ ಅಧ್ಯಕ್ಷ ಹ್ಯುಗೋ ಚಾವೆಝ್ ತನ್ನ ೫೮ರ ಹರೆಯದಲ್ಲಿ ನಿಧನರಾಗಿದ್ದಾರೆ. ಅದು ಅಕಾಲ ಮರಣವಾದರೂ ಅನಿರೀಕ್ಷಿತವಾಗಿರಲಿಲ್ಲ. ಕಳೆದ ಎರಡು ವರ್ಷಗಳಿಂದ ಅವರ ಕ್ಯಾನ್ಸರ್ ಉಲ್ಬಣಗೊಂಡಿತ್ತು. ಅವರಿಗೆ ಈ ವ್ಯಾಧಿ ತಗಲಿಕೊಂಡಿರುವುದಕ್ಕೆ ಅಮೇರಿಕ ಸರಕಾರದ ಗೂಢಚರ್ಯೆ ಸಂಸ್ಥೆ ಸಿ.ಐ.ಎ.ನ ಒಳಸಂಚು ಕಾರಣ ಎಂಬ ವದಂತಿಗಳಿವೆ. ವೆನೆಜುವೇಲಾ ಸರಕಾರ ಆ ಬಗ್ಗೆ ತನಿಖೆ ನಡೆಸುವುದಾಗಿ ಅಧಿಕೃತವಾಗಿ ಪ್ರಕಟಿಸಿದೆ. ಆ ವದಂತಿ ನಿಜವಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಅಮೇರಿಕಾ, ತನ್ನ ಬಂಡವಾಳಶಾಹಿ ಹಿತಾಸಕ್ತಿಗಳಿಗೆ ಅಡ್ಡಬರುವ ಜಾಗತಿಕ ನಾಯಕರನ್ನು ಒಳಸಂಚು, ವಿದ್ರೋಹ, ಅಪಪ್ರಚಾರ, ಮಿಲಿಟರಿ ದಂಗೆ ಮುಂತಾದ ಮಾರ್ಗಗಳಿಂದ ಅಧಿಕಾರದಿಂದ ಕಿತ್ತೊಗೆಯಲು ಪ್ರಯತ್ನಿಸುತ್ತದೆ; ಅದೂ ವಿಫಲವಾದರೆ ಅಂತಹ ನಾಯಕರನ್ನು ಕಗ್ಗೊಲೆ ಮಾಡಲು ಸಹ ಅಮೇರಿಕದ ತಥಾಕಥಿತ ಪ್ರಜಾಪ್ರಭುತ್ವ ಹಿಂದೆ ಮುಂದೆ ನೋಡುವುದಿಲ್ಲ ಎಂಬುದು ಈಗ ಎಲ್ಲರಿಗೂ ತಿಳಿದ ವಿಷಯವಾಗಿದೆ. ಬೊಲಿವಿಯಾದ ಚೆ ಗವಾರ, ಚಿಲಿಯ ಅಲೆಂಡೆ ಒಂದೆರಡು ಉದಾಹರಣೆಗಳಷ್ಟೆ. ಕ್ಯೂಬಾದ ಫಿಡಲ್ ಕ್ಯಾಸ್ಟ್ರೋನನ್ನು ಕೊಲ್ಲಲು ಕಳೆದ ಐವತ್ತು ವರ್ಷಗಳಲ್ಲಿ ಹತ್ತಾರು ಬಾರಿ ವಿಫಲ ಪ್ರಯತ್ನಗಳು ನಡೆದಿವೆ.

ದ. ಅಮೇರಿಕ ಖಂಡದಲ್ಲಿ ಸ್ಥಳೀಯ ಪಟ್ಟಭದ್ರರು ಮತ್ತು ಅಮೇರಿಕದ ಸಾಮ್ರಾಜ್ಯಶಾಹಿ ಒಟ್ಟಾಗಿ ನಡೆಸುತ್ತಿದ್ದ ಲೂಟಿ ಮತ್ತು ಇದರ ವಿರುದ್ಧ ಜನ ಸಂಘಟನೆಯಾಗದಂತೆ ನಡೆಸುತ್ತಿದ್ದ ದಬ್ಬಾಳಿಕೆಗೆ ತಡೆ ಒಡ್ಡುವ ಛಾತಿ ತೋರಿದವರು ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೊ. ೧೯೫೯ರ ಕ್ಯೂಬಾದ ಕ್ರಾಂತಿ ದ.ಅಮೇರಿಕದ ಹಲವು ದೇಶಗಳ ಜನರಿಗೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳಿಗಾಗಿ ಒಗ್ಗಟ್ಟಾಗಲು ಬಹು ದೊಡ್ಡ ಸ್ಫೂರ್ತಿಯಾಗಿದೆ. ಪರಿಣಾಮವಾಗಿ ಮೊನ್ನೆ ಮೊನ್ನೆಯವರೆಗೆ ಅಮೇರಿಕದ ಹಿತ್ತಲು ಎನ್ನಿಸಿಕೊಂಡಿದ್ದ ಅಲ್ಲಿನ ಬಹುಪಾಲು ದೇಶಗಳಲ್ಲಿ ಈಗ ಎಡ ಪಂಥೀಯ ಸರಕಾರಗಳಿವೆ. ಅವುಗಳ ಪೈಕಿ ಹ್ಯುಗೊ ಚಾವೆಝ್ ಅಧ್ಯಕ್ಷರಾಗಿದ್ದ ವೆನೆಜುವೇಲಾ ಕೂಡ ಒಂದು.

ರಾಜಕೀಯಕ್ಕೆ ಇಳಿಯುವ ಮೊದಲು ಚಾವೆಝ್ ಮಿಲಿಟರಿ ಅಧಿಕಾರಿಯಾಗಿದ್ದರು. ಆಗಲೇ ಅವರು, 'ಕ್ರಾಂತಿಕಾರಿ ಬೊಲಿವೇರಿಯನ್ ಚಳುವಳಿ' ಎಂಬ ರಹಸ್ಯ ಸಂಘಟನೆಯೊಂದನ್ನು ಹುಟ್ಟು ಹಾಕಿದ್ದರು. ಈ ಸಂಘಟನೆಯ ಆದರ್ಶ ನಾಯಕನಾಗಿದ್ದ ಸೈಮನ್ ದೆ ಬೊಲಿವಾರ್, ೧೯ನೆಯ ಶತಮಾನದಲ್ಲಿ ಯುರೋಪ್‌ನ ಮುಖ್ಯವಾಗಿ ಸ್ಪೇನ್‌ನ ವಸಹಾತುಶಾಹಿಯ ವಿರುದ್ಧ ಇಡೀ ದ.ಅಮೇರಿಕ ಖಂಡದ ಜನತೆಯ ಹೋರಾಟವನ್ನು ಸಂಘಟಿಸಿದವ. (ಮಾರ್ಕ್ವೆಝ್‌ನ ಕಾದಂಬರಿ *ದ ಜನರಲ್ ಇನ್ ಹಿಸ್ ಲ್ಯಾಬಿರಿಂತ್* ಈತನ ಬದುಕನ್ನು ಆಧರಿಸಿದೆ). ಬೊಲಿವಾರ್‌ನ ಸ್ಫೂರ್ತಿಯಲ್ಲಿ ಚಾವೆಝ್ ವೆನೆಜುವೇಲಾದ ಜನವಿರೋಧಿ ಹಾಗೂ ಸರ್ವಾಧಿಕಾರಿ ಸರಕಾರದ ವಿರುದ್ಧ ೧೯೯೨ರಲ್ಲಿ ಒಂದು ವಿಫಲ ಸೇನಾ ಬಂಡಾಯವನ್ನು ಸಹ ಸಂಘಟಿಸಿದರು. ಈ ಬಂಡಾಯದ ಕಾರಣಕ್ಕೆ ಎರಡು ವರ್ಷ ಸೆರೆಮನೆಯಲ್ಲಿದ್ದು ಹೊರಬಂದ ಚಾವೆಝ್ ನೇರವಾಗಿ ಪ್ರಜಾಸತ್ತಾತ್ಮಕ ಮಾರ್ಗದ ಜನಸಂಘಟನೆ ಮತ್ತು ಹೋರಾಟದ ರಾಜಕೀಯದಲ್ಲಿ ತೊಡಗಿದರು. ವೆನೆಜುವೇಲಾದ ಸಮಾಜವಾದಿ ಮತ್ತು ಎಡ ಪಕ್ಷಗಳ ಒಕ್ಕೂಟವಾದ ಯೂನೈಟೆಡ್ ಸೋಶಿಯಲಿಸ್ಟ್ ಪಾರ್ಟಿಯ ಜೊತೆ ತನ್ನ ಸಂಘಟನೆಯನ್ನು ಅವರು ವಿಲೀನಗೊಳಿಸಿದರು. ೧೯೯೮ರ ಚುನಾವಣೆಗಳಲ್ಲಿ ಈ ಪಕ್ಷ ಬಹುಮತಗಳಿಸಿ ಚಾವೆಝ್ ಅಧ್ಯಕ್ಷರಾಗಿ ಆಯ್ಕೆಯಾದರು. ಅಂದಿನಿಂದ ಚಾವೆಝ್ ಪ್ರತಿಯೊಂದು ಚುನಾವಣೆಯಲ್ಲಿಯೂ ಗೆಲ್ಲುತ್ತಲೇ ಬಂದಿದ್ದಾರೆ. ವೆನೆಜುವೇಲಾದ ಜನ, ಸತತವಾಗಿ, ಚಾವೆಝ್‌ನನ್ನು ಆಯ್ಕೆ ಮಾಡಿದರೂ, ಅಮೇರಿಕದ ಸರಕಾರ ಮತ್ತು ಅಲ್ಲಿನ ಮಾಧ್ಯಮಗಳ ಮಟ್ಟಿಗೆ ಈಗಲೂ ಆತ ಸರ್ವಾಧಿಕಾರಿ.

ಯಾಕೆಂದರೆ ಚಾವೆಝ್ ವೆನೆಜುವೇಲಾದ ತೈಲಸಂಪತ್ತಿನ ಮೇಲೆ ಅಮೇರಿಕದ ಏಕಸ್ವಾಮ್ಯವನ್ನು ಕೊನೆಗೊಳಿಸಿ, ಆ ಉದ್ಯಮದ ಅಪಾರ ಲಾಭವನ್ನು ತನ್ನ ದೇಶದ ಜನರ ಒಳಿತಿಗಾಗಿ ವಿನಿಯೋಗಿಸುವ ಧೈರ್ಯ ತೋರಿದರು. ಇಷ್ಟಕ್ಕೂ ವೆನೆಜುವೇಲಾದ ಈ ಚುನಾವಣೆ ಜಾರ್ಜ್ ಬುಷ್‌ನನ್ನು ಆಯ್ಕೆ ಮಾಡಿದ ೨೦೦೦ ಮತ್ತು ೨೦೦೪ರ ಅಮೇರಿಕದ ಅಧ್ಯಕ್ಷೀಯ ಚುನಾವಣೆಗಳಿಗಿಂತ ಹೆಚ್ಚು ನ್ಯಾಯಯುತವಾಗಿದ್ದವು! ಚಾವೆಝ್‌ಗಿಂತ ಮೊದಲು ೧೯೫೩ರಲ್ಲಿ ಇರಾನ್‌ನಲ್ಲಿ ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದ ಮೊಹಮ್ಮದ್ ಮೊಸಾಗ್ದೇಹ್ ನೇತೃತ್ವದ ಸಮಾಜವಾದಿ ಸರಕಾರವನ್ನು ಇಂತಹುದೇ ಕಾರಣಗಳಿಗಾಗಿ ಬ್ರಿಟನ್ ಹಾಗು ಅಮೇರಿಕಗಳ ಗೂಢಚರ್ಯೆಯ ಪಡೆಗಳ ಜೊತೆ ಇರಾನ್‌ನ ಸೈನ್ಯ ಮತ್ತು ಆಯೊತೊಲ್ಲಾಗಳು ಕೈ ಜೋಡಿಸಿ ಉರುಳಿಸಿದವು. ಇಂತಹದ್ದೇ ಒಂದು ಅಕ್ರಮ ಕೂಟ ವೆನೆಜುವೇಲಾದಲ್ಲಿ ಕೂಡ ಸಕ್ರಿಯವಾಗಿದೆ.

ಆದರೆ ಕಳೆದ ೧೪ ವರ್ಷಗಳಿಂದ ಚಾವೆಝ್ ಅವುಗಳ ಜೊತೆ ಏಗುತ್ತ ದೇಶದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಿದ್ದಾರೆ. ಅವರ ಅಪಾರ ಜನಪ್ರಿಯತೆ ಮತ್ತು ಸ್ವಲ್ಪ ಮಟ್ಟಿಗೆ ದೇಶದ ಸೈನ್ಯ ಪ್ರಜಾಪ್ರಭುತ್ವದ ಸರಕಾರಕ್ಕೆ ನಿಷ್ಠೆ ಹೊಂದಿರುವುದು, ಅವರ ಕೈಗಳನ್ನು ಬಲಪಡಿಸಿದೆ. ಕಳೆದ ೧೪ ವರ್ಷಗಳ ಚಾವೆಝ್ ಅಧಿಕಾರಾವಧಿಯಲ್ಲಿ ವೆನೆಜುವೇಲಾದ, ಮಾನವ ಅಭಿವೃದ್ಧಿಯ ಎಲ್ಲ ಸೂಚ್ಯಂಕಗಳೂ ಏರಿಕೆಗೊಂಡಿವೆ. ವಸತಿ, ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯಗಳ ಮೇಲಿನ ಸಾಮಾಜಿಕ ವೆಚ್ಚಗಳಲ್ಲಿ ೬೧% ಹೆಚ್ಚಳವಾಗಿದ್ದು, ಅವು ಈಗ ಎಲ್ಲ ಪ್ರಜೆಗಳಿಗೂ ಎಟಕುವಂತಾಗಿದೆ. ಅರಬ್ ರಾಷ್ಟ್ರಗಳನ್ನು ಬಿಟ್ಟರೆ ಅತಿ ಹೆಚ್ಚು ತೈಲ ನಕ್ಷೇಪವಿರುವುದು ವೆನೆಜುವೇಲಾದಲ್ಲಿ. ಅರಬ್ ರಾಷ್ಟ್ರಗಳ ತೈಲ ನಕ್ಷೇಪ, ಉದ್ಯಮ ಮತ್ತು ಅದರ ಲಾಭ ಎಲ್ಲವೂ ಅಮೇರಿಕದ ಒಡೆತನದಲ್ಲಿ ಇದ್ದರೆ, ವೆನೆಜುವೇಲಾದ ತೈಲ ಸಂಪತ್ತು, ಆ ದೇಶ ಮಾತ್ರವಲ್ಲ ದ.ಅಮೇರಿಕ ಖಂಡದ ವಿವಿಧ ದೇಶಗಳ ಜನರ ಕಲ್ಯಾಣಕ್ಕಾಗಿ ವಿನಯೋಗವಾಗುತ್ತಿದೆ. ಇದರ ಪರಿಣಾಮವಾಗಿ ದ.ಅಮೇರಿಕ ಖಂಡದ ಹೆಚ್ಚಿನ ದೇಶಗಳು ಈಗ ಅಮೇರಿಕದ ನಯಂತ್ರಣದಲ್ಲಿರುವ ಐ.ಎಂ.ಎಫ್. ಮತ್ತು ವರ್ಲ್ಡ್ ಬ್ಯಾಂಕ್ ಗಳ ಋಣದಿಂದ ಮುಕ್ತವಾಗಿವೆ.

ಆಸ್ತಿ ಮತ್ತು ಅಧಿಕಾರಗಳಿಂದ ಕೊಬ್ಬಿದ ಜನಗಳ ಹಿಡಿತದಲ್ಲಿರುವ ಮಾಧ್ಯಮಗಳು ಕಮ್ಯುನಿಸಂ ಮಾತ್ರವಲ್ಲ ಸಮಾಜವಾದ ಕೂಡ ನಿಧನಹೊಂದಿದೆ ಎಂಬ ಕಟ್ಟುಕತೆಯನ್ನು ಕಳೆದ ಕೆಲವು ವರ್ಷಗಳಿಂದ ಬಿತ್ತರಿಸುತ್ತಲೆ ಇವೆ. ನ್ಯಾಯದ ಹಂಬಲ ಮತ್ತು ಸಮಾನತೆಯ ಹಸಿವುಗಳನ್ನು ಜನ ಮರೆತು ನೆಮ್ಮದಿಯಾಗಿದ್ದಾರೆ ಎಂದು ಸಹ ಈ ಮಾಧ್ಯಮಗಳು ಪ್ರಚಾರ ಮಾಡುತ್ತಿವೆ. ಸಿರಿಯ ಗರ ಬಡಿದವರ ಭ್ರಮೆಗಳು ಅವು! ನ್ಯಾಯ ದೊರೆಯುವವರೆಗೂ ಜನ ಅದಕ್ಕೆ ಹಂಬಲಿಸುತ್ತಲೇ ಇರುತ್ತಾರೆ. ಸಮಾನತೆ ಬರುವವರೆಗೂ ಜನ ಅದಕ್ಕೋಸುಗ ಹೋರಾಡುತ್ತಲೇ ಇರುತ್ತಾರೆ. ಈ ಹೋರಾಟದ ಫಲವಾಗಿ ಚಾವೆಝ್ ನಂತಹ ನಾಯಕರು ರೂಪುಗೊಳ್ಳುತ್ತಾರೆ.

ಸಂಗಾತಿ ಚಾವೆಝ್ ಚಿರಾಯುವಾಗಲಿ!

**–ಜಿ.ರಾಜಶೇಖರ್**

## ಅರವಿಂದ ಕೇಜ್ರಿವಾಲ್ ಈಗ ಮಾಧ್ಯಮಗಳಿಂದ ಏಕೆ ಕಾಣೆಯಾಗಿದ್ದಾರೆ?

# ಮುಖೇಶ್ ಅಂಬಾನಿ ಮತ್ತು ಮಾಧ್ಯಮಗಳು: ಒಂದು ಪತ್ರ

**ಅಂಬಾನಿಗಳ ವಿರುದ್ಧದ ನಮ್ಮ ಪತ್ರಿಕಾಗೋಷ್ಠಿಗಳನ್ನು ಪ್ರಸಾರ ಮಾಡಿದ್ದಕ್ಕಾಗಿ ಅವರು ಮಾಧ್ಯಮಗಳಿಗೆ ಬೆದರಿಕೆ ಹಾಕಿದ ಸಂದರ್ಭದಲ್ಲಿ ಅರವಿಂದ ಕ್ರೇಜಿವಾಲರು ಮುಖೇಶ್ ಅಂಬಾನಿಗೆ ಬರೆದ ಪತ್ರವನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ. ಅದು ನಿಮಗೆ ಆಸಕ್ತಿದಾಯಕವಾಗಿರಬಹುದು. ಈ ಪತ್ರವನ್ನು ಇ-ಮೇಲ್ ಮತ್ತು ಅಂತರ್ಜಾಲದ ಮೂಲಕ ವ್ಯಾಪಕವಾಗಿ ಪ್ರಸಾರ ಮಾಡಬೇಕಾದ ಅಗತ್ಯವಿದೆ, ಏಕೆಂದರೆ ಹಿಂದೂ ಪತ್ರಿಕೆಯನ್ನು ಹೊರತುಪಡಿಸಿ ಮಿಕ್ಕೆಲ್ಲಾ ಮುಖ್ಯವಾಹಿನ ಮಾಧ್ಯಮಗಳು ಇದನ್ನು ಪ್ರಸಾರ ಮಾಡಲು ಭಯಪಟ್ಟಂತೆ ಕಾಣುತ್ತದೆ. -ಪ್ರಶಾಂತ್ ಭೂಷಣ್**



ಪ್ರಿಯ ಮುಖೇಶ್ ಅಂಬಾನಿ,

ನೀವು ಇತ್ತೀಚೆಗೆ ಹಲವಾರು ಟಿ.ವಿ ಚಾನಲ್‌ಗಳಿಗೆ ಮಾನನಷ್ಟ ಮೊಕದ್ದಮೆಯ ನೋಟೀಸ್ ಕಳುಹಿಸಿದ್ದೀರಿ. ಈ ಚಾನಲ್‌ಗಳು ಮಾಡಿದ 'ಅಪರಾಧ' ಎಂದರೆ ೩೧, ಅಕ್ಟೋಬರ್ ೨೦೧೨ ಮತ್ತು ೯, ನವೆಂಬರ್ ೨೦೧೨ರಂದು ನಡೆದ ನಮ್ಮ ಪತ್ರಿಕಾ ಗೋಷ್ಠಿಯನ್ನು ನೇರ ಪ್ರಸಾರ ಮಾಡಿದ್ದು, ನೈಸರ್ಗಿಕ ಅನಿಲದ ಬೆಲೆಯನ್ನು ಏರಿಸುವಂತೆ ಕಾನೂನು ಬಾಹಿರ ರೀತಿಯಲ್ಲಿ ನೀವು ಹೇಗೆ ಸರ್ಕಾರದ ಮೇಲೆ ಒತ್ತಡ ಹೇರಿದ್ದೀರಿ ಎಂಬುದನ್ನು ನಮ್ಮ ಪತ್ರಿಕಾ ಗೋಷ್ಠಿಯಲ್ಲಿ ನಾವು ದೇಶದ ಮುಂದೆ ಪ್ರಸ್ತುತಪಡಿಸಿದೆವು. ನಿಮ್ಮ ಕಂಪನಿಗಳು ಮತ್ತು ನಿಮ್ಮ ಸಹಯೋಗಿಗಳು ಸ್ವಿಸ್ ಬ್ಯಾಂಕ್‌ನಲ್ಲಿ ಖಾತೆಗಳನ್ನು ಹೊಂದಿದ್ದು, ಅಲ್ಲಿ ಹೇಗೆ ಕಪ್ಪು ಹಣವನ್ನು ಹುದುಗಿಸಿದ್ದೀರಿ ಎಂಬುದನ್ನು ದೇಶಕ್ಕೆ ತಿಳಿಸಿದ್ದೆವು. ಹಲವು ಟಿ.ವಿ ಚಾನಲ್‌ಗಳು ನಾವು ಬಯಲುಗೊಳಿಸಿದ ವಿಚಾರವನ್ನು ನೇರ ಪ್ರಸಾರ ಮಾಡಿದ್ದವು. ಈ ಎಲ್ಲಾ ಟಿ.ವಿ ಚಾನಲ್‌ಗಳಿಗೂ ನಿಮ್ಮಿಂದ ಮಾನನಷ್ಟ ನೋಟೀಸ್ ಬಂದಿರುತ್ತದೆ.

ಇದೊಂದು ವಿಚಿತ್ರ, ನಾನು ಮತ್ತು ಪ್ರಶಾಂತ ಭೂಷಣ್ ಏನು ಹೇಳಿದೆವೋ ಅದರಿಂದ ಮಾನ ನಷ್ಟ ಉಂಟಾಗಿದೆ ಎಂದು ನಿಮಗೆ ಅನ್ನಿಸಿದ್ದರೆ ನಾವು ನಿಜವಾದ ಆರೋಪಿಗಳಾಗಬೇಕು. ನೀವು ಮಾನನಷ್ಟ ನೋಟೀಸ್ ಕಳುಹಿಸಬೇಕಾಗಿದ್ದರೆ ಅದನ್ನು ನಮಗೆ ಕಳುಹಿಸಬೇಕು. ನಮ್ಮ ಹೇಳಿಕೆಗಳನ್ನು ಪ್ರಸಾರ ಮಾಡಿದ್ದಷ್ಟೇ ಟಿವಿ ಚಾನಲ್‌ಗಳು ಮಾಡಿರುವ ಕೆಲಸ. ಆದರೂ ನಮಗೆ ನೋಟೀಸ್ ಕಳುಹಿಸುವುದಕ್ಕೆ ಪ್ರತಿಯಾಗಿ ಟಿವಿ ಚಾನಲ್‌ಗಳಿಗೆ ನೋಟೀಸ್ ಕಳುಹಿಸಿದ್ದೀರಿ. ಈ ಟಿವಿ ಚಾನಲ್‌ಗಳಿಗೆ ನೋಟೀಸ್ ಕಳುಹಿಸುವುದರ ಹಿಂದಿನ ನಿಮ್ಮ ಏಕೈಕ ಉದ್ದೇಶವೆಂದರೆ ನಿಮ್ಮ ಗುಲಾಮರಾಗುವಂತೆ ಅವುಗಳನ್ನು ತುಳಿಯುವುದೇ ಆಗಿದೆ.

**ಅದೇನೇ ಇರಲಿ, ಭಾರತದ ಜನತೆ ನಿಮ್ಮನ್ನು ಕೆಲವು ನೇರವಾಗಿ ಪ್ರಶ್ನೆಗಳನ್ನು ಕೇಳಬಯಸುತ್ತದೆ:**

ಭಾರತ ಸರ್ಕಾರಕ್ಕೆ ತಲುಪಿರುವ ಸ್ವಿಸ್ ಬ್ಯಾಂಕ್ ಖಾತೆದಾರರ ಪಟ್ಟಿಯಲ್ಲಿ ನಿಮ್ಮ, ನಿಮ್ಮ ಸಂಬಂಧಿಕರ, ನಿಮ್ಮ ಸ್ನೇಹಿತರ ಮತ್ತು ನಿಮ್ಮ ಕಂಪನಿಗಳ ಹೆಸರುಗಳು ಇರುವುದು ನಿಜವಲ್ಲವೆ? ನಿಮ್ಮ ಹೆಸರಿನಲ್ಲಿ ೧೦೦ ಕೋಟಿ ರೂಪಾಯಿಗಳ ಹಣವಿರುವುದನ್ನು ಈ ಪಟ್ಟಿಯಲ್ಲಿ ತೋರಿಸಿಲ್ಲವೆ? ಸರ್ಕಾರಕ್ಕೆ ಈ ಪಟ್ಟಿ ತಲುಪಿದ ನಂತರ ನೀವು ಈ ಹಣಕ್ಕೆ ತೆರಿಗೆ ಸಲ್ಲಿಸಿರುವುದು ನಿಜವಲ್ಲವೆ?

ನಾವು ಅನುಮಾನಿಸಿದಂತೆ ಈ ಮೇಲಿನ ಆಪಾದನೆ ನಿಜವಾಗಿದ್ದಲ್ಲಿ ನೀವು ನಿಮ್ಮ ತಪ್ಪನ್ನು ಒಪ್ಪಿಕೊಂಡಂತೆ. ಈ ನೆಲದ ಕಾನೂನಿನ ಪ್ರಕಾರ ನಿಮ್ಮ ವಿಚಾರಣೆ ನಡೆಯಬೇಕು. ತೆರಿಗೆ ತಪ್ಪಿಸಿರುವ ಆಪಾದನೆ ಸಾಬೀತಾದಲ್ಲಿ ನಿಮ್ಮನ್ನು ಜೈಲಿಗೆ ಕಳುಹಿಸಬೇಕು.



ಆದರೆ ಇದು ಎಂದೂ ಸಾಧ್ಯವಾಗದು. ಏಕೆ? ಏಕೆಂದರೆ ಭಾರತ ಸರ್ಕಾರವು ನಿಮ್ಮಿಂದ ಹೆದರಿಸಲ್ಪಟ್ಟಿದೆ. ನೀವು ಕಾಂಗ್ರೆಸ್ ಪಕ್ಷವನ್ನೇ ಕೊಂಡುಕೊಂಡಿರುವುದಾಗಿ-ನಿಖರವಾಗಿ ಹೇಳುವುದಾದರೆ ಅದು ನಿಮ್ಮ ದುಕಾನು- ಎಂದು ನೀವೇ ಹೇಳಿಕೊಂಡಿರುವುದಾಗಿ ವರದಿಯಾಗಿದೆ. ನೀವು ಹೇಳುವುದು ನಿಜ. ಕೆಲವು ಮಾಧ್ಯಮಗಳ ವರದಿಗಳ ಪ್ರಕಾರ ಶ್ರೀಮತಿ ಸೋನಿಯಾ ಗಾಂಧಿಯವರು ಕೆಲವು ಸಲ ನಿಮ್ಮ ಖಾಸಗಿ ವಿಮಾನದಲ್ಲಿ ಪ್ರಯಾಣ ಮಾಡುತ್ತಾರೆ. ಜಯಪಾಲ ರೆಡ್ಡಿಯವರ ಖಾತೆ ಬದಲಾಗಿದ್ದು ಕೂಡ ನಿಮ್ಮಿಂದಲೇ ಎಂಬುದಾಗಿ ಜನ ನಂಬುತ್ತಾರೆ.

ಕಾಂಗ್ರೆಸ್ ಮಾತ್ರ ಏಕೆ? ಬಿಜೆಪಿ ಮತ್ತು ಇತರೆ ಹಲವು ಪಕ್ಷಗಳೂ ನಿಮ್ಮ ಜೇಬಿನಲ್ಲಿವೆ. ಹಿಂದೆಲ್ಲಾ ಅದ್ವಾನಿಯವರು ಸ್ವಿಸ್‌ಬ್ಯಾಂಕ್ ಖಾತೆಯ ಬಗ್ಗೆ ಭಾರೀ ಗದ್ದಲ ಎಬ್ಬಿಸುತ್ತಿದ್ದರು. ಆದರೆ ನಿಮ್ಮ ಖಾತೆಗಳು ಬಹಿರಂಗವಾದ ಮೇಲೆ ಬಿಜೆಪಿಯು ಇದ್ದಕ್ಕಿದ್ದಂತೆ ಮೌನ ವಹಿಸಿ ಬಿಟ್ಟಿದೆ. ನಿಮ್ಮ ಸ್ವಿಸ್ ಬ್ಯಾಂಕ್ ಖಾತೆಯನ್ನು ಕುರಿತು ಬಿಜೆಪಿಯು ಪಾರ್ಲಿಮೆಂಟಿನಲ್ಲಿ ಒಂದೇ ಒಂದು ಮಾತೂ ಆಡಿಲ್ಲ.

ಬಹುತೇಕ ಎಲ್ಲಾ ಪಕ್ಷಗಳು ನಿಮಗೆ ಹೆದರಿಕೊಂಡಂತೆ ಕಾಣುತ್ತದೆ. ಬಹಳಷ್ಟು ನಾಯಕರು ನಿಮ್ಮ ಬಗ್ಗೆಯೂ ಭೀತರಾಗಿದ್ದಾರೆ. ಆದರೆ ಈ ದೇಶದ ಪ್ರಜೆಗಳಿಗೆ ನಿಮ್ಮ ಬಗ್ಗೆ ಹೆದರಿಕೆಯಿಲ್ಲ. ಎಲ್ಲ ಪಕ್ಷಗಳು ನಿಮ್ಮ 'ದುಕಾನು' ಆಗಿರಬಹುದು. ಆದರೆ ಭಾರತ ದೇಶ ಮಾರಾಟಕ್ಕಿಲ್ಲ. ಭಾರತ ನಮ್ಮದು. ಅದು ಈ ದೇಶದ ಜನಕ್ಕೆ ಸೇರಿದ್ದು, ನಿಮ್ಮ ಹಣದಿಂದ ನೀವು ರಾಜಕೀಯ ಪಕ್ಷಗಳನ್ನು, ನಾಯಕರನ್ನು ಕೊಂಡುಕೊಳ್ಳಬಹುದು. ಆದರೆ ಭಾರತವನ್ನು ಕೊಳ್ಳಲು ಕೊರ್ಳಳುವುದಕ್ಕೆ ನಾವು ಬಿಡುವುದಿಲ್ಲ.

ಟಿವಿ ಚಾನಲ್‌ಗಳು ನಮ್ಮ ಪತ್ರಿಕಾಗೋಷ್ಠಿಯನ್ನು ನೇರಪ್ರಸಾರ ಮಾಡುವ ಮೂಲಕ ನಿಮ್ಮ ಘನತೆಗೆ ಕುಂದುಂಟು ಮಾಡಿರುವವೆಂದು ನೀವು ಹೇಳುತ್ತೀರಿ. ಅದು ತಪ್ಪು. ಈ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ನಾವು ನಿಮ್ಮನ್ನು ಒತ್ತಾಯಿಸುತ್ತೇವೆ. ಪ್ರಶಾಂತ ಭೂಷಣ್, ನಾನು ಮತ್ತು ಟಿವಿ ಚಾನಲ್‌ಗಳು ನಿಮ್ಮ ಮಾನನಷ್ಟ ಉಂಟು ಮಾಡಿದ್ದೇವೆಯೋ ಅಥವಾ ನಿಮ್ಮ ಕುಕೃತ್ಯಗಳಿಂದ ನಿಮಗೆ ನೀವೇ ಮಾನನಷ್ಟವುಂಟು ಮಾಡಿಕೊಂಡಿದ್ದೀರೋ ಹೇಳಿ:

೧. ೨೦೦೧ರಲ್ಲಿ ಮಾರುಕಟ್ಟೆಯಲ್ಲಿ ನಿಮ್ಮ ಕಂಪನಿಯ ಪ್ರತಿ ಶೇರಿಗೆ ೫೫ ರೂ ಬೆಲೆಯಿದ್ದ ೧ ಕೋಟಿ ಶೇರುಗಳನ್ನು ಕೇವಲ ಶೇರಿಗೆ ೧ ರೂ.ನಂತೆ ಪ್ರಮೋದ್ ಮಹಾಜನ್ ಅವರಿಗೆ ನೀವು ಕೊಟ್ಟಿರಿ. ದೂರಸಂಪರ್ಕ ತರಂಗಾಂತರದ 'ಪೂರ್ಣ ಚಲನಶೀಲತೆ'ಗಾಗಿ ಗಾಗಿ ನೀವು ನೀಡಿದ ಲಂಚವದು. ನೀವು ಸಿಕ್ಕುಹಾಕಿಕೊಂಡಾಗ ಶೇರುಗಳನ್ನು ಹಿಂದಕ್ಕೆ ಪಡೆದಿರಿ. ಪ್ರಸ್ತುತ ಈ ವಿಚಾರ ನ್ಯಾಯಾಲಯದ ಮುಂದಿದೆ. ಈ ಕೃತ್ಯವನ್ನು

ಎಸಗುವುದರ ಮೂಲಕ ನಮಗೆ ನೀವೇ ಮಾನನಷ್ಟವುಂಟು ಮಾಡಿಕೊಂಡಿಲ್ಲವೇ?

೨. ವಕ್ಫ್‌ಗೆ ಸೇರಿದ ಭೂಮಿಯ ಮೇಲೆ ನೀವು ನಿಮ್ಮ ಬಹುಮಹಡಿಯ ಮನೆಯನ್ನು ನಿರ್ಮಿಸಿಕೊಂಡಿದ್ದೀರಿ. ಒಂದು ಅನಾಥಾಶ್ರಮಕ್ಕಾಗಿ ಈ ಭೂಮಿಯನ್ನು ಮೀಸಲಿರಿಸಲಾಗಿತ್ತು. ಬಡ ಅನಾಥ ಮುಸ್ಲಿಂ ಮಕ್ಕಳ ಹಕ್ಕುಗಳನ್ನು ನೀವು ಕಸಿದುಕೊಂಡಿದ್ದೀರಿ. ಈ ಕೃತ್ಯವನ್ನು ಎಸಗುವುದರ ಮೂಲಕ ನೀವು ನಿಮ್ಮ ಮಾನನಷ್ಟವುಂಟು ಮಾಡಿಕೊಂಡಿಲ್ಲವೇ ?

೩. ಈ ದೇಶಕ್ಕೆ ಸೇರಿದ ಕೆಲವು ಅನಿಲ ಬಾವಿಗಳನ್ನು ೨೦೦೦ನೇ ಇಸವಿಯಲ್ಲಿ ನಿಮಗೆ ವಹಿಸಲಾಯಿತು ಅನಿಲವನ್ನು ತೆಗೆದು ಸರ್ಕಾರಕ್ಕೆ ಕೊಡುವುದು ನಿಮ್ಮ ಕೆಲಸವಾಗಿತ್ತು. ಈ ಅನಿಲ ನಿಮಗೆ ಅಂದರೆ ಭಾರತದ ಜನತೆಗೆ ಸೇರಿದ್ದು, ನಾವು ಈ ಅನಿಲದ ಒಡೆಯರು. ಈ ಅನಿಲವನ್ನು ಹೊರ ತೆಗೆಯಲು ನಿಯಮಿಸಲ್ಪಟ್ಟ ಗುತ್ತಿಗೆದಾರರು ಮಾತ್ರ ನೀವಾಗಿದ್ದಿರಿ. ಆದರೆ ಜಾಣತನದಿಂದ ನೀವೇ ಈ ಅನಿಲದ ಒಡೆಯರಾದಿರಿ. ನೀವು ಅನಿಲವನ್ನು ಸರ್ಕಾರಕ್ಕೆ ಮಾರತೊಡಗಿದಿರಿ.

ಕಾಂಗ್ರೆಸ್ ನಿಮ್ಮ ಜೇಬಿನಲ್ಲಿರುವುದರಿಂದ ಅದು ನಿಮ್ಮ ಪುಂಡಾಟಕ್ಕೆ ಸದಾ ಮಣಿಯುತ್ತದೆ. ನಿಮ್ಮ ಒತ್ತಡದಿಂದಾಗಿ ಅನಿಲದ ಬೆಲೆಯನ್ನು ಕಾಂಗ್ರೆಸ್ ಸರ್ಕಾರ ಏರಿಸುತ್ತಲೇ ಹೋಯಿತು. ದೇಶ ಅದನ್ನು ಅನುಭವಿಸುತ್ತಿದೆ. ನಿಮ್ಮಿಂದಾಗಿ ವಿದ್ಯುತ್, ರಸಗೊಬ್ಬರ ಮತ್ತು ಅಡುಗೆ ಅನಿಲದ ಬೆಲೆ ಏರತೊಡಗಿತು. ಇದೆಲ್ಲ ಮಿತಿ ಮೀರಿದಾಗ ಜಯಪಾಲ ರೆಡ್ಡಿಯವರು ನಿಮ್ಮನ್ನು ವಿರೋಧಿಸಿದರು. ಆ ಸಮಯದಲ್ಲಿ ಅವರು ತೈಲ ಮತ್ತು ಅನಿಲ ಖಾತೆಯ ಮಂತ್ರಿಯಾಗಿದ್ದರು. ನೀವು ಜಯಪಾಲ ರೆಡ್ಡಿಯವರನ್ನು ವರ್ಗಾವಣೆ ಮಾಡಿಸಿದಿರಿ. ನಿಮ್ಮಿಂದಾಗಿ ಭಾರತದಲ್ಲಿ ಹಲವು ವಸ್ತುಗಳು ವಿಪರೀತ ತುಟ್ಟಿಯಾಗಿವೆ. ಈ ಅಧಿಕ ಬೆಲೆಯ ಭಾರಕ್ಕೆ ಭಾರತದ ಜನತೆ ನಲುಗಿಹೋಗಿದೆ. ಈ ಅಪಚಾರಗಳು ನಿಮಗೆ ಶೋಭೆ ತರುವಂತಿವೆಯೇ? ಇಂಥ ಕೃತ್ಯಗಳು ನಿಮ್ಮ ಮಾನನಷ್ಟವುಂಟು ಮಾಡುವುದಿಲ್ಲವೇ ?

**ನಿಮ್ಮ ಈ ಬಗೆಯ ಕಾನೂನು ಬಾಹಿರ ಕೃತ್ಯಗಳ ಪಟ್ಟಿ ಬಹಳ ದೊಡ್ಡದಿದೆ.**

ಬಹುಪಾಲು ದಲ್ಲಾಳಿಗಳು, ವ್ಯಾಪಾರಸ್ಥರು ಮತ್ತು ಉದ್ದಿಮೆದಾರರು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಲು ಬಯಸುತ್ತಾರೆ. ಆದರೆ ವ್ಯವಸ್ಥೆಯು ಅವರನ್ನು ತಪ್ಪು ಮಾಡುವಂತೆ ಒತ್ತಾಯಿಸುತ್ತದೆ. ಆದರೆ ನಿಮ್ಮಂಥ ಒಬ್ಬ ವ್ಯಾಪಾರಿಯು ಸ್ವಂತ ಲಾಭಕ್ಕಾಗಿ ಭಂಡತನದಿಂದ ವ್ಯವಸ್ಥೆಯನ್ನೇ ಬುಡಮೇಲು ಮಾಡಿದಾಗ ಇಡೀ ಕೈಗಾರಿಕೆ ಮತ್ತು ವ್ಯಾಪಾರಕ್ಕೇ ಕೆಟ್ಟ ಹೆಸರು ಬರುತ್ತದೆ.

ಒಂದು ಕಡೆ ಅಪಾರ ಐಶ್ವರ್ಯದೊಂದಿಗೆ ನೀವು ಇದ್ದೀರಿ, ಇನ್ನೊಂದು ಕಡೆ ಈ ದೇಶದ ಜನರಿದ್ದಾರೆ. ಜನ ಈಗ ಎಚ್ಚೆತ್ತಿದ್ದಾರೆ. ಅವರ ಹೃದಯಗಳಲ್ಲಿ ಜ್ವಾಲೆ ಭುಗಿಲೆದ್ದಿದೆ. ಯಾವ್ಯಾವಾಗ ಹಣ ಮತ್ತು ಜನತೆಯ ಸಿಟ್ಟುಗಳ ನಡುವೆ ಘರ್ಷಣೆ ಉಂಟಾಗಿದೆಯೋ ಆಗೆಲ್ಲ ಜನರ ಸಿಟ್ಟು ಗೆದ್ದಿದೆ ಎಂಬುದಕ್ಕೆ ಇತಿಹಾಸದಲ್ಲಿ ನಿದರ್ಶನಗಳುಂಟು.

ಈ ದೇಶದ ಮಾಧ್ಯಮಗಳನ್ನು ಬೆದರಿಸುವ ಪ್ರಯತ್ನ ಮಾಡಬೇಡಿ. ಸ್ವತಃ ತಾವೇ ತಪ್ಪುಗಳನ್ನು ಎಸಗಿರುವ ಕೆಲವು ಮಾಧ್ಯಮದ ಜನರಿರಬಹುದು. ಇಂಥ ಮಾಧ್ಯಮದ ಜನರು ನಿಮ್ಮ ಒತ್ತಡಕ್ಕೆ ಮಣಿಯಬಹುದು. ಆದರೆ ಬಹುಪಾಲು ಮಾಧ್ಯಮದ ಜನ ರಾಷ್ಟ್ರಹಿತವನ್ನು ಇಂದಿಗೂ ತಮ್ಮ ಹೃದಯಗಳಲ್ಲಿ ಇರಿಸಿಕೊಂಡಿದ್ದಾರೆ. ಅವರು ಅಷ್ಟು ಸುಲಭವಾಗಿ ಶರಣಾಗತರಾಗುವವರಲ್ಲ, ಯಾವ್ಯಾವಾಗ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಕುಸಿದು ಬಿದ್ದಿವೆಯೋ ಆಗೆಲ್ಲ ಈ ಬಗೆಯ ಪ್ರಾಮಾಣಿಕ ವ್ಯಕ್ತಿಗಳಿರುವ ಸಂವಿಧಾನದ ನಾಲ್ಕನೆಯ ಕಂಭವೇ ಪ್ರಜಾಪ್ರಭುತ್ವದ ಸೌಧ ಕುಸಿಯದಂತೆ ರಕ್ಷಿಸದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿ.

ನೀವು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕೆಲವು ಮಾಧ್ಯಮ ಸಂಬಂಧಿ ವ್ಯವಹಾರಗಳಲ್ಲಿ ಹಣ ಹೂಡಿದ್ದೀರಿ. ಈ ಮಾಧ್ಯಮ ಕುಟುಂಬಗಳು ನಿಮ್ಮ ಮಾತನ್ನು ಪಾಲಿಸಬಹುದು ಆದರೆ ಈ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಪತ್ರಕರ್ತರು ಸುಲಭಕ್ಕೆ ತಮ್ಮ ಪ್ರಮಾಣಿಕತೆಯನ್ನು ಮಾರಿಕೊಳ್ಳುವವರಲ್ಲ ಎಂದು ನಾನು ನಂಬಿದ್ದೇನೆ.

ನಿಮ್ಮ ಕನಸೇನು? ಅಪ್ರಮಾಣಿಕ ವಿಧಾನದಿಂದ ನೀವು ಪ್ರಪಂಚದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಬಯಸುತ್ತೀರಾ? ಈ ದೇಶದ ಸಕಲ ಸಂಪತ್ತಿಗೂ ನೀವೇ ಒಡೆಯರಾದಿರೆಂದು ಭಾವಿಸೋಣ, ಅದು ನಿಮ್ಮನ್ನು ಖುಷಿ ಪಡಿಸುತ್ತದೆಯೇ? ಹೆಚ್ಚು ಹೆಚ್ಚು ಸಂಪತ್ತನ್ನು ಕೂಡಿಡುವುದರಿಂದ ಸಂತೋಷ ಹೆಚ್ಚುವುದಿಲ್ಲ. ಸಂತೋಷ ಬರುವುದು ತ್ಯಾಗದಿಂದಲೇ, ನೀವು ಅಪ್ರಮಾಣಿಕ ರೀತಿಯಲ್ಲಿ ವ್ಯಾಪಾರ ನಡೆಸುವುದನ್ನು ನಿಲ್ಲಿಸಿ ಈ ದೇಶದ ಏಳಿಗೆಗಾಗಿ ನಿಮ್ಮ ಸಂಪತ್ತನ್ನು ಕೊಡುಗೆಯಾಗಿ ನೀಡಿದರೆ ಈ ದೇಶವು ಹೆಮ್ಮೆಯಿಂದ ನಿಮ್ಮನ್ನು ಎಂದಿಗೂ ಸ್ಮರಿಸುತ್ತಿರುತ್ತದೆ.

ಆದರಗಳೊಂದಿಗೆ

**ಅರವಿಂದ ಕೇಜ್ರಿವಾಲ್**

---

# ಯೂರೋಪಿನ ಕಣ್ಣಲ್ಲಿ ಇಂದಿನ ಭಾರತ

**ಜರ್ಮನಿಯ ಕೊಲೋನ್‌ನಲ್ಲಿ ವಾಸಿಸುವ ಭಾರತದ ಕೈಗಾರಿಕಾ ಮಂಡಳಿಯ ಈ ಹಿಂದಿನ ಯೂರೋಪ್ ನಿರ್ದೇಶಕರಾದ ಮೋಹನ್ ಮಾರುತಿಯವರ ಈ ಲೇಖನವನ್ನು ಓದುವ ಶ್ರಮವಹಿಸಿ... ಸತ್ಯವನ್ನು ಎದುರಿಸುವುದು ಸಾಮಾನ್ಯವಾಗಿ ಬಹಳ ಕಷ್ಟ. ಆದರೆ...** –ಸಂ

**ಜ**ರ್ಮನ್ ಭಾಷೆ ಮಾತನಾಡುವ ಯೂರೋಪ್‌ನ ಭಾಗದಲ್ಲಿ ಅತ್ಯಂತ ಪ್ರತಿಷ್ಠೆ ಹೊಂದಿರುವಂತಹ ಯೂರೋಫೋರಂ ಮತ್ತು ಹ್ಯಾಂಡಲ್‌ಸಬ್ಲಾಟ್ ಎಂಬ ಪತ್ರಿಕೆಗಳು 'ಉದ್ಯಮಗಳ ವಿಲೀನ ಮತ್ತು ಮತ್ತು ವಶೀಕರಣ' ಎಂಬ ವಿಷಯದ ಬಗ್ಗೆ ಆಯೋಜಿಸಿದ್ದ ಚರ್ಚೆಯಲ್ಲಿ ಕೆಲವು ದಿನಗಳ ಹಿಂದೆ ನಾನು ಪಾಲ್ಗೊಂಡಿದ್ದೆ.. ಭಾರತದಲ್ಲಿನ ಎರಡು ಬಹುದೊಡ್ಡ ಕಾರು ಉತ್ಪಾದಕ ಬಹುರಾಷ್ಟ್ರೀಯ ಕಂಪನಿಗಳ ಮತ್ತು ಎರಡು ಬಹುದೊಡ್ಡ ವಿಮಾ ಕಂಪನಿಗಳ ವರಿಷ್ಠ ಅಧಿಕಾರಿಗಳು ಈ ವೇದಿಕೆಯ ಇತರೆ ಸದಸ್ಯರಾಗಿದ್ದರು.

ಯುರೋಪಿನ ಪ್ರತಿಷ್ಠಿತ ವಾಣಿಜ್ಯ ಶಾಲೆಯ ಪ್ರೊಫೆಸರ್ ಒಬ್ಬರು ಈ ಚರ್ಚೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ನೂರಕ್ಕಿಂತ ಹೆಚ್ಚು ಪ್ರಖ್ಯಾತ ಕಂಪನಿಗಳ ಮುಖ್ಯ ಆಡಳಿತಾಧಿಕಾರಿಗಳು ಸಭಾಂಗಣದಲ್ಲಿ ನೆರೆದಿದ್ದರೂ ನಾನು ಮಾತ್ರ ಅಲ್ಲಿದ್ದ ಏಕೈಕ ಭಾರತೀಯನಾಗಿದ್ದೆ.

ಚರ್ಚೆಯ ನಂತರ ಪ್ರಶ್ನೆಗಳಿಗೆ ಅವಕಾಶವಿತ್ತು, ಅವರಲ್ಲಿ ಭಾರತದಲ್ಲಿನ ಭ್ರಷ್ಟಾಚಾರವೆಂಬ ಪೆಡಂಭೂತದ ಭೂತದ ಬಗೆಗಿನ ತಮ್ಮ ಅನುಭವಗಳನ್ನು ಕುರಿತು ಮಾತನಾಡಿ, ಪ್ರಶ್ನೆಗಳನ್ನು ಕೇಳಿದಾಗ, ನನ್ನ ಸತ್ಯದ ಕ್ಷಣಗಳು ಅವಮಾನ ಮತ್ತು ಮುಜುಗರದ ಕ್ಷಣಗಳಾಗಿ ಪರಿಣಮಿಸಿವು. ನಾನು ಅನುಭವಿಸಿದ ಮುಜುಗರ ಮತ್ತು ಅವಮಾನಗಳು ಜನಪ್ರಿಯ ಆಂಗ್ಲೋ ಅಮೇರಿಕದಆಟವಾದ 'ಸತ್ಯದ ಕ್ಷಣ'ವನ್ನು ನೆನಪಿಗೆ ತಂದವು. ನಾನು ಪ್ರಾಮಾಣಿಕವಾಗಿ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಂತೆ

ಪ್ರಶ್ನೆಗಳು ಮತ್ತೂ ಕಠಿಣವಾಗತೊಡಗಿದವು. ಇಲ್ಲಿ ಕಠಿಣ ಎಂದರೆ ಮುಜುಗರವುಂಟು ಮಾಡುವಂಥದ್ದು ಎಂದರ್ಥ.

**ಯೂರೋಪಿನ ಅಸಮಧಾನ :** ನಿಮ್ಮ ದೇಶವು ಕೋಮಾದಲ್ಲಿದೆಯೇ ಎಂಬುದರಿಂದ ಪ್ರಾರಂಭವಾಗಿ ಆಡಳಿತದಲ್ಲಿ ಭ್ರಷ್ಟಾಚಾರ, ನ್ಯಾಯಾಂಗದಲ್ಲಿ ಭ್ರಷ್ಟಾಚಾರ, ನ್ಯಾಯಾಧೀಶರೊಬ್ಬರ ವರ್ತನೆಯ ಬಗೆಗಿನ ಸಂಭವನೀಯ ವಿಚಾರಣೆ, ಟೆಲಿಕಾಂ ಹಗರಣ, ತೆರಿಗೆಗಳ್ಳರ ಆಶ್ರಯ ತಾಣಗಳಲ್ಲಿ ಅಡಗಿಸಿಟ್ಟ ಬಿಲಿಯನ್‌ಗಟ್ಟಲೆ ಹಣ ಹೀಗೆ ಪ್ರಶ್ನೆಗಳು ವೈವಿಧ್ಯಮಯವಾಗಿದ್ದವು.

ಭ್ರಷ್ಟಾಚಾರವು ದಶಕಗಳಿಂದ ನಮ್ಮಲ್ಲಿದ್ದರೂ ಅದು ಇತ್ತೀಚಿನ ವರ್ಷಗಳಲ್ಲಿ ಮುಜುಗರವುಂಟು ಮಾಡುವಷ್ಟು ಭಾರೀ ಪ್ರಮಾಣದಲ್ಲಿ ಬೆಳೆದುಬಿಟ್ಟಿದೆ. ಚರ್ಚೆಯ ನಂತರದ ಚರ್ಚೆಗಳು ಮತ್ತು ವಾಗ್ವಾದಗಳು ಯೂರೋಪಿನ ತೀವ್ರ ಅಸಮಧಾನ– ಅಸಮ್ಮತಿಯ ಸೂಚನೆಗಳಾಗಿದ್ದವು. ಪ್ರಶ್ನೋತ್ತರ ಗೋಷ್ಠಿಯ ಅಂತ್ಯದ ವೇಳೆಗೆ, ಪ್ರಪಾತಕ್ಕೆ ಜಾರಿ ಬೀಳುವುದನ್ನು ಅಲ್ಲಗಳೆಯಲಾಗದ ಸ್ಥಿತಿಯಲ್ಲಿ ಭಾರತ ಇದೆ ಎಂಬುದಾಗಿ ಯೂರೋಪಿಯನ್ನರು ಭಾವಿಸುತ್ತಾರೆಂದು ನಾನು ಅರ್ಥಮಾಡಿಕೊಂಡೆ.

ಇತ್ತೀಚಿನ ದಿನಗಳಲ್ಲಿ ಯೂರೋಪಿನ ಮಾಧ್ಯಮಗಳು ಹೇಳಿರುವುದರ ಆಧಾರದ ಮೇಲೆ ನಾನಿದನ್ನು ನಿರೂಪಿಸಬಯಸುತ್ತೇನೆ.

ಜರ್ಮನಿಯ ಜನಪ್ರಿಯ ಪ್ರಧಾನ ಸಮಯದ ಟಿವಿ ಚರ್ಚೆಯೊಂದರಲ್ಲಿ ಜರ್ಮನಿಯ ಪಾರ್ಲಿಮೆಂಟ್ ಸದಸ್ಯರಾದ ಸಮಿತಿಯ ಸದಸ್ಯರು ಒಂದು ಬ್ಲಾಗ್‌ನ್ನು ಉಲ್ಲೇಖಿಸಿ ಹೇಳಿದ ಮಾತು: 'ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ನಡೆದಿರುವ ಎಲ್ಲಾ ಹಗರಣಗಳನ್ನು ಒಟ್ಟುಗೂಡಿಸಿದಲ್ಲಿ ಅದು ಬ್ರಿಟಿಷರು ತಮ್ಮ ಆಳ್ವಿಕೆಯ ಕಾಲದಲ್ಲಿ ಭಾರತದಲ್ಲಿ ಲೂಟಿ ಮಾಡಿದ ೧ ಟ್ರಿಲಿಯನ್ ಡಾಲರ್‌ಗಳನ್ನು ದಾಟಬಹುದು'

ಜರ್ಮನಿಯ ವಾಣಿಜ್ಯ ದೈನಿಕವೊಂದು ಭಾರತದ ಬಗ್ಗೆ ಬರೆದ ಸಂಪಾದಕೀಯ ಹೀಗಿದೆ: ಒಂದು ಆರ್ಥಿಕ ದೈತ್ಯ ಶಕ್ತಿಯಾಗುವುದಕ್ಕೆ ಪ್ರತಿಯಾಗಿ ಭಾರತವು ಒಂದು Banana Republic ಆಗುತ್ತಿದೆ. ಒಂದು ಮಸೂದೆಯನ್ನು ಪಾಸು ಮಾಡಲು ಅಡ್ಡಿಯಾಗುವ ರಾಜಕೀಯ ವಲಯಗಳಿಗೆ ಅನುಚಿತ ಆಶ್ವಾಸನೆಗಳನ್ನು ಕೊಡಲಾಗುತ್ತದೆ. ಜನರ ತೆರಿಗೆಯ ಹಣದಲ್ಲಿ ಇವರಿಗೆ ವಿಶೇಷ ಸವಲತ್ತುಗಳನ್ನು ಕೊಡಲಾಗುತ್ತದೆ. ಅತ್ಯಂತ ಜನನಿಬಿಡ ರಾಜ್ಯದ ಮುಖ್ಯಮಂತ್ರಿಯಾದ ಮಾಯಾವತಿಯವರ ಅವರ ವಿರುದ್ಧದ ಗಂಭೀರ ಆರೋಪದತನಿಖೆಯೊಂದನ್ನು ಕೈಬಿಡಲಾಗುತ್ತದೆ. ಅಪಾರವಾದ ಅಧಿಕಾರವನ್ನು ಹೊಂದಿರುವ ಮತ್ತೊಬ್ಬ ಮಾಜಿ ಮುಖ್ಯಮಂತ್ರಿಯ ವಿರುದ್ಧದ ಮೇವು ಹಗರಣವನ್ನು ತನ್ನಷ್ಟಕ್ಕೇ ತಣ್ಣಗಾಗಲು ಬಿಟ್ಟು ಬಿಡಲಾಗಿದೆ. ಈ ರೀತಿಯಲ್ಲಿ ಹೋಲಿಕೆಯೇ ಸಾಧ್ಯವಿಲ್ಲದ ಮಟ್ಟದ ಲೂಟಿಯ ಅಧ್ಯಕ್ಷತೆಯನ್ನು ಪ್ರಧಾನ ಮನಮೋಹನ ಸಿಂಗರೇ ವಹಿಸಿದ್ದಾರೆ.

ಫ್ರೆಂಚ್ ದಿನಪತ್ರಿಕೆಯೊಂದರಲ್ಲಿ 'ಆಟ ಆಡುವುದು, ಭಾರತದ ರೀತಿಯಲ್ಲಿ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಭಾರತದ ಕ್ರಿಕೆಟ್ ಮಂಡಳಿಯ ಸಂಶಯಾಸ್ಪದ ಆರ್ಥಿಕ ವ್ಯವಹಾರಗಳ ಬಗ್ಗೆ ನಡೆದ ತನಿಖೆಯಿಂದ ಸ್ವಿಟ್ಜರ್‌ಲ್ಯಾಂಡ್, ವರ್ಜೀನಿಯಾ ದ್ವೀಪಗಳು, ಮಾರಿಷಸ್ ಮತ್ತು ಸೈಪ್ರಸ್‌ಗಳಂತಹ ತೆರಿಗೆಗಳ್ಳರ ಅಡಗುದಾಣಗಳ ನಡುವೆ ನಡೆದಿರುವ ದುರ್ವ್ಯವಹಾರಗಳ ಜಾಲವೊಂದು ಬಯಲಾಗಿದೆ ಎಂಬುದಾಗಿ ಬರೆಯಲಾಗಿದೆ. ಇದೇ ಲೇಖನದಲ್ಲಿ ಪುಣೆಯ ಹಸನ್ ಆಲಿ ಎಂಬ ವ್ಯಕ್ತಿಯೊಬ್ಬರು ತಮ್ಮ ಹೆಂಡತಿಯ ಜೊತೆಗೂಡಿ ಭಾರತ ಸರ್ಕಾರದ ಅನುಮತಿಯೊಂದಿಗೆ ಒಂದು ಬಿಲಿಯನ್ ಡಾಲರ್ ಸ್ವಿಸ್ ಖಾತೆಯ ವಹಿವಾಟು ನಡೆಸಿದ್ದಾರೆ ಎಂಬುದಾಗಿ ತಿಳಿಸಲಾಗಿದೆ.

ಈ ಹಾಟಿಕರ ಲೇಖನದಲ್ಲಿ ಉಲ್ಲೇಖಿಸಲ್ಪಟ್ಟ ಮೂರನೆಯ ಪ್ರಕರಣ ಜಾರ್ಖಂಡ್‌ನ ಹಿಂದಿನ ಮುಖ್ಯಮಂತ್ರಿ ಮಧು ಕೋಡಾ ಅವರದ್ದು, ಬೇರೆ ಬೇರೆ ತೆರಿಗೆ ಆಶ್ರಯತಾಣಗಳಲ್ಲಿ ಅವರು ಅಪಾರವಾದ ಹಣ ಹೂಡಿದ್ದು, ಅದರ ಒಂದು ಭಾಗವನ್ನು ಲೈಬೀರಿಯಾದಲ್ಲಿ ಗಣಿಯೊಂದನ್ನು ಕೊಳ್ಳುವುದಕ್ಕಾಗಿ ಬಳಸಿದ್ದಾರೆ. ಇದರ ಬಗೆಗಿನ ತನಿಖೆ ಯಾವ ಹಂತದಲ್ಲಿದೆ ಎಂಬುದು ಭಾರತದ ಪ್ರಜೆಗಳಿಗೆ ಗೊತ್ತೇ ಇಲ್ಲ ಎಂಬುದರೊಂದಿಗೆ ಲೇಖನವು ಮುಕ್ತಾಯವಾಗುತ್ತದೆ.

ಭಾರತದ ದಾಖಲೆಗಳಲ್ಲೇ ಅತ್ಯಂತ ಹೇಯವಾದ ವಾಣಿಜ್ಯ ಹಗರಣದಲ್ಲಿ (ಸತ್ಯಂ) ಸರ್ಕಾರವು ಬಹುತೇಕ ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ವಂಚನೆಯಲ್ಲಿನ ರಾಜಕೀಯ ಮುಖವನ್ನು ಮರೆಮಾಚಿದೆ ಎಂಬುದಾಗಿ ಆಸ್ಟ್ರೇಲಿಯದ ಪತ್ರಿಕೆಯೊಂದು ಬರೆಯಿತು. ಭಾರತದ ಪ್ರಧಾನಮಂತ್ರಿಗೆ ಈ ಹಗರಣಗಳ ಬಗ್ಗೆ ಏನೂ ಗೊತ್ತಿಲ್ಲದಿದ್ದರೆ ಅವರಿಗೆ ವಾಸ್ತವದ ಅರಿವಿಲ್ಲದಿರುವುದರಿಂದ ಅವರು ಪ್ರಧಾನಿಯಾಗಲು ಅನರ್ಹರು. ಅವರಿಗೆ ಅದು ತಿಳಿದಿದ್ದರೆ ಅವರು ಅಪರಾಧದಲ್ಲಿ ಪಾಲುದಾರನೇ ಅಲ್ಲವೆ ?

೨ಜಿ ಹಗರಣದ ಬಗ್ಗೆ ಬರೆಯುತ್ತಾ ಬ್ರಿಟನ್‌ನ ದಿ. ಟೆಲಿಗ್ರಾಫ್ ಪತ್ರಿಕೆಯು ಭಾರತದ ಗಜ ಸದೃಶ ನ್ಯಾಯಾಂಗ ವ್ಯವಸ್ಥೆಯು ಸಹಜವಾಗಿಯೇ ಅಪರಾಧಿಗಳಿಗೆ ಶಿಕ್ಷೆಯಾಗುವುದನ್ನು ನಿಧಾನಗೊಳಿಸುತ್ತದೆ ಎಂಬುದಾಗಿ ಹೇಳಿದೆ.

**ಸಂಪತ್ತಿನಿಂದ ಕುರುಡರಾದವರು :** ಇದು ನಿಜವೆಂದು ತೋರುತ್ತದೆ. ಯೂರೋಪಿನ ಮನಸ್ಸಿನಲ್ಲಿರುವ ಭಾರತೀಯನೊಬ್ಬನ ಮಾದರಿಯ ಚಿತ್ರಣವೆಂದರೆ ಸುಳ್ಳು ಹೇಳುವುದು, ವಂಚಕನಾಗಿರುವುದು, ಅಪ್ರಮಾಣಿಕತೆ, ಭ್ರಷ್ಟಾಚಾರ, ಅಹಂಕಾರ, ಆತ್ಮಪ್ರಶಂಸೆ, ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಪ್ರಯಾಣ ಮಾಡುವಾಗ ಜೋರಾಗಿ ಮಾತನಾಡುವುದು, ಸಣ್ಣ ಅವಕಾಶ ಸಿಕ್ಕರೂ ಮಾತನಾಡುವುದು ಇತರರ ಬಗ್ಗೆ ಸುಳ್ಳು ಸುದ್ದಿ ಹರಡುವುದು ಮುಂತಾಗಿ ಅಂತ್ಯವೇ ಇಲ್ಲದ ಈ ಗುಣಗಳ ಮೊತ್ತ.

ನನ್ನ ತಂದೆಗೆ ಈಗ ೮೧ ವರ್ಷ. ಅವರು ಹತಾಶರಾಗಿ ಹೋಗಿದ್ದಾರೆ. ಈಗ ನಡೆಯುತ್ತಿರುವುದನ್ನು ಕಂಡು ಆಘಾತಗೊಂಡಿದ್ದಾರೆ. ತಳಮಳಗೊಂಡಿದ್ದಾರೆ. ಇತ್ತೀಚೆಗೆ ಹೀಗೇ ಮಾತನಾಡುತ್ತಿದ್ದಾಗ ಅವರು ನಮ್ಮ ದೇಶದ ಧ್ಯೇಯವಾಕ್ಯವನ್ನು 'ಅಸತ್ಯಮೇವ ಜಯತೆ' ಎಂಬುದಾಗಿ ಬದಲಾಯಿಸಬೇಕೆಂದು ಹೇಳುತ್ತಿದ್ದರು.

ರಾಜಕೀಯ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿನ ಭಾರತದ ನಾಯಕರು ಹೊಸದಾಗಿ ಕೆಲವು ಸಲ ದುರ್ಮಾರ್ಗದಿಂದ ಗಳಿಸಿದ ಐಶ್ವರ್ಯದಿಂದ, ತಮ್ಮನ್ನು ತಾವೇನ್ನೇ ವಂಚಿಸಿಕೊಳ್ಳುವ ರೀತಿಯ ಅಮಾಯಕತೆಯಲ್ಲಿ ಕುರುಡರಾಗಿದ್ದಾರೆ. ಇಲ್ಲದವರು ರಸ್ತೆಗಿಳಿಯುವ ದಿನ ದೂರವಿಲ್ಲ ಎಂಬುದನ್ನು ನಂಬಲು ನಿರಾಕರಿಸುತ್ತಾ ಅಹಂಕಾರದಿಂದ, ನಿರ್ಲಕ್ಷ್ಯದಿಂದ ಬದುಕುತ್ತಿದ್ದಾರೆ ಎಂಬುದಾಗಿ ಯೂರೋಪಿಯನ್ನರು ಭಾವಿಸಿದ್ದಾರೆ.

ಮಾವೋವಾದಿಗಳ ವಿಕೃತ ಪಾಶವೀ ಕೃತ್ಯಗಳನ್ನು ಕಂಡಾಗ ಅದು ಈಗಾಗಲೇ ಪ್ರಾರಂಭವಾಗಿರುವಂತೆ ತೋರುತ್ತದೆ. ಮುಂದೆ ಅದು ಉಲ್ಬಣಗೊಳ್ಳಲಿದೆ. ಒಬ್ಬನೇ ಒಬ್ಬ ರಾಜಕೀಯ ವೇಷಧಾರಿ ಬೀದಿ ಹೆಣವಾಗುವುದನ್ನು ತಪ್ಪಿಸಿಕೊಳ್ಳಲಾರ.

ಜನರ ಕೂಗನ್ನು ಕೇಳಿಸಿಕೊಳ್ಳುವುದನ್ನು ನಮ್ಮ ನಾಯಕರು ನಿರಾಕರಿಸುತ್ತಾ ಹೋದಂತೆ ಈ ದಂಗೆಯ ರಣವಾದ್ಯಗಳು ಹೆಚ್ಚು ಹೆಚ್ಚು ಜೋರಾಗುತ್ತಾ ಹೋಗುತ್ತವೆ. ಮುಂದೆ ಅದು ಇಡೀ ಭಾರತದ ಉದ್ದಗಲ ರಸ್ತೆಗಳಿಗೂ ಹರಡುತ್ತದೆ ಎಂಬುದು ನನ್ನ ಆತಂಕ.

ಬಹುಶಃ ನಮ್ಮ ದುರದೃಷ್ಟದ ಶಿಲ್ಪಿಗಳು ನಾವೇ ಎನ್ನಿಸುತ್ತದೆ. ಹೇಗೋ ನಡೆಯುತ್ತೆ ಎಂಬ ನಮ್ಮ ಧೋರಣೆಯಿಂದಾಗಿಯೇ ಜನರು ಆಶ್ವಾಸನೆ ನೀಡಿ ನಮ್ಮನ್ನು ದಾರಿ ತಪ್ಪಿಸುವುದು. ಈಸೋಪನು "ನಾವು ಚಿಲ್ಲರೆ ಕಳ್ಳರನ್ನು ನೇಣು ಹಾಕುತ್ತೇವೆ ದೊಡ್ಡ ಕಳ್ಳರನ್ನು ಉನ್ನತ ಹುದ್ದೆಗಳಿಗೆ ನೇಮಿಸುತ್ತೇವೆ" ಎಂಬುದಾಗಿ ಹೇಳಿದ್ದು ಆಶ್ಚರ್ಯದ ವಿಚಾರವಲ್ಲ.

**(ಎರಡೂ ಲೇಖನಗಳ ಅನುವಾದ: ಎಂ. ರಾಜು ಕೃಪೆ: ಜನತಾ)**

# ಮೈಸೂರಿನಲ್ಲಿ ಲೋಹಿಯಾ ನೆನಪಿನ ಕಾರ್ಯಕ್ರಮ




**ಸ**ಮಾಜವಾದಿ ಚಿಂತಕ ಹಾಗೂ ಹೋರಾಟಗಾರ ಡಾ. ರಾಮಮನೋಹರ ಲೋಹಿಯಾರ ೧೦೩ನೇ ಹುಟ್ಟುಹಬ್ಬವನ್ನು ಕಳೆದ ಮಾರ್ಚ್ ೨೪ರಂದು ಮೈಸೂರಿನಲ್ಲಿ ಸಮಕಾಲೀನ ರಾಜಕಾರಣ ಕುರಿತ ವಿಚಾರಸಂಕಿರಣವೊಂದರ ರೂಪದಲ್ಲಿ ಆಚರಿಸಲಾಯಿತು. ಚಾಮರಾಜನಗರದ ಸಮಾಜವಾದಿ ಅಧ್ಯಯನ ಕೇಂದ್ರವು ಮೈಸೂರಿನ ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಮತ್ತು ರಂಗವಲ್ಲಿ ಸಾಂಸ್ಕೃತಿಕ ಸಂಘಟನೆಯ ಸಹಯೋಗದಲ್ಲಿ ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಿತ್ತು. ಸಮಾಜವಾದಿ ಅಧ್ಯಯನ ಕೇಂದ್ರದ ಅಪೂರ್ವ ಡಿ'ಸಿಲ್ವ ಆರಂಭದಲ್ಲಿ ವಿಚಾರ ಸಂಕಿರಣದ ಪ್ರಸುತುತೆಯ ಬಗ್ಗೆ ಪ್ರಾಸ್ತಾವಿಕ ಮಾತುಗಳನ್ನಾಡಿದರು

'ಪರ್ಯಾಯ ರಾಜಕಾರಣ ಮತ್ತು ಸಮಾಜವಾದ' ಎನ್ನುವ ವಿಚಾರವಾಗಿ ಮುಖ್ಯ ಭಾಷಣ ಮಾಡಿದ 'ಹೊಸ ಮನುಷ್ಯ' ಮಾಸಿಕದ ಸಂಪಾದಕರಾದ ಡಿ.ಎಸ್. ನಾಗಭೂಷಣ ಅವರು ಪಯಾರ್ಯ ರಾಜಕಾರಣ ಮತ್ತು ಸಮಾಜವಾದ ಎಂಬುವು ಇಂದು ಶಬ್ದ ಮತ್ತು ಪರಿಕಲ್ಪನೆಗಳಾಗಿ ಸವಕಲಾಗಿ ಹೋಗಿದ್ದು, ಅವಕ್ಕೆ ಇಂದಿನ ಸಂದರ್ಭದ ಸವಾಲುಗಳಿಗೆ ಎದುರಾಗಿ ಹೊಸ ಅರ್ಥಗಳನ್ನು ನೀಡಿ ಪ್ರಸುತ್ತ ಮಾಡಬೇಕಾಗಿದೆ ಎಂದರು. ಪರ್ಯಾಯ ರಾಜಕಾರಣ ಎಂಬುದು ಚುನಾವಣಾ ರಾಜಕಾರಣದ ರೂಪ ತಾಳುವ ಮೊದಲು ಹೊಸ ರಾಜಕೀಯ ಸಂಸ್ಕೃತಿಯ ಅನುಷ್ಠಾನದ ರೂಪದಲ್ಲಿ ಆಚರಣೆಗೆ ಬರಬೇಕು. ಅದು ಹಳೆಯ ಸಮಾಜವಾದಿ ರಾಜಕಾರಣದ ವೈಫಲ್ಯಗಳಿಂದ ಕಲಿತ ಪಾಠಗಳ ಮೂಲಕ ರೂಪುಗೊಳ್ಳುವ ಹೊಸ ಸಮಾಜವಾದದಿಂದ ನಿರ್ದೇಶಿಲ್ಪಡಬೇಕು ಎಂದರು. ಲೋಹಿಯಾ ತಮ್ಮ ಸಮಾಜವಾದದ ಮೂಲಕ ಕಟ್ಟಲೆಣಿಸಿದ ಹೊಸ ವಿಶ್ವನಾಗರೀಕತೆಯ ಕೇಂದ್ರ ತತ್ವವಾಗಿ ಬಂಡವಾಳಶಾಹಿ ನಾಗರೀಕತೆಯ ಸದಾ ಏರುತ್ತಾ ಹೋಗುವ ಜೀವನ ಮಟ್ಟಕ್ಕೆ ಪ್ರತಿಯಾಗಿ ಪ್ರತಿಪಾದಿಸಿದ ಮಿತಿಗಳುಳ್ಳ ಬದುಕಿನ ಸರಳ ಸಭ್ಯ ಜೀವನಮಟ್ಟದ ಆಶಯ ಹೊಸ ಸಮಾಜವಾದದ ಕೇಂದ್ರ ತತ್ವವಾಗಬೇಕು ಎಂದು ನಾಗಭೂಷಣ ವಿವರಿಸಿದರು.

ನಂತರ 'ಸಾಮಾಜಿಕ ಅಸ್ಮಿತೆ ಮತ್ತು ಜಾತಿ ವಿನಾಶ' ಕುರಿತು ಮಾತನಾಡಿದ ಕವಿ ಹಾಗೂ ಚಿಂತಕ ಕೆ.ಬಿ.ಸಿದ್ದಯ್ಯನವರು ಸಾಮಾಜಿಕ ಅಸ್ಮಿತೆಯ ಪ್ರಶ್ನೆಯನ್ನು ಬರೀ ಜಾತಿ ನೆಲೆಯಿಂದಷ್ಟೇ ನೋಡದೆ ಅಧಿಕಾರ ಮತ್ತು ಸಂಪತ್ತುಗಳ ನೆಲೆಯಲ್ಲೂ ನೋಡಿ ನಿರ್ವಹಿಸುವ ಕಾಲ ಈಗ ಬಂದಿದೆ ಎಂದರು. ಇಂದಿನ ಸಾಮಾಜಿಕ ಅಸ್ಮಿತೆಯ ಪ್ರಶ್ನೆಯ ಬಿಕ್ಕಟ್ಟುಗಳಿಗೆ ಉತ್ತರಗಳನ್ನು ನಮ್ಮ ಪರಂಪರಾಗತ ಜೀವನಕ್ರಮದಲ್ಲೂ ಹುಡುಕುವ ಸಾಧ್ಯತೆಗಳನ್ನು ನಾವು ಗಂಭೀರವಾಗಿ ಪರಿಶೀಲಿಸದಂತಾದರೆ ಮಾತ್ರ ಜಾತಿ ವಿನಾಶದ ಕಾರ್ಯಕ್ರಮ ವ್ಯಾವಹಾರಿಕವಾಗಬಲ್ಲುದು ಎಂದೂ ಅವರು ಹೇಳಿದರು.

ನಂತರ ಈ ಎರಡೂ ವಿಷಯಗಳ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು. ಪ್ರಶ್ನೋತ್ತರದ ನಂತರ ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ. ನರೇಂದ್ರ ಕುಮಾರ್ ಹಾಗೂ ಚಾಮರಾಜನಗರದ ರೈತ ಮುಖಂಡ ಎನ್. ನಂಜೇಗೌಡರು ಮಾತನಾಡಿದರು



ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಮಾಜವಾದಿ ಪ. ಮಲ್ಲೇಶ್ ಅವರು ವಿದೇಶಿ ಬಂಡವಾಳಕ್ಕೆ ಬದಲಾಗಿ ಗಾಂಧಿ ಪ್ರತಿಪಾದಿಸಿದ್ದ ವಿಶ್ವಸ್ಥ ನಿಧಿ ಪರಿಕಲ್ಪನೆಯನ್ನು ನಂತರ ಸಂಸತ್ತಿನಲ್ಲಿ ಲೋಹಿಯಾ ಪುನರ್ರೂಪಿಸಿ ಮಂಡಿಸಿದ್ದ ಟ್ರಸ್ಟೀಶಿಪ್ ಮಸೂದೆಯ ಬಗ್ಗೆ ನಾವಿಂದು ಪುನರಾಲೋಚಿಸಬೇಕಿದೆ ಎಂದರು. ಕನಿಷ್ಟ ಶಿಸ್ತಿಲ್ಲದೆ ಸಮಾಜವಾದಿಗಳು ಛಿದ್ರವಾದ ಬಗೆಯನ್ನು ನೋವಿನಿಂದ ನೆನಪಿಸಿಕೊಂಡ ಅವರು ಸಮಾಜವಾದವು ಒಂದು ಪರ್ಯಾಯ ರಾಜಕೀಯ ಚಿಂತನೆಯಾಗಬೇಕಾದಲ್ಲಿ ಒಂದು ಶಿಸ್ತುಳ್ಳ ಸಂಘಟನೆಯ ಅಗತ್ಯವಿದೆ ಎಂದರು.

ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಪಾಲ್ಗೊಂಡಿದ್ದು, ರವಿಚಂದ್ರ ಚಿಕ್ಕೆಂಪಿಹುಂಡಿ, ಬಿ. ರಾಜೇಶ್, ರವಿಪ್ರಸಾದ್ ಮುಂತಾದವರು ಸಮಾರಂಭವನ್ನು ಪರಿಣಾಮಕಾರಿಯಾಗಿ ಸಂಘಟಿಸಿದ್ದರು.

(ವರದಿ: **ಅಪೂರ್ವ ಡಿ'ಸಿಲ್ವ**)

# ಲೋಹಿಯಾ ನೆನಪಿನಲ್ಲಿ ಲಂಕೇಶ್ ಅಧ್ಯಯನ ಶಿಬಿರ

**೨**೧-೦೩-೨೦೧೩ರಂದು ಭದ್ರಾವತಿಯ ಸರ್ ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ, ಸಾಗರದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಕಾಲೇಜಿನ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಸಹಯೋಗದಲ್ಲಿ 'ವಿಶಿಷ್ಠ ಲೇಖಕ ಪಿ.ಲಂಕೇಶ್' ಎಂಬ ವಿಚಾರದ ಕುರಿತಾಗಿ ಅಧ್ಯಯನ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು.

ಆರಂಭದಲ್ಲಿ ವಿಭಾಗದ ಮುಖ್ಯಸ್ಥೆ ಡಾ. ಸಬಿತಾ ಬನ್ನಾಡಿ ಪ್ರಸ್ತಾವಿಕವಾಗಿ ಮಾತನಾಡಿ ಸಾಹಿತ್ಯದ ವಿದ್ಯಾರ್ಥಿಗಳಿಗೆ ಲಂಕೇಶರ ಬರವಣಿಗೆ ಮತ್ತು ವ್ಯಕ್ತಿತ್ವಗಳ ಅರಿವಿನ ಅಗತ್ಯವನ್ನು ವಿವರಿಸಿದರು.

ಶಿಬಿರವನ್ನು ಉದ್ಘಾಟಿಸಿದ ಕಥೆಗಾರ ಪ್ರೊ. ಎಂ.ಚಂದ್ರಶೇಖರಯ್ಯ ಲಂಕೇಶರ ಒಟ್ಟು ಬರವಣಿಗೆಯಲ್ಲಿ ಎದ್ದು ಕಾಣುವ ಗುಣವೆಂದರೆ ಅವರ ಪ್ರಯೋಗಶೀಲತೆ, ನಿಷ್ಠುರತೆ ಮತ್ತು ದಿಟ್ಟತನ ಎಂದರು. ಅಂತಹ



ವ್ಯಕ್ತಿತ್ವ ಇಂದು ಇದ್ದಿದ್ದರೆ ಸಮಕಾಲೀನ ಬದುಕು ಇಷ್ಟು ಹತಾಶೆಯಿಂದ ಕೂಡಿರುತ್ತಿರಲಿಲ್ಲ ಎಂದವರು ಅಭಿಪ್ರಾಯಪಟ್ಟರು

ಶಿಬಿರದ ಪ್ರವೇಶ ಭಾಷಣ ಮಾಡಿದ ಶಿಬಿರದ ನಿರ್ದೇಶಕರೂ, ಲೋಹಿಯಾ ಪ್ರತಿಷ್ಠಾನದ ಅಧ್ಯಕ್ಷರೂ ಆದ ಡಿ.ಎಸ್. ನಾಗಭೂಷಣ ಅವರು, ಲೋಹಿಯಾ ನೆನಪಿನಲ್ಲಿ ಅವರಿಂದ ಪ್ರಭಾವಿತರಾದ ಕನ್ನಡ ಲೇಖಕರನ್ನು ಪರಿಚಿಸುವ ಅಧ್ಯಯನ ಶಿಬಿರಗಳ ಸರಣಿಯಲ್ಲಿ ಇದೂ ಒಂದಾಗಿದ್ದು, ಈ ಮೂಲಕ ಸಮಾಜವಾದದ ಸಾಂಸ್ಕೃತಿಕ ಸತ್ವವನ್ನು ವಿದ್ಯಾರ್ಥಿ ಸಮುದಾಯಕ್ಕೆ ಪರಿಚಯಿಸಲಾಗುತ್ತಿದೆ ಎಂದರು. ಲಂಕೇಶ್ ಮುಖ್ಯವಾಗಿ ಕಥನಕಾರ, ಕವಿ, ನಾಟಕಕಾರ ಹಾಗೂ ಪತ್ರಕರ್ತರಾಗಿ ತಮ್ಮ ಬಹುಮುಖ ಪ್ರತಿಭೆಯ ಮೂಲಕ ನಾಗರೀಕತೆ-ಸಂಸ್ಕೃತಿಗಳ ಹೆಸರಿನಲ್ಲಿ ಮನುಷ್ಯನ ಮೇಲೆ ಹೇರಲಾಗುವ ಎಲ್ಲ ಶಿಸ್ತುಗಳನ್ನೂ ಸಂಶಯದಿಂದ ನೋಡುತ್ತಿದ್ದರು ಎಂದು ಅವರು ಹೇಳಿದರು. ಲಂಕೇಶ್ ಮನುಷ್ಯ ತನ್ನ ಮೂಲ ಪ್ರಾಣಿಗುಣವನ್ನು ಮೀರಲೆಳಸುವ ಪ್ರಯತ್ನದಲ್ಲಿ ಎದುರಿಸುವ ದುರಂತಗಳ ಚಿತ್ರಣ ನೀಡುವ ಮೂಲಕ ಮನುಷ್ಯನ ಬದುಕಿನ ಕೆಲವು ಮೂಲಭೂತ ವೈರುಧ್ಯಗಳನ್ನು ಗುರುತಿಸುವ ಮಹತ್ವದ ಬರಹಗಾರರೆನಿಸಿಕೊಳ್ಳುತ್ತಾರೆ ಎಂದೂ ಅವರು ಅಭಿಪ್ರಾಯಪಟ್ಟರು. ಪತ್ರಕರ್ತರಾಗಿ ಅವರು ಹಲವು ಹೊಸತನಗಳಿಗೆ ಕಾರಣರಾದಂತೆಯೇ ಹಲವು ಮಿತಿಗಳನ್ನೂ ಹೊಂದಿದ್ದರು ಎಂದೂ ನಾಗಭೂಷಣ ಸೂಚಿಸಿದರು

ಮೊದಲ ಗೋಷ್ಠಿಯಲ್ಲಿ 'ಲಂಕೇಶರ ಕಥನ ಕಲೆಯ ವೈಶಿಷ್ಟ್ಯಗಳು' ಕುರಿತು ಮಾತನಾಡಿದ ಬಿ.ಪಿ. ವೀರೇಂದ್ರ ಕುಮಾರ್. ಸಮಾಜವಾದಿ ಚಿಂತನೆಯ ನೆಲೆಯಿಂದಾಗಿ ಲಂಕೇಶರಿಗೆ ಸಮಸ್ಯೆಗಳನ್ನು ಬಹುಮುಖವಾಗಿ ನೋಡುವ ಪಕ್ವತೆ ಸಾಧ್ಯವಾಯಿತು. ಅವರ ಕತೆಗಳಲ್ಲಿನ ಪಾತ್ರಗಳು ನೈತಿಕ ಬಿಕ್ಕಟ್ಟಿನಲ್ಲಿ ಚಡಪಡಿಸುತ್ತಾ ಜೀವಂತಿಕೆ ಪಡೆದುಕೊಳ್ಳುವ ಕ್ರಮವೊಂದು ಕಾಣುತ್ತದೆ.ಎಂದರು.

ಎರಡನೆಯ ಗೋಷ್ಠಿಯಲ್ಲಿ 'ಲಂಕೇಶರ ನಾಟಕಗಳು: ಒಂದು ನೋಟ' ಎಂಬ ವಿಷಯ ಕುರಿತು ಡಾ. ಎಸ್. ಸಿರಾಜ್ ಅಹಮದ್ ಮಾತನಾಡಿ, 'ಸಂಕ್ರಾಂತಿ'ಯ ಉಜ್ಜ ಮತ್ತು ಉಷಾ ಎತ್ತುವ ಪ್ರಶ್ನೆಗಳು ಇಂದಿನ ಸಬಾಲ್ಟರ್ನ್ ಮಾದರಿಯ ಪ್ರಶ್ನೆಗಳಾಗಿವೆ. ಸಾಮಾಜಿಕ ಕ್ರಾಂತಿ ಎನ್ನುವುದು ಸಾವಧಾನದ ಪ್ರಕ್ರಿಯೆ ಎಂಬ ಅರಿವಿದ್ದ ಲಂಕೇಶರಿಗೆ ಸಾಮಾಜಿಕ ಬದಲಾವಣೆಯು ವ್ಯಕ್ತಿಯ ಮೂಲ ಪ್ರವೃತ್ತಿಯನ್ನು ಬದಲಾಯಿಸುವುದರ ಕುರಿತು ಸಂಶಯವೂ ಇತ್ತು ಎಂದ ಅವರು, ವ್ಯಕ್ತಿಯ ಅಂತರಂಗದ ಬದಲಾವಣೆಯೆಡೆಗಿನ ಅವರ ಕಾಳಜಿ 'ಗುಣಮುಖ'ದಲ್ಲಿ ತನ್ನೆಲ್ಲ ತೀವ್ರತೆಯಲ್ಲಿ ವ್ಯಕ್ತವಾಗಿದೆ ಎಂದರು.

'ಲಂಕೇಶ್ ಪತ್ರಿಕೆ : ನಾನು ಕಂಡಂತೆ' ಎಂಬ ವಿಚಾರ ಕುರಿತು ಮಾತನಾಡಿದ ಸವಿತಾ ನಾಗಭೂಷಣ, ಲಂಕೇಶ್ ಪತ್ರಿಕೆಯ ಸಾಂಸ್ಕೃತಿಕ ಮಹತ್ವವನ್ನು ತಮ್ಮ ಅನುಭವದ ಮೂಲಕ ಬಿಚ್ಚಿಟ್ಟರು. ಯುವ ಮನಸ್ಸುಗಳಲ್ಲಿ ಸಾಹಿತ್ಯ, ಸಮಾಜ, ರಾಜಕೀಯ ವಿಚಾರಗಳ ಕುರಿತಾದ ಅರಿವನ್ನು ವಿಸ್ತಾರ ಮಾಡುತ್ತಿದ್ದುದರಿಂದ ಓದುಗರು ಜಾಣಜಾಣೆಯರೇ ಆಗಿದ್ದನ್ನು ಸವಿತಾ ಸ್ಮರಿಸಿಕೊಂಡರು.

ಶಿಬಿರದ ಸಮಾರೋಪ ಭಾಷಣ ಮಾಡಿದ ಲಂಕೇಶರ ಆಪ್ತರಲ್ಲೊಬ್ಬರೂ, ಅಂಕಣಕಾರರೂ ಆದ ಬಿ. ಚಂದ್ರೇಗೌಡರು, ಲಂಕೇಶ್ ಹಲವು ವರ್ಷಗಳನ್ನು ನಗರದಲ್ಲಿ ಕಳೆದರೂ ಅವರು ಅಂತರಂಗದಲ್ಲಿ ಒಬ್ಬ ಹಳ್ಳಿಯ ಮನುಷ್ಯನಾಗಿದ್ದರು. ಹಳ್ಳಿಗರು, ಸಾಮಾನ್ಯರು ಬಂದರೆ ಮಾತನಾಡಿಸುತ್ತಿದ್ದ ಲಂಕೇಶ್, ರಾಯಚೂರಿನ ಡಿ.ಸಿ.ಯ ಫೋನ್ ಬಂದರೆ, ' ಲಂಕೇಶ್ ತೀರಿಕೊಂಡ್ರು ಅಂತ ಹೇಳು ಕಣಯ್ಯ'ಎಂಬುದನ್ನು ಹೇಳುತ್ತಾ ಅವರ ಆದ್ಯತೆಯನ್ನು ಮನದಟ್ಟು ಮಾಡಿಕೊಟ್ಟರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಟಿ.ಸಿ. ಭಾರತಿಯವರು ಅಧ್ಯಕ್ಷತೆ ವಹಿಸಿ ಲಂಕೇಶರ ಬದುಕು-ಬರಹದ ಅಧ್ಯಯನ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು..ವಿದ್ಯಾರ್ಥಿಗಳಾದ ಮಯೂಬ್, ಅನುಪಮ, ಮಹಾಂತೇಶ್ ಹಾಗೂ ಆಶಾ ಶಿಬಿರ ಕುರಿತ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಡಾ. ವೆಂಕಣ್ಣ ನಾಗಮ್ಮನವರ್ ಸ್ವಾಗತಿಸಿದರು. ಶ್ರೀಮತಿ ಸವಿತಾ. ಜಿ ವಂದಿಸಿದರು.

**(ವರದಿ: ಡಾ. ಸಬಿತಾ ಬನ್ನಾಡಿ)**

# ಇದು ಭಾರತ! ಇದು ಭಾರತ!!

ರಾಷ್ಟ್ರೀಯ ಚುನಾವಣಾ ಕಣ್ಗಾವಲು ಸಂಸ್ಥೆ ಪ್ರಕಾರ ಕಳೆದ ಲೋಕಸಭೆಯ ೫೪೩ ಸದಸ್ಯರ ಪೈಕಿ ೧೫೪ ಜನ ಮಾತ್ರ ಕೋಟ್ಯಾಧೀಶ್ವರರಾಗಿದ್ದರೆ, ಸದರಿ ಲೋಕಸಭೆಯಲ್ಲಿ ಅ ಸಂಖ್ಯೆ ೩೦೬ಕ್ಕೆ ಏರಿದೆ! ಇವರಲ್ಲಿ ಸುಮಾರು ಅರ್ಧದಷ್ಟು ಜನ ಕಾಂಗ್ರೆಸ್ಸಿಗರಾಗಿದ್ದರೆ ಉಳಿದರ್ಧ ಮಿಕ್ಕೆಲ್ಲ ಪಕ್ಷಗಳಿಗೆ ಸೇರಿದವರು.

ಕೇಂದ್ರ ಮಂತ್ರಿಗಳಲ್ಲಿ ಮುಕ್ಕಾಲು ಪಾಲು ಜನ ಕೋಟ್ಯಾಧೀಶರು. ಇವರ ಒಟ್ಟು ಆಸ್ತಿಯ ಮೌಲ್ಯ ೫೦೦ ಕೋಟಿ ರೂಪಾಯಿಗಳು!

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಕಂಡು ಬಂದ ಒಂದು ಪ್ರವೃತ್ತಿ ಎಂದರೆ ಅಭ್ಯರ್ಥಿಯ ಆಸ್ತಿ ಪ್ರಮಾಣ ಹೆಚ್ಚಿದಷ್ಟೂ ಆತನ/ಆಕೆಯ ವಿಜಯದ ಸಾಧ್ಯತೆ ಹೆಚ್ಚುತ್ತಾ ಹೋಗಿರುವುದು! ಗೆದ್ದ ಅಭ್ಯರ್ಥಿಗಳ ಪೈಕಿ ಶೇ.. ೩೩ರಷ್ಟು ಜನ ಐದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಆಸ್ತಿಯನ್ನು ಘೋಷಿಸಿಕೊಂಡಿದ್ದವರು. ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆಸ್ತಿ ಘೋಷಿಸಿಕೊಂಡಿದ್ದವರಲ್ಲಿ ವಿಜಯದ ಪ್ರಮಾಣ ಶೇ.೦.೫೪!

೪೦ ವರ್ಷಗಳ ಹಿಂದೆ ಈ ದೇಶದಲ್ಲಿ ಕಪ್ಪು ಹಣ ದೇಶದ ಒಟ್ಟಾರೆ ಆದಾಯದ ಶೇ೧೦ರಷ್ಟಿತ್ತೆಂದು ಅಂದಾಜಿಸಲಾಗಿದ್ದರೆ, ಅದು ಇಂದು ಕನಿಷ್ಟ ಶೇ. ೬೦ ಎಂದು ಅಂದಾಜಿಸಲಾಗಿದೆ!

*ಸ್ವಿಸ್ ಬ್ಯಾಂಕಿಂಗ್ ಅಸೋಷಿಯೇಷನ್*ನವರು ೨೦೦೬ರಲ್ಲಿ ಹೊರಡಿಸಿರುವ ಪ್ರಕಟಣೆಯ ಪ್ರಕಾರ ಸ್ವಿಸ್ ಬ್ಯಾಂಕುಗಳಲ್ಲಿ ಕಳ್ಳ ಹಣ ಇಟ್ಟಿರುವ ದೇಶಗಳಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದ್ದು, ಅದು ೧೪೫೬ ಶತಕೋಟಿ ಡಾಲರುಗಳಾಗಿದ್ದು, ಈ ಮೊತ್ತ ನಂತರದ ನಾಲ್ಕು ಸ್ಥಾನಗಳಲ್ಲಿರುವ ದೇಶಗಳು ಇಟ್ಟಿರುವ ಒಟ್ಟು ಮೊತ್ತದ ಹೆಚ್ಚೂಕಡಿಮೆ ಒಂದೂವರೆಯಷ್ಟಿದೆ!

*ಗ್ಲೋಬಲ್ ಫೈನಾನ್ಸಯಲ್ ಇಂಟಿಗ್ರಿಟಿ*ಯ ೨೦೧೦ರ ವರದಿಯ ಪ್ರಕಾರ ಭಾರತದಿಂದ ಆ ಹಿಂದಿನ ಅರವತ್ತು ವರ್ಷಗಳಲ್ಲಿ ತೆರಿಗೆಗಳ್ಳತನದೊಂದಿಗೆ ಹೊರದೇಶಗಳಿಗೆ ಸಾಗಣೆಯಾದ ಹಣದ ಪ್ರಮಾಣ ೪೬೨ ಶತಕೋಟಿ ಡಾಲರುಗಳು. ಅಂದರೆ ಇಪ್ಪತ್ತೈದು ಲಕ್ಷ ನಲವತ್ತೈದು ಸಾವಿರ ಕೋಟಿ ರೂಪಾಯಿಗಳು! ಇದರ ವಾರ್ಷಿಕ ಸರಾಸರಿ ಸುಮಾರು ನಾಲ್ಕು ಲಕ್ಷ ಇಪ್ಪತ್ತುಮೂರು ಸಾವಿರ ಕೋಟಿ ರೂಪಾಯಿಗಳು!

ಇದರಲ್ಲಿ ಶೇ. ೭೭ರಷ್ಟು ಹಣ ಸಾಗಾಟವಾಗಿರುವುದು ನವ ಉದಾರೀಕರಣದ ಉತ್ತುಂಗ ಕಾಲ ಎನಿಸಿದ್ದ ೨೦೦೪-೨೦೦೮ರ ಅವಧಿಯಲ್ಲಿ!

ಕಳೆದ ಆರು ವರ್ಷಗಳಲ್ಲಿ ಕೇಂದ್ರ ಮುಂಗಡಪತ್ರದಲ್ಲಿ ಖಾಸಗಿ ಉದ್ಯಮಪತಿಗಳಿಗೆ ಕಂಪನಿ ಆದಾಯ ತೆರಿಗೆ, ವಿವಿಧ ರೀತಿಯ ಸುಂಕಗಳ ರಿಯಾಯ್ತಿ ರೂಪದಲ್ಲಿ ನೀಡಿರುವ ಹಣದ ಮೊತ್ತ ಇಪ್ಪತ್ತೊಂದು ಲಕ್ಷ ಕೋಟಿ ರೂಪಾಯಿಗಳು!

**ಪ್ರಿಯ ಓದುಗರೇ,**

**ಸಂಪಾದಕರು: 'ಹೊಸ ಮನುಷ್ಯ' ಹೆಸರಿನಲ್ಲಿ ಶಿವಮೊಗ್ಗದ ವಿನೋಬನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಶಾಖೆಯಲ್ಲಿ ಚಾಲ್ತಿ ಖಾತೆಯೊಂದನ್ನು ತೆರೆಯಲಾಗಿದ್ದು, ಅದರ ಸಂಖ್ಯೆ ಹೀಗಿದೆ: ೬೪೧೧೦೩೫೮೩೩೦. ಓದುಗರು ತಮ್ಮ ಹೊಸ ಚಂದಾ ಅಥವಾ ಚಂದಾ ನವೀಕರಣದ ಮೊತ್ತವನ್ನು ಇಲ್ಲಿಗೆ ಕಳಿಸಿ ಆ ಬಗ್ಗೆ ಪತ್ರಿಕೆಗೆ ಮಾಹಿತಿ ನೀಡಬಹುದು-ಸಂಪಾದಕ**

# ಅಂದ ಹಾಗೆ: ಕಿಡಿಗೇಡಿಯೊಬ್ಬನ ಕಾಲಹರಣದ ಟಿಪ್ಪಣಿಗಳು...



ಆಂಧ್ರದಲ್ಲಿ ಜಗನ್ ಮೋಹನ ರೆಡ್ಡಿಯನ್ನು ಒಂದು ವರ್ಷದಿಂದ ಜೈಲಲ್ಲಿಟ್ಟು ತನ್ನ ಆಟ ಆಡುವಂತೆ ಪಳಗಿಸುತ್ತಿದ್ದಂತೆಯೇ ಕರ್ನಾಟಕದಲ್ಲಿ ಯಡಿಯೂರಪ್ಪನೆಂಬ ಮಿಕವನ್ನು ಜೈಲು ಹೊರಗಿಟ್ಟುಕೊಂಡೇ ಪಳಗಿಸುತ್ತಾ ಸ್ಥಳೀಯ ಚುನಾವಣೆಗಳಲ್ಲಿ ಸುಲಭ ಜಯ ಸಾಧಿಸಿದ ಕಾಂಗ್ರೆಸ್ ನಾಯಕರು ಆ ಅಮಲಿನಲ್ಲಿ ತಮ್ಮೆಲ್ಲ ಚುನಾವಣಾಪೂರ್ವ ಒಳಜಗಳಗಳನ್ನು ಮರೆತು ಪರಸ್ಪರ ಆಲಂಗಿಸಿಕೊಳ್ಳುತ್ತಿದ್ದ ಸಮಯಕ್ಕೆ ಸರಿಯಾಗಿ ವಿಧಾನಸಭಾ ಚುನಾವಣೆಗಳು ಪ್ರಕಟವಾಗಿ ಆಲಂಗಿಸಿಕೊಂಡಿದ್ದ ಕೈಗಳಲ್ಲೇ ಇದ್ದಕ್ಕಿದ್ದಂತೆ ಚೂರಿಗಳು ಕಾಣಿಸಿಕೊಂಡು ಪ್ರತಿಯೊಬ್ಬರೂ ತಮ್ಮ ಬೆನ್ನುಗಳನ್ನು ಕಾಯಲು ತಂತಮ್ಮ ಕಡೆಯ ಮರಿ ಪುಢಾರಿಗನ್ನು ನೇಮಿಸಿಕೊಂಡು ಓಡಾಡುತ್ತಿದ್ದಾರಂತಲ್ಲಾ!!



ಸ್ಥಳೀಯ ಚುನಾವಣೆಗಳಲ್ಲಿ ಬಿದ್ದ ಏಟಿನಿಂದ ತತ್ತರಿಸಿಹೋಗಿರುವ ಈಶ್ವರಪ್ಪ ಮತ್ತು ಯಡ್ಯೂರಪ್ಪ ಏಟಿನ ರುಚಿ ಮರೆಯಲು 'ಹೇಗಿದೆ ಏಟು!' ಎಂದು ಪರಸ್ಪರ ದೃಷ್ಟಿ ಯುದ್ಧದ ಆಟ ನಡೆಸಿರಲು ಅದನ್ನು ನೋಡಿ ದಾರಿಯಲ್ಲಿ ಹೋಗುತ್ತಿದ್ದ ಕಾಂಗ್ರೆಸ್ ನಾಯಕರು ಅವರಿಬ್ಬರನ್ನೂ ಬೇಕೆಂದೇ ರೇಗಿಸಲು 'ಭಯಂಕರ ಭಾಷಣವೀರರಾದ ನೀವು ಹೀಗೆ ದೃಷ್ಟಿಯುದ್ಧದಲ್ಲಷ್ಟೇ ತೊಡಗುವುದು ತರವಲ್ಲ ಮಾರಾಯರೇ! ಎಂದಾಕ್ಷಣ ಸ್ಫೂರ್ತಿಗೊಂಡ ಹುಂಬ ಈಶ್ವರಪ್ಪ ಯಡಿಯೂರಪ್ಪನನ್ನು ನೋಡಿ 'ಸದ್ಯ ನಿನ್ನಂತಹ ಕಡು ಭ್ರಷ್ಟ ಪಕ್ಷ ಬಿಟ್ಟು ನಮ್ಮ ಪಕ್ಷ ಸ್ವಚ್ಛವಾಯಿತು!' ಎಂದು ಭೀಷಣ ಭಾಷಣ ಶುರು ಮಾಡುತ್ತಿದ್ದಂತೆಯೇ ಅವರ ಮನೆಯಾಳು ಬಂದು, 'ಯಜಮಾನರೇ, ನೋಟು ಎಣಿಸುವ ಎರಡನೇ ಮೆಷಿನ್ನೂ ಕೆಟ್ಟುಹೋಗಿದೆ. ಏನು ಮಾಡುವುದೆಂದು ಅಮ್ಮಾವ್ರು ಕೇಳಿಕೊಂಡು ಬರಲು ಕಳಿಸವ್ರೆ' ಎನ್ನಲು ಅಲ್ಲಿನ ಪರಿಸ್ಥಿತಿ ವಿಪರೀತ ಬಿಗಡಾಯಿಸಿ ಆ ಮನಯಾಳಿನತ್ತ ಕೈತೋರಿಸಿದ ಈಶ್ವರಪ್ಪ 'ಇವನ ನಾಲಿಗೆ ಸೀಳಿ!' ಎಂದು ಅರಚಿ ಜಾಗ ಖಾಲಿ ಮಾಡಿದರಂತಲ್ಲಾ!



ಇದನ್ನೆಲ್ಲ ನೋಡಿ ಬಿದ್ದು ಬಿದ್ದು ನಗಲಾರಂಭಿಸಿದ ಯಡ್ಯೂರಪ್ಪನನ್ನು ಕಾಂಗ್ರೆಸ್ ನಾಯಕರು ಹರಕೆಯ ಕುರಿಯನ್ನು ಕಂಡು ಕನಿಕರಪಡುವವರಂತೆ 'ವಿಪರೀತ ನಗುವುದು ಒಳ್ಳೆಯದಲ್ಲ!' ಎಂದು ಯಡ್ಯೂರಪ್ಪನಿಗೆ ಕಣ್ಣು ಹೊಡೆದು ಹೇಳಿ ಅದನ್ನು ಜನ ತಪ್ಪು ತಿಳಿಯಬಾರದೆಂದು, 'ಇದು ಆರೋಗ್ಯದ ದೃಷ್ಟಿಯಿಂದ ಹೇಳಿದ ಮಾತಷ್ಟೇ!' ಎಂದು ಜನಕ್ಕೂ ಕಣ್ಣು ಹೊಡೆದು ಮುಂದೆ ಹೋದರಂತಲ್ಲಾ!



ಇದರಿಂದೆಲ್ಲ ಕಸಿವಿಸಿಗೊಂಡಂತಾದ ಯಡ್ಯೂರಪ್ಪ, ಕೂಡಲೇ ತಮ್ಮ ಆಪ್ತರ ಮೂಲಕ ಶೋಭಾರನ್ನು ಕರೆಸಿ 'ನನಗೆ ಏನೋ ತೋಚದಾಗಿದೆ! ನಿನ್ನೊಡನೆ ತಕ್ಷಣ ಖಾಸಗಿಯಾಗಿ ಮಾತಾಡಬೇಕಿದೆ' ಎಂದು ಹೇಳಲು ಶೋಭಾಗೆ ಸುತ್ತಮುತ್ತಲಿದ್ದ ಪಕ್ಷದ ಅಭಿಮಾನಿಗಳ ಎದುರು ಮುಜುಗರ ಉಂಟಾದಂತಾಗಿ ಅದನ್ನು ಒಂದೇ ಮಾತಿನಲ್ಲಿ ಪರಿಹರಿಸುವಂತೆ, 'ಎಲ್ಲ ಗೊಂದಲಕ್ಕೂ ಒಂದೇ ಉತ್ತರ. ಮುಂದಿನ ಸರ್ಕಾರದಲ್ಲಿ ನಾನು ಉಪ ಮುಖ್ಯಮಂತ್ರಿಯಾಗುವುದು. ಅದೇ ನೀವು ಮಾಡಬೇಕಾದ ಮುಂದಿನ ರಾಜಕೀಯ' ಎಂದು ಕಡ್ಡಿ ಮುರಿದಂತೆ ಹೇಳಿ ಕಾರು ಹತ್ತಿ ಹೋಗೇಬಿಡಲು, ಯಡ್ಯೂರಪ್ಪ 'ಎಲಾ ಹೆಣ್ಣೇ!' ಎಂದುಕೊಳ್ಳುತ್ತಾ ಸುತ್ತ ನಿಂತಿದ್ದ ಪುತ್ರ ರಾಘವೇಂದ್ರ, ಪುತ್ರಿ ಅರುಣಾದೇವಿಯವರನ್ನು ಕಂಡು ಅರ್ಧ ಮುಜುಗರ ಅರ್ಧ ಆನಂದದಲ್ಲೇ ಅಲ್ಲಿಂದ ಕೊಂಚ ದೂರ ಸರಿದು ಈ ರಾಜಕೀಯಕ್ಕೆ ಅಡ್ಡಿಯಾಗಬಹುದಾದ ಮೋಟಮ್ಮನ ಮನವೊಲಿಸಲು ಸಿದ್ದರಾಮಯ್ಯನಿಗೆ ಫೋನ್ ಹಚ್ಚಿದರಂತಲ್ಲಾ!



ಅತ್ತ ಕಡೆ ಕರೆ ಸ್ವೀಕರಿಸಿದ ಸಿದ್ಧರಾಮಯ್ಯ ಇಂತಹ ಕರೆ ನನಗೆ ಬರಬೇಕಾದರೆ ಇದು ಹೈಕಮಾಂಡ್‌ನೊಂದಿಗೆ ಯಡ್ಯೂರಪ್ಪ ಮಾಡಿಕೊಂಡಿರುವ ಗುಪ್ತ ಒಪ್ಪಂದದ ಫಲವೇ ಇರಬೇಕೆಂದು, ಇನ್ನು ನನ್ನ ಬದುಕಿನ ಮಹದಾಸೆ ಈಡೇರದಂತೆಯೇ ಎಂದು ಅನಂದತುಂದಿಲರಾಗಿ, 'ಶೋಭಾ ಒಳ್ಳೇ ಚಾಯ್ಸ್!. ನಮ್ಮ ನಾಯಕ ಲೋಹಿಯಾ ಹೇಳ್ತಿದ್ದಂಗೆ ಏನು ಮಾಡಿದ್ರೂ ಒಂದು ಸೌಂದರ್ಯ ಪ್ರಜ್ಞೆ ಇರಬೇಕು! ಹಾಗಾಗಿ ನಮ್ಮ ಮೋಟಮ್ಮಂಗೆ ಇಲ್ಲಿ ಚಾನ್ಸೇ ಇಲ್ಲ ಬಿಡಿ!' ಎಂದು ಯಾವುದೋ ಪುರಾತನ ಕಾಲದಲ್ಲಿ ಇಸ್ಪೀಟಾಟದ ಮಧ್ಯೆ ಕೇಳಿಸಿಕೊಂಡಿದ್ದ ಲೋಹಿಯಾ ಮಾತನ್ನು ತಾನು ಅರ್ಥ ಮಾಡಿಕೊಂಡಿದ್ದಂತೆ ರಾಜಕೀಯ ವಿದ್ವತ್ತಿನ ಟೀವಿಯಲ್ಲಿ ಉದುರಿಸಲು ಅತ್ತ ಕಡೆ ಯಡ್ಯೂರಪ್ಪನಿಗೆ ಮೊದಲು ಏನೂ ಅರ್ಥವಾಗದೆ; ಅರ್ಥವಾದ ಕೂಡಲೇ ಗಾಬರಿಯಾಗಿ 'ಎಲಾ ಘಟಿಂಗನೇ' ಎಂದು ಫೋನ್ ಕಟ್ ಮಾಡಿರಂತಲ್ಲಾ!



ಇದನ್ನೆಲ್ಲ ನೋಡುತ್ತಾ ಕುಮಾರಸ್ವಾಮಿ ತನ್ನ ಕಡೆ ಯಾರೂ ತಿರುಗಿ ನೋಡುತ್ತಲೂ ಇಲ್ಲ. ದೂರವಾಣಿ ಕರೆ ಮಾಡುತ್ತಲೂ ಇಲ್ಲ ಎಂದು ಶಾನೆ ಬೇಜಾರಾಗಿರುವ ಹೊತ್ತಿನಲ್ಲೇ ಪುರಸಭಾ ಚುನಾವಣೆಗಳಲ್ಲಿ ರಾಮನಗರ, ಮಂಡ್ಯ ಮೈಸೂರು ಸಂಸ್ಥಾನಗಳೂ ಕೈಬಿಟ್ಟು ಹೋದ ಸುದ್ದಿ ಬಂದು ಉ.ಕರ್ನಾಟಕದ ಒಂದಿಷ್ಟು ಪುಡಿ ಲಿಂಗಾಯತರು ಪಕ್ಷಕ್ಕೆ ಲಿಂಗ ಕಟ್ಟಿ ಪೂಜಿಸಬೇಕಾದ ಸ್ಥಿತಿ ಬಂದುದುದರಿಂದ ಬುದ್ಧಿ ಭ್ರಮಣೆಯಾದಂತಾಗಿ 'ಆ ಸಿದ್ಧರಾಮಯ್ಯನಿಗೆ ಹುಚ್ಚು ಹಿಡಿದಿದೆ! ಈ ಪರಮೇಶ್ವರನಿಗೆ ತಲೆ ಕೆಟ್ಟಿದೆ! ಆ ಕೃಷ್ಣನಿಗೆ ಮಂಕು ಬಡಿದಿದೆ' ಎಂದು ಬೀದಿಯಲ್ಲಿ ಅರಚುತ್ತಾ ಓಡಾಡುತ್ತಿರುವುದನ್ನು ಕಂಡು ದೇವೇಗೌಡರು ಪಂಚೆ ತುದಿಯೆತ್ತಿ ಕಣ್ಣೊರೆಸಿಕೊಂಡರಂತಲ್ಲಾ!



ಇನ್ನು ಅತ್ತ ಶ್ರೀರಾಮುಲು ಎಂಬ ಮಿನರಲ್ ವಾಟರ್–ಸೆಂಟ್ ಗಿರಾಕಿಯು ಅಕ್ಕಪಕ್ಕದಲ್ಲಿ ರಕ್ಷಿತಾ–ಪೂಜಾ ಎಂಬ ಶಾಕಿನಿ–ಡಾಕಿನಿಯರನ್ನಿರಿಸಿಕೊಂಡು ನಡೆಸಿದ ಭರ್ಜರಿ ಪ್ರಚಾರದ ಹೊರತಾಗಿಯೂ ತನ್ನ ಕರ್ಮಭೂಮಿ ಬಳ್ಳಾರಿಯಲ್ಲೇ ಪಕ್ಷ ಗುಡಿಸಿ ಗುಂಡಾಂತರವಾದುದನ್ನು ಕಂಡು ಕೆರಳಿ ಕೆಂಡವಾಗಿ ಹೋಗಿ, ಇದಕ್ಕೆಲ್ಲ ನಾನು ಓದಲಾಗದ, ಉಚ್ಚರಿಸಲಾಗದ ಅಂಬೇಡ್ಕರ್, ಫುಲೆ, ಶಾಹು, ನಾಲ್ವಡಿ ಮುಂತಾದ ಹೆಸರುಗಳನ್ನು ತನ್ನ ನಾಲಗೆಯ ಮೇಲೆ ಹೇರಿದ, ರಾಜ್ಯದಲ್ಲಿ ಯಾವ ಪಕ್ಷ ಒಡೆದರೂ ಅಲ್ಲಿ ಹೈನಾಗಳಂತೆ ಹಾಜರಾಗುವ ಇಬ್ಬರು ಬುದ್ಧಿಜೀವಿ ಕರಟಕ ದಮನಕರತ್ತ ಒಮ್ಮೆ ದುರುಗುಟ್ಟಿ ನೋಡಲು ಒಂದು ಹೈನಾ ಹೆದರಿ ಕಂಗಾಲಾಗಿ ಪಲಾಯನ ಮಾಡಿದರೆ ಇನ್ನೊಂದಕ್ಕೆ ಕಾಲೇ ಬಿದ್ದುಹೋದಂತಾಗಿ ಅಲ್ಲೇ ಹಾಕಿದ್ದನ್ನು ತಿಂದುಕೊಂಡು ಬಿದ್ದಿದೆಯೆಂದೂ ವರದಿಯಾಗಿದೆಯಲ್ಲಾ!



ಕರ್ನಾಟಕದ ರಾಜಕಾರಣ ಹಿಂಗೆ ವರ್ಣರಂಜಿತವಾಗಿ ಗರಿಗಟ್ಟುತ್ತಿರಲು ನಮ್ಮ ಡಂಬಾಯ ಸಾಹಿತಿಗಳು ಹೊಸ ಸ್ಫೂರ್ತಿಯಲ್ಲಿ ಧಾರವಾಡದಲ್ಲಿ 'ಜನ ಸಾಹಿತ್ಯ ಸಮಾವೇಶ'ವೊಂದನ್ನು ನಡೆಸಲು ಹೊರಟು ಅಲ್ಲಿ ಆ ಮುನ್ನ ನಡೆದಿದ್ದ 'ಸಾಹಿತ್ಯ ಸಂಭ್ರಮ' ಹಾಗಾದರೆ ದನ ಸಾಹಿತ್ಯ ಸಮಾವೇಶವೇ? ಎಂಬ ಪ್ರಶ್ನೆಯನ್ನು ಹುಟ್ಟು ಹಾಕಿ, ಆ ಸಂಭ್ರಮಕ್ಕೆ ಹಣಕಸು ಒದಗಿಸಿದ್ದ ಕನ್ನಡದ ಹೆಮ್ಮೆಯ ಪತ್ರಿಕೆಯೊಂದರ ಸಂಪಾದಕರ ಹೆಮ್ಮೆಗೆ ಏಟು ಬಿದ್ದ ಪರಿಣಮವಾಗಿ ಅವರು ಈ ಜನ ಸಾಹಿತ್ಯ ಸಮಾವೇಶದಲ್ಲಿ ಭಾಗವಹಿಸಲು ಬಂದ ಸಾಹಿತಿಗಳ ಪಟ್ಟಿಯನ್ನು ಪೋಲೀಸ್ ಠಾಣೆಯ ನೋಟೀಸು ಬೋರ್ಡಿನಲ್ಲಿನ ಪಟ್ಟಿಯಂತೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಸೇಡು ತೀರಿಸಿಕೊಂಡರಂತಲ್ಲಾ!

–ಕಿಡಿಗೇಡಿ

ಸಮಕಾಲೀನ

# ಅಂಬೇಡ್ಕರ್ ನೆನಪು




ಈ ಸಂಚಿಕೆಯಲ್ಲಿ ಏಪ್ರಿಲ್ ೧೪ರಂದು ಹುಟ್ಟಿದ ಡಾ. ಅಂಬೇಡ್ಕರ್‌ರನ್ನು ವಿಶೇಷವಾಗಿ ನೆನಪಿಸಿಕೊಳ್ಳಲಾಗುತ್ತಿದೆ. ಯುಗ ಪುರುಷರಾದ ಅಂಬೇಡ್ಕರ್ ಶತಮಾನಗಳ ಕಾಲ ನಾವು ಆಚರಿಸಿಕೊಂಡು ಬಂದಿದ್ದ ಜಾತಿ ಪದ್ಧತಿಯ ಹಿಂದಿದ್ದ ತತ್ವ, ನಂಬಿಕೆ, ಆದರ್ಶಗಳು ಎಷ್ಟು ಹುಸಿ, ಮೋಸ ಮತ್ತು ಕ್ರೌರ್ಯಗಳಿಂದ ಕೂಡಿದ್ದವು ಎಂಬುದನ್ನು ತಮ್ಮ ಬದುಕು ಮತ್ತು ಚಿಂತನೆಗಳ ಮೂಲಕ ಸಾರಿ ತೋರಿದವರು. ಪುಣ್ಯವಶಾತ್, ಭಾರತದ ಆಕಾಶದಲ್ಲಿ ಸ್ವಾತಂತ್ರ್ಯ ಹೋರಾಟದ ಹೊತ್ತಿಗೇ ಮೂಡಿದ ಈ ಧೃವತಾರೆ ಗಾಂಧೀಯೊಂದಿಗೆ ಸೇರಿ ಹೊಸ ರಾಷ್ಟ್ರದ ಎರಡು ಕಣ್ಣುಗಳಲ್ಲಿ ಒಂದಾಗಿ ರಾಷ್ಟ್ರದ ಜನತೆಗೆ ಬೆಳಕು ತೋರಿದರು. ನನ್ನ ಪ್ರಕಾರ ಈ ಎರಡು ಕಣ್ಣುಗಳ ಮಧ್ಯೆ ಮೂಡಿದ ಮೂರನೆಯ (ಒಳ)ಕಣ್ಣು ಎಂದರೆ ಲೋಹಿಯಾ.

ಗಾಂಧಿ–ಅಂಬೇಡ್ಕರ್ ಮುಖಾಮುಖಿ ಅಥವಾ ಸಂವಾದ ಈಗ ಸವಕಲು ಮಾತುಗಳ ಬೊಂತೆಯಾಗಿ ರಾಜಕೀಯ ಹಿತಾಸಕ್ತಿಗಳ ಆಹಾರವಾಗಿಬಿಟ್ಟಿದೆ. ಹಾಗಾಗಿ ಅದನ್ನು ಇಂದಿಗೆ ಬೇಕಾದ ಹಾಗೆ ನಾವು ಪುನರ್‌ರೂಪಿಸಿಕೊಂಡು, ಪುನರ್‌ನಿರೂಪಣೆಗೆ ಒಳಪಡಿಸದಿದ್ದರೆ ಅವೆರಡೂ ಹೆಸರುಗಳನ್ನು ಹೇಳಲು ನಾವು ಅನರ್ಹರಾಗುತ್ತೇವೆ. ಅದಕ್ಕೆ ನೆರವಾಗಬಲ್ಲದ್ದು ಲೋಹಿಯಾ–ಅಂಬೇಡ್ಕರರ ಸಂಕ್ಷಿಪ್ತ; ಆದರೆ ಇಂದಿಗೂ ಅರ್ಥಪೂರ್ಣವೆನಿಸುವ ಸಂವಾದ. ಈ ಸಂಚಿಕೆಯಲ್ಲಿ ಈ ಸಂವಾದಕ್ಕೆ ಸಾಕ್ಷಿಯಾಗಿ ದಾಖಲಾಗಿರುವ ಪರಸ್ಪರರ ನಡುವಣ ತಲಾ ಎರಡು ಪತ್ರಗಳನ್ನೂ; ಈ ಪತ್ರ ಸಂವಾದ ನಡೆಯುತ್ತಿದ್ದುದರ ಮಧ್ಯೆಯೇ ಅಂಬೇಡ್ಕರ್ ಅನಿರೀಕ್ಷಿತವಾಗಿ ನಿಧನರಾದಾಗ ನಿರ್ದಿಷ್ಟವಾಗಿ ಅಂಬೇಡ್ಕರ್ ಬಗ್ಗೆ ಹಾಗೂ ಸಾರ್ವತ್ರಿಕವಾಗಿ ಆಗ ತಾನೇ ಒಡಮೂಡುತ್ತಿದ್ದ ದಲಿತ ರಾಜಕಾರಣದ ಮಾದರಿಗಳ ಬಗ್ಗೆ ಲೋಹಿಯಾ ತಮ್ಮ ಕಿರಿಯ ಗೆಳೆಯ ಮಧು ಲಿಮಯೆಗೆ ಬರೆದ ಪತ್ರವನ್ನು ಇಲ್ಲಿ ನೀಡುತ್ತಿದ್ದೇವೆ.

ಅದಕ್ಕೆ ಮೊದಲು ಅಂಬೇಡ್ಕರ್ ಮೊಮ್ಮಗ ಪ್ರಕಾಶ್ ಅಂಬೇಡ್ಕರ್‌ರ ಇತ್ತೀಚಿನ ಒಂದು ವಿವಾದಾತ್ಮಕ ಹೇಳಿಕೆಯ ಬಗ್ಗೆ ಅಂಬೇಡ್ಕರ್ ಅಧ್ಯಯನ ಕ್ಷೇತ್ರದಲ್ಲಿ ಇಂದು ಪ್ರತಿಷ್ಠಿತ ಹೆಸರಾದ ಡಾ. ಆನಂದ ತೇಲ್ತುಂಬ್ಡೆ ಅವರು ನೀಡಿರುವ ಒಂದು ವಿಶಿಷ್ಟ ಹಾಗೂ ಚರ್ಚಾರ್ಹವೂ ಅನ್ನಿಸುವ ವಿಶ್ಲೇಷಣೆಯನ್ನು ಅಂಬೇಡ್ಕರ್ ರಾಜಕಾರಣ ಪಡೆಯುತ್ತಿರುವ ಹೊಸ ಚಲನಶೀಲತೆಯ ದೃಷ್ಟಿಯಿಂದ ಗಮನಿಸಬಹುದಾಗಿದೆ. –ಸಂಪಾದಕ

# ಪ್ರಕಾಶ್ ಅಂಬೇಡ್ಕರರನ್ನು ಬೆಂಬಲಿಸುತ್ತಾ...

– ಆನಂದ್ ತೇಲ್ತುಂಬ್ಡೆ



**ಪ್ರ**ಕಾಶ್ ಅಂಬೇಡ್ಕರ್ ಅವರು ದಲಿತರಿಗೆ ನೀಡಿರುವ ರಾಜಕೀಯ ಮೀಸಲಾತಿ (ಪರಿಶಿಷ್ಟ ಜಾತಿಗಳು) ಮತ್ತು ಶಾಲೆ ಬಿಡುವ ಸಂದರ್ಭದಲ್ಲಿ ನೀಡಲಾಗುವ ವರ್ಗಾವಣೆ ಪತ್ರದಲ್ಲಿ ಜಾತಿಯನ್ನು ನಮೂದಿಸುವುದನ್ನು ಕೈಬಿಡಬೇಕೆಂದು ನೀಡಿದ ಇತ್ತೀಚಿನ ಹೇಳಿಕೆ ಹಲವು ಬಗೆಯ ಪ್ರತಿಕ್ರಿಯೆಗಳಿಗೆ ಕಾರಣವಾಗಿವೆ ಮತ್ತು ಅವೆಲ್ಲವುಗಳ ಬಗ್ಗೆ ಒಂದು ಚಿಂತನೆಯ ಅಗತ್ಯವಿದೆ.

ಪ್ರಕಾಶ್ ಅಂಬೇಡ್ಕರ್ ಅವರು ಭಾರಿಪ(ಬಹುಜನ್ ಮಹಾಸಂಘ)ದ ನಾಯಕರು– ಇದೊಂದು ರಾಜಕೀಯ ವೇದಿಕೆಯಾಗಿದ್ದು, ಅದು ಮಹಾರಾಷ್ಟ್ರದಲ್ಲಿನ ದಲಿತರು ಮತ್ತು ಕೆಳಹಂತದ ಹಿಂದುಳಿದ ಜಾತಿಗಳ ಜನರನ್ನು ಒಗ್ಗೂಡಿಸುವುದಕ್ಕೆ ಬಯಸುತ್ತದೆ. ಆ ನಿಟ್ಟಿನಲ್ಲಿ ತುಸು ಯಶಸ್ವಿಯೂ ಆಗಿದೆ. ಪ್ರಕಾಶ್ ಅಂಬೇಡ್ಕರ್ ಲೋಕಸಭೆಗೆ ಮೂರು ಬಾರಿ ಚುನಾಯಿತರಾಗಿದ್ದಾರೆ. ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೊಮ್ಮಗ ಕೂಡ. ಅವರ ವಿಲಕ್ಷಣವಾದ ಅಭಿಪ್ರಾಯಗಳಿಂದಾಗಿ, ವಿವಾದಗಳಿಗೆ ಅವರೇನೂ ಅಪರಿಚಿತರಲ್ಲ. ಸ್ವಲ್ಪ ಸಮಯದ ಕೆಳಗೆ, ಮರಾಠಿಯಲ್ಲಿ 'ಅಂಬೇಡ್ಕರ್ ಚಳುವಳಿ ಅಂತ್ಯಗೊಂಡಿದೆ' ಎನ್ನುವ ಹೆಸರಿನ ಪುಸ್ತಕವನ್ನು ಪ್ರಕಟಿಸಿ, ದಲಿತರಲ್ಲಿ ಅವರೊಂದು ಕೋಲಾಹಲವನ್ನೇ ಸೃಷ್ಟಿಸಿದ್ದರು. ಇತ್ತೀಚೆಗೆ ಅವರು ಒಂದು ಹೇಳಿಕೆ ನೀಡಿದ್ದಾರೆ. ಅದು ಕೆಲವು ಸಾರ್ವಜನಿಕ ವಲಯಗಳಲ್ಲಿ ಕೋಲಾಹಲವನ್ನುಂಟು ಮಾಡಿವೆ. ಈ ಹೇಳಿಕೆಯಲ್ಲಿ, ದಲಿತರಿಗೆ ನೀಡಿರುವ ರಾಜಕೀಯ ಮೀಸಲಾತಿ ಮತ್ತು ಶಾಲೆ ಬಿಡುವ ಸಂದರ್ಭದಲ್ಲಿ ನೀಡಲಾಗುವ ಸಾಲಾ ನಿರ್ಗಮನ ಪತ್ರದಲ್ಲಿ ಜಾತಿಯನ್ನು ನಮೂದಿಸುವುದನ್ನು ತಕ್ಷಣವೇ ಕೈಬಿಡಬೇಕೆಂದು ಹೇಳಿದ್ದಾರೆ. ಕುತೂಹಲಕಾರಿ ಸಂಗತಿ, ಈ ಹೇಳಿಕೆಗಳಿಗೆ ಬಂದ ಪ್ರತಿಕ್ರಿಯೆಗಳಲ್ಲ, ಆದರೆ, ಈ ಪ್ರತಿಸ್ಪಂದನೆಗಳ ನಮೂನೆ ತುಂಬಾ ಕುತೂಹಲಕಾರಿಯಾಗಿದೆ. ಮೊದಲ ಹೇಳಿಕೆಗೆ ದಲಿತ ವಲಯದಿಂದಲೇ, ಅದರಲ್ಲೂ ಸ್ಥಾಪಿತ ದಲಿತ ನಾಯಕರುಗಳಿಂದ ಮತ್ತವರಿಗೆ ಅಂಟಿಕೊಂಡವರಿಂದ, ಕೋಪೋದ್ರಿಕ್ತ ಪ್ರತಿಕ್ರಿಯೆಗಳನ್ನು ಹುಟ್ಟುಹಾಕಿದರೆ, ಬೇರೆಯವರಿಂದ ಅವರ ಹೇಳಿಕೆಗಳಿಗೆ ಸ್ವಾಗತ ಸಿಕ್ಕು, ಹೆಚ್ಚಾಗಿ ಹೊಗಳಿಕೆಗೆ ಪಾತ್ರವಾಗಿವೆ. ಅದರಲ್ಲೂ ಎದ್ದುಕಾಣುವಂತಹದ್ದು ಬಲಪಂಥೀಯ ಹಿಂದೂಗಳದ್ದು. ಪ್ರಗತಿಶೀಲ ಭಾರತೀಯರು ಎಂದು ಕರೆಸಿಕೊಳ್ಳುವ ಜನ ಮಾತ್ರ "ಗಂಭೀರ ಮೌನಕ್ಕೆ" ಶರಣಾದರು.



ಈವತ್ತು ದಲಿತರಿಗಿರುವ ರಾಜಕೀಯ ಮೀಸಲಾತಿಗಳ ಹುಟ್ಟನ್ನು ನೇರವಾಗಿ ೧೯೩೧–೩೨ರಲ್ಲಿ, ಮೂರು ಬಾರಿ ನಡೆದ ದುಂಡು ಮೇಜಿನ ಪರಿಷತ್ ನಂತರ, ಬ್ರಿಟಿಷ್ ಪ್ರಧಾನಿ ರಾಮ್ಸೇ ಮ್ಯಾಕ್ಡೊನಾಲ್ಡ್ ನೀಡಿದ ಮತೀಯ ತೀರ್ಪಿನ ವಿರುದ್ಧ ಗಾಂಧೀಜಿಯವರ ಆಮರಣಾಂತ ಉಪವಾಸದ ಒತ್ತಡಕ್ಕೆ ಮಣಿದು, ಅಂಬೇಡ್ಕರ್ ಸಹಿ ಮಾಡಿದ ಕುಪ್ರಸಿದ್ಧ ಪೂನಾ ಒಡಂಬಡಿಕೆಗೆ ಬಂದು ನಿಲ್ಲುತ್ತದೆ. ಈ ಮೀಸಲು ಸ್ಥಾನಗಳನ್ನು ಎರಡು ಹಂತದ ಮತದಾನದ ಮುಖಾಂತರ ಪಡೆದುಕೊಳ್ಳಬೇಕಾಗುತ್ತಿತ್ತು; ಪ್ರಾಥಮಿಕ ಸುತ್ತಿನಲ್ಲಿ, ದಲಿತರು ಮಾತ್ರ ತಮ್ಮ ನಾಲ್ವರು ಸಂಭವನೀಯ ಪ್ರತಿನಿಧಿಗಳನ್ನು ಆರಿಸಿಕೊಳ್ಳಬೇಕಾಗುತ್ತಿತ್ತು ಮತ್ತು ನಂತರದ ಸುತ್ತಿನಲ್ಲಿ ಎಲ್ಲ ಮತದಾರರು ಮತ ಚಲಾಯಿಸಿ, ನಾಲ್ವರಲ್ಲಿ ಒಬ್ಬನನ್ನು ಆಯ್ಕೆ

ಮಾಡಬೇಕಾಗುತ್ತಿತ್ತು. ಈ ಎರಡು ಹಂತದ ಆಯ್ಕೆ ಪದ್ಧತಿಯನ್ನು ರಾಷ್ಟ್ರ ಹೊಸ ಸಂವಿಧಾನವನ್ನು ಅನುಮೋದಿಸಿ ಒಪ್ಪಿಕೊಂಡ ನಂತರ, ಈಗಿರುವ ಮೀಸಲಾತಿ ರೀತಿಗೆ ದಾರಿ ಮಾಡಿಕೊಟ್ಟು, ಕೈಬಿಡಲಾಯಿತು. ದಲಿತ ಪ್ರತಿನಿಧಿಯನ್ನು ಇಲ್ಲಿ ಎಲ್ಲ ಮತದಾರರು ಸೇರಿಯೇ ಚುನಾಯಿಸುತ್ತಾರೆ. ಇದನ್ನು ಮೊದಲ ಹತ್ತು ವರ್ಷಗಳ ಅವಧಿಗಾಗಿ, ಸಂವಿಧಾನದ ೩೩೦ರ ವಿಧಿಯಡಿಯಲ್ಲಿ, ಅದನ್ನು ಅವಧಿಯ ಕೊನೆಯಲ್ಲಿ ಪರಾಮರ್ಶಿಸಿ ಅಗತ್ಯಬಿದ್ದರೆ ಕೈಬಿಡಬಹುದು ಎನ್ನುವ ಒಂದು ನಿಬಂಧನೆಯ ಜೊತೆ ಸೇರಿಸಲಾಗಿದೆ. ಆದಾಗ್ಯೂ, ಮೊದಲಿನಿಂದಲೂ, ಈ ಪದ್ಧತಿಯನ್ನು ಕೊನೆಗಾಣಿಸುವಂತೆ ದಲಿತರು ಆಗಾಗ್ಗೆ ಒತ್ತಾಯಿಸುತ್ತಿದ್ದರೂ, ಅದು ಅಂತ್ಯ ಕಾಣುವ ಮುನ್ನ ಆಳುವ ವರ್ಗಕ್ಕೆ ತನ್ನ ಬೆಲೆಯನ್ನು ಅನುಮಾನವಿಲ್ಲದಂತೆ ಋಜುವಾತುಪಡಿಸುತ್ತ, ಪ್ರತಿಬಾರಿಯೂ ಮಾದರಿ ಏಕಾಭಿಪ್ರಾಯದೊಂದಿಗೆ ತನಗೆ ತಾನೆ ನವೀಕರಣಗೊಳ್ಳುತ್ತಿದೆ.

ಈ ರಾಜಕೀಯ ಮೀಸಲಾತಿಗಳು ದಲಿತರ ಹೊಂದಾಣಿಕೆಯ ನೆರೆತೂಬುಗಳನ್ನು ತೆರೆದಿವೆ ಮತ್ತು ಅವರ ಸ್ವತಂತ್ರ ಪ್ರಾತಿನಿಧ್ಯದ ಸಾಧ್ಯತೆಗಳನ್ನು ಕುಗ್ಗಿಸಿವೆ. ಇದರಿಂದಾಗಿ, ದಲಿತರ ರಾಜಕಾರಣಿಗಳ ಆಯ್ಕೆಯಲ್ಲಿ ದಲಿತರ ಪ್ರಭಾವವಾಗಲಿ ಇಲ್ಲವೆ ಪರಿಣಾಮವಾಗಲಿ ಏನೇನು ಇಲ್ಲವಾಗಿದೆ. ಆದ್ದರಿಂದ ದಲಿತ ರಾಜಕಾರಣಿಗೆ ದಲಿತರ ಬಗ್ಗೆ ಯಾವುದೇ ಕಾಳಜಿ ವಹಿಸುವ ಅಗತ್ಯವಿಲ್ಲ. ಇನ್ನು ಅವರ ಹಿತಾಸಕ್ತಿ ಕಾಪಾಡುವ ಮಾತೆಲ್ಲಿ ಬಂತು? ನಿಜವಾಗಿ ಹೇಳುವುದಾದರೆ, ಅವರ ಆಯ್ಕೆ ಆಳುವ–ವರ್ಗದ ಪಕ್ಷಗಳ ಸಂಪನ್ಮೂಲಗಳು ಮತ್ತು ಮತಬ್ಯಾಂಕುಗಳನ್ನು ಸಂಪೂರ್ಣವಾಗಿ ಅವಲಂಬಿಸಬೇಕಾಗಿ ಬರುವುದರಿಂದ, ದಲಿತ ನಾಯಕರು ಪೂರ್ತಿಯಾಗಿ ಆ ಪಕ್ಷಗಳ ನಾಯಕತ್ವದ ಉಪಯುಕ್ತ ಸಾಧನವಾಗಿಬಿಡುತ್ತಾರೆ. ಈ ವ್ಯವಸ್ಥೆಯ ಋಣಾತ್ಮಕ ಮುಖ ಅನಾವರಣಗೊಂಡದ್ದು ನಿಜವಾದ ದಲಿತ ಅಭ್ಯರ್ಥಿಗಳು ಸುಲಭವಾಗಿ, ಆಳುವ–ವರ್ಗದ ಪಕ್ಷದ ಬೆಂಬಲಿತ ರಾಜಕೀಯ ಕುಬ್ಜರ ಕೈಯಲ್ಲಿ ಸೋಲುಂಡು ನೆಲಕಚ್ಚಿ ಮಕಾಡೆ ಮಲಗಿದಾಗ. ೧೯೫೨ರ ಸಾರ್ವತ್ರಿಕ ಚುನಾವಣೆಯಲ್ಲಿ ನಾರಾಯಣ ಕಜ್ರೋಕರ್ ಎಂಬ ಕಾಂಗ್ರೆಸ್ಸಿನ ಅಭ್ಯರ್ಥಿಯ ಎದುರು ಸ್ವತಃ ಅಂಬೇಡ್ಕರ್ ಅವರೇ ಸೋತುಹೋದರು. ಮತ್ತೊಮ್ಮೆ ೧೯೫೪ರಲ್ಲಿ ಬಾಂದ್ರಾ ಲೋಕಸಭಾ ಮೀಸಲು ಕ್ಷೇತ್ರದ ಉಪಚುನಾವಣೆಯಲ್ಲಿ, ಕಾಂಗ್ರೆಸ್ ನಿಲ್ಲಿಸಿದ್ದ, ರಾಜಕೀಯವಾಗಿ ಏನೇನೂ ಅಲ್ಲದ ಒಬ್ಬ ಭೌರಾವ್ ಬೋರ್ಕರ್ ಎನ್ನುವ ವ್ಯಕ್ತಿಯಿಂದ ಪರಾಭವಗೊಂಡರು. ರಾಜಕೀಯ ಮೀಸಲಾತಿಯ ವ್ಯವಸ್ಥೆ ಗುಲಾಮಗಿರಿಯನ್ನು ನೆಲೆಗೊಳ್ಳಿಸುವಿಕೆಯ ಒಂದು ಸಾಧನವಾಗಿದೆಯೆಂದು ಅವರಿಗೆ ಅರ್ಥವಾಯಿತು. ಅದಕ್ಕೆ ಕೊನೆಹಾಡುವಂತೆ ಅವರು ಅಕ್ಟೋಬರ್ ೨೧, ೧೯೫೫ರಲ್ಲೇ ಒತ್ತಾಯಿಸಿದರು.

ಮೀಸಲಾತಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗಿದೆಯಾದರೂ, ಒಬ್ಬನೇ ಒಬ್ಬ ದಲಿತ ಪ್ರತಿನಿಧಿ ಎಂದೂ ಕೂಡ, ದಲಿತವಿರೋಧಿ ನಲುವಿನ ವಿರುದ್ಧ ಅಥವ ದಲಿತರ ಮೇಲೆ ಹೆಚ್ಚುತ್ತಿರುವ ದುಷ್ಕೃತ್ಯಗಳ ಬಗ್ಗೆ ತನ್ನ ದನಿಯೆತ್ತಿಲ್ಲ. ನಿಜ ಹೇಳಬೇಕೆಂದರೆ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅಂತಹ ರಾಜಕೀಯ ನಿಲುವುಗಳ ಬೆಂಬಲಕ್ಕೆ ನಿಂತ ಬೇಕಾದಷ್ಟು ಉದಾಹರಣೆಗಳು ನಮಗೆ ಸಿಗುತ್ತವೆ. ಈ ರೋಗಗ್ರಸ್ಥ ಸ್ಥಿತಿಯನ್ನು ಸಾಬೀತುಪಡಿಸುವುದು ಕಷ್ಟದ ಕೆಲಸವಲ್ಲ. ಅಂಬೇಡ್ಕರ್ ನಂತರದ ದಿನಗಳಲ್ಲಿ, ದಲಿತರು ರಾಜಕೀಯ ಮೀಸಲಾತಿಯನ್ನು ಕೊನೆಗಾಣಿಸುವಂತೆ ಒತ್ತಾಯಿಸುತ್ತಲೇ ಹೋದರು. ಆದರೆ, ಆಳುವ ವರ್ಗಗಳು ಈ ಬಂಗಾರದ ಬಾತುಕೋಳಿ ತಮ್ಮ ಕೈತಪ್ಪಿ ಹೋಗದಂತೆಸಿಕೊಳ್ಳದಂತೆ ನೋಡಿಕೊಂಡವು. ೧೯೭೪ರಲ್ಲಿ, ಗುಜರಾತಿನ ದಲಿತ ಪ್ಯಾಂಥರ್‌ಗಳು ಸಾಂಕೇತಿಕವಾಗಿ, ಸಂವಿಧಾನದ ೩೩೦ನೇ ವಿಧಿಯನ್ನು ಸುಟ್ಟು ಅದನ್ನು ಕೊನೆಗಾಣಿಸುವಂತೆ ಬೇಡಿಕೆಯನ್ನಿಟ್ಟರು. ೧೯೮೨ರಲ್ಲಿ, ಪೂನಾ ಒಡಂಬಡಿಕೆಯ ೫೦ನೇ ವರ್ಷ ತುಂಬುವ ಸಂದರ್ಭದಲ್ಲಿ, ೩೩೦ನೇ ವಿಧಿಯನ್ನು ತೆಗೆದು ಹಾಕಲು ಒತ್ತಾಯಿಸಿ, ಕಾನ್ಷಿರಾಂ ದೇಶಾದ್ಯಂತ ಆಂದೋಲನವನ್ನೇ ಆರಂಭಿಸಿದರು. ಈಗ ಇರುವ ರಾಜಕೀಯ ಮೀಸಲಾತಿ ಚಮಚಾ ಸಂಸ್ಕೃತಿಯನ್ನು ಸೃಷ್ಟಿಸಿದೆಯೆಂದು ಅವರು ಹೇಳಿದರು. ಆದರೆ ಈ ಎಲ್ಲ ಇತಿಹಾಸಕ್ಕೆ, ರಾಮದಾಸ ಅಥಾವಳೆಯಂತಹ ಜನರ ದೃಷ್ಟಿಯಲ್ಲಿ ಯಾವುದೇ ಮಹತ್ವವಿಲ್ಲ. ಅದೊಂದು ಕ್ಷುಲ್ಲಕ ಸಂಗತಿ ಅವರಿಗೆ. ರಾಜಕೀಯ ಮೀಸಲಾತಿ ನೀತಿಯಿಂದ ಇಂತಹ ಅವಕಾಶವಾದಿಗಳು 'ಅಪರಿಚಿತ ಕಹಿ ಹಣ್ಣಿನ' ಬೆಳೆ ಬೆಳೆದರು. ಕಟ್ಟಕಡೆಗೆ ಪ್ರಕಾಶ್ ಅಂಬೇಡ್ಕರ್ ಅವರನ್ನು ದಲಿತ ವಿರೋಧಿ ಎಂದೂ ಕರೆದರು.

**ವಿನಾಶದತ್ತ...**

ರಾಜಕೀಯ ಮೀಸಲಾತಿಯನ್ನು ಕಿತ್ತು ಹಾಕಬೇಕೆನ್ನುವ ಬೇಡಿಕೆ ನ್ಯಾಯ ಸಮ್ಮತವಾಗಿದ್ದರೂ ಕೂಡ, ಶಾಲಾ ದಾಖಲೆಗಳಲ್ಲಿ ಜಾತಿಯನ್ನು ನಮೂದಿಸುವುದನ್ನು ಕೈಬಿಡಬೇಕೆನ್ನುವ ಬೇಡಿಕೆ, ಎಲ್ಲಿಯವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಮುಂದುವರಿಯುತ್ತದೋ ಅಲ್ಲಿಯವರೆಗೆ, ಕೇವಲ ಬಣ್ಣದ ಮಾತು ಅನ್ನಿಸುತ್ತದೆ. ಆದಾಗ್ಯೂ, ದಲಿತರು ಮತ್ತು ದಲಿತೇತರರು ಶಾಲೆಗೆ ಮಕ್ಕಳನ್ನು ಸೇರಿಸುವಾಗ ಜಾತಿಯನ್ನು ನಮೂದಿಸಲು ಇಷ್ಟಪಡದಿದ್ದರೆ, ಅವರ ಈ ಇಷ್ಟವನ್ನು ಮಾನ್ಯಮಾಡಬೇಕು, ಆಗ ಅದು ಬಣ್ಣದ ಮಾತಾಗದೆ, ಸಮರ್ಥನೀಯ ಅನ್ನಿಸಿಕೊಳ್ಳುತ್ತದೆ. ಈವತ್ತು, ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಾಗ, ಅನೇಕ ಜನರನ್ನು, ತುಂಬಾ ಅಪಮಾನಕರ ರೀತಿಯಲ್ಲಿ ಜಾತಿ ಮತ್ತು ಧರ್ಮವನ್ನು, ಅವರಿಗೆ ಅವುಗಳಲ್ಲಿ ನಂಬಿಕೆ ಇಲ್ಲದಿದ್ದರೂ, ನಮೂದಿಸಲು ಒತ್ತಾಯಿಸಲಾಗುತ್ತಿದೆ. ಆದ್ದರಿಂದ 'ಜಾತಿ ಇಲ್ಲ' ಎನ್ನುವ ಆಯ್ಕೆಯನ್ನು ಪಾಲಕರಿಗೆ ಬಿಡುವುದು ಎಲ್ಲರೂ ಮೆಚ್ಚಬಹುದಾದ ಸಲಹೆಯಾಗಿದೆ. ಇದರಿಂದಾಗಿ ಈ ಅನಿಷ್ಟದಿಂದ ಪಾರಾಗಬಹುದಾಗಿದೆ. ಹಾಗೂ, ಮೀಸಲಾತಿ ಬಯಸುವ ಜನರ ಸಂಖ್ಯೆಯನ್ನು ಗಣನೀಯ ಮಟ್ಟದಲ್ಲಿ ಕಡಿಮೆ ಮಾಡಬಹುದಾಗಿದೆ ಮತ್ತು ಈ ಪದ್ಧತಿಯನ್ನು ಕಂಡು ಹೇವರಿಕೆ ಪಡುವ ಜನರ ಗಾತ್ರದ ಅಂದಾಜೂ ಸಿಗುತ್ತದೆ.

ಇದನ್ನು ಕನಿಷ್ಠತಾವಾದಿ ಪರಿಹಾರವೆಂದು ಸೂಚಿಸುವ ಹೊತ್ತಿನಲ್ಲೇ ವಾಗ, ಜಾತಿ ಪದ್ಧತಿಯನ್ನು ಭದ್ರವಾಗಿ ನೆಲೆಯೂರುವಂತೆ ಮಾಡುತ್ತಿರುವ ಈ ಜಾತಿ ಆಧಾರಿತ ನೀತಿಗಳ ಬಗ್ಗೆ ನಾವು ಆಳವಾಗಿ ಯೋಚಿಸಬೇಕಿದೆ. ವಸ್ತುನಿಷ್ಠವಾಗಿ ಮಾತಾಡುವುದಾದರೆ, ಜಾತಿ ಆಧಾರಿತ ಮೀಸಲಾತಿ ಗಣನೆಗೆ ಬರುವುದು ಪ್ರತಿಷ್ಠಿತ ಸಂಸ್ಥೆಗಳು ನೀಡುವ ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ– ಐಐಟಿ, ಐಐಎಂ, ಮತ್ತು ಅಂಥವುಗಳಿಗೆ ಸಂಬಂಧಿಸಿದಂತೆ ಮಾತ್ರ. ವಾಸ್ತವ ಸಂಗತಿಯೇನೆಂದರೆ, ಈ ಸಂಸ್ಥೆಗಳಲ್ಲಿ ಮೀಸಲಿರಿಸಿದ ಸೀಟುಗಳು ವರ್ಷದಿಂದ ವರ್ಷಕ್ಕೆ ಅರ್ಹ ಅಭ್ಯರ್ಥಿಗಳಿಲ್ಲದೆ ಹಾಗೆಯೇ ಖಾಲಿ ಉಳಿಯುತ್ತವೆ ಎನ್ನುವುದು. ಇದು ಸಾಕಷ್ಟು ವಿದ್ಯಾರ್ಥಿಗಳು, ಅರ್ಹತೆಗೆ ಬೇಕಾದ ಕನಿಷ್ಠ ಅಂಕಗಳನ್ನು ಅಪಾಯಕಾರಿ ಮಟ್ಟಕ್ಕೆ ಇಳಿಸಿದ ಮೇಲೂ, ಈ ಸಂಸ್ಥೆಗಳಲ್ಲಿ ಸ್ಥಾನ ಪಡೆಯಲು ಅರ್ಹತೆ ಪಡೆಯುತ್ತಿಲ್ಲವೆನ್ನುವುದನ್ನು ತೋರಿಸುತ್ತದೆ.

ಈ ಎಲ್ಲ ಪ್ರಕ್ರಿಯೆಗಳ ವಸ್ತುನಿಷ್ಠ ವಿಶ್ಲೇಷಣೆ ದಲಿತ ವಿದ್ಯಾರ್ಥಿಗಳ ದುರ್ಬಲ ಶೈಕಣಿಕ ಅಡಿಪಾಯದತ್ತ ಬೊಟ್ಟು ಮಾಡುತ್ತದೆ. ಅದು, ಹಲವು ಸ್ತರಗಳ ಶಾಲಾಶಿಕ್ಷಣ ಪದ್ಧತಿ ಇದಕ್ಕೆ ಕಾರಣವೆಂದು ಹೇಳಿ ಮುನ್ನಡೆಯುತ್ತದೆ. ಈ ಶಿಕ್ಷಣ ಪದ್ಧತಿ ಪಾಲಕರ ಸಾಮಾಜಿಕ–ಆರ್ಥಿಕ ಮಟ್ಟಕ್ಕನುಗುಣವಾಗಿ ಖಾದ್ಯಗಳನ್ನು ಉಣಬಡಿಸುತ್ತದೆ. ಒಂದು ವೇಳೆ, ಎಲ್ಲಾ ಮಕ್ಕಳಿಗೂ ಉಚಿತ, ಗುಣಮಟ್ಟದ ಶಿಕ್ಷಣ ಒಂದೇ ತೆರನಾದ ಶಾಲಾ ಪದ್ಧತಿಯಲ್ಲಿ ನೀಡಿದ್ದೇ ಆಗಿದ್ದರೆ, ಆಗ ಜಾತಿ ಆಧಾರಿತ ತರತಮ ನೀತಿಯನ್ನು ರೂಪಿಸುವ ಅಗತ್ಯವೇ ಬರುತ್ತಿರಲಿಲ್ಲ. ಶಿಕ್ಷಣದ ಹಕ್ಕು ಕಾಯಿದೆಯ ಅನುಷ್ಠಾನವನ್ನು (ಆರ್‌ಟಿಐ), ಮನಸ್ಸಿಲ್ಲದೆ ದಯಪಾಲಿಸಲಾಗಿದ್ದು ಕೇವಲ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪರಿಣಾಮವಾಗಿ ಮತ್ತು ಬಹಳವಾಗಿ ತುತ್ತೂರಿ ಊದಿದ ನಂತರ, ಜಾರಿಗೆ ತಂದ ಆರ್‌ಟಿಇ ಕಾಯಿದೆ ೨೦೧೦, ಸಂವಿಧಾನದ ಮೂಲ

ನಿಯಮಗನುಗುಣವಾಗಿರದೆ, ಅದರ ವಿರುದ್ಧವಾಗಿದೆ. ಅದು ಹಲವು ಸ್ತರಗಳ ಶಿಕ್ಷಣವನ್ನು ಸಕ್ರಮಗೊಳಿಸಿದೆ. ದುರ್ಬಲ ವರ್ಗಗಳಿಗೆ ಮೀಸಲಾತಿಯನ್ನು ಒಂದು ಪ್ರತ್ಯೌಷಧವಾಗಿ ತರುವ ಮೂಲಕ ಚೇಷ್ಟೆ ಮಾಡಿದಂತಿದೆ. ಆರ್‌ಟಿಇ ಎಂದು ಕರೆಯುವ ಈ ಕಾಯಿದೆ ಒಂದು ಸಾಮಾಜಿಕ ಗುಂಪಾಗಿ ದಲಿತರನ್ನು ಬಲಿಪಶುಗಳನ್ನಾಗಿಸಿದ. ಆದರೆ, ಅವರ ರಾಜಕೀಯ ನಿರ್ವಹಣಾ ವ್ಯವಸ್ಥಾಪನೆ ಎಷ್ಟೊಂದು ಪರಿಣಾಮಕಾರಿಯಾಗಿದೆ ಎಂದರೆ, ಒಬ್ಬನೇ ಒಬ್ಬ ದಲಿತ ನಾಯಕ ಅದರ ವಿರುದ್ಧ ತನ್ನ ಸಣ್ಣ ದನಿ ಎತ್ತಲಿಲ್ಲ. ೧೯೯೦ರಿಂದ ಸಾರ್ವಜನಿಕ ಕ್ಷೇತ್ರದಲ್ಲಿ, ಉದ್ಯೋಗ ಸೃಷ್ಟಿಯಲ್ಲಿ ಋಣಾತ್ಮಕ ಬೆಳವಣಿಗೆಯ ಕಾರಣದಿಂದಾಗಿ, ಉದ್ಯೋಗದಲ್ಲಿ ಮೀಸಲಾತಿ ಒಂದು ರೀತಿಯಲ್ಲಿ ನಿಸ್ಸತ್ವಗೊಂಡಿದೆ. ಆದರೆ ಕಣ್ಣಿಗೆ ಹೊಡೆಯುವ ಇಂತಹ ನೈಜ ಸ್ಥಿತಿ ಇದ್ದಾಗಲೂ, ಇದಕ್ಕೆ ಸರಕಾರದ ನಮೂಸ ಉದಾರೀಕರಣ ನೀತಿಗಳೇ ಕಾರಣವಾಗಿದ್ದರೂ ಕೂಡ, ದಲಿತ ನಾಯಕರು ಮೀಸಲಾತಿಯ ಹಾಡನ್ನು ಇನ್ನೂ ಗುನುಗುತ್ತಲೇ ಇದ್ದಾರೆ ಜಾಗತಿಕರಣದ ಹೆಜ್ಜೆಗಳಿಗೆ ಹೆಜ್ಜೆ ಹಾಕುತಾ;ಅದು ತಮಗೆ ಲಾಭಕರವೆಂದು ಕೇಕೆ ಹಾಕುತ್ತಾ. ಖಂಡಿತವಾಗಿಯೂ, ಇಂಥ ನಿಲುವು ಬಾಬಾಸಾಹೇಬ್ ಅಂಬೇಡ್ಕರ್ ಅವರ 'ಜಾತಿ ವಿನಾಶ' ಕಾರ್ಯಕ್ರಮಕ್ಕೆ ಪೂರಕವಾಗಿಲ್ಲ, ಇದನ್ನೇ ಪ್ರಕಾಶ್ ಅಂಬೇಡ್ಕರ್ ಪುನರುಚ್ಚರಿಸಿದ್ದಾರೆ, ಅಷ್ಟೆ.

**(ಕನ್ನಡಕ್ಕೆ: ಎಂ.ಎಸ್. ರುದ್ರೇಶ್ವರಸ್ವಾಮಿ**
**ಕೃಪೆ: ದ ಎಕನಾಮಿಕ್ ಅಂಡ್ ಪೊಲಿಟಿಕಲ ವೀಕ್ಲಿ)**

# ಡಾ.ಅಂಬೇಡ್ಕರ್ ಅವರೊಂದಿಗೆ ಡಾ. ಲೋಹಿಯಾ ಪತ್ರ ವ್ಯವಹಾರ



**ಇದು ಲೋಹಿಯಾ ಪ್ರಜಾ ಸಮಾಜವಾದಿ ಪಕ್ಷದ ನಾಯಕರೊಂದಿಗೆ ಅವರಲ್ಲಿ ಕೆಲವರು ಕಾಂಗ್ರೆಸ್ಸಿನೊಂದಿಗೆ ನಡೆಸಿದ್ದ ಹೊಂದಾಣಿಕೆಯ ಮತ್ತು ಅದರ ಹಿಂದಿದ್ದ ತಾತ್ವಿಕ ರಾಜಿಯ ಪ್ರಯತ್ನಗಳನ್ನು ಪ್ರತಿಭಟಿಸಿ ಆ ಪಕ್ಷದಿಂದ ಹೊರಬಿದ್ದ ನಂತರ ತಮ್ಮದೇ ಸಮಾಜವಾದಿ ಪಕ್ಷವನ್ನು ರೂಪಿಸುವ ಹೊತ್ತಿನಲ್ಲಿ ಅದರ ಆವರಣದೊಳಕ್ಕೆ ಅಂಬೇಡ್ಕರ್‌ರನ್ನು ಸೆಳೆದುಕೊಳ್ಳಲು ನಡೆಸಿದ ಪ್ರಯತ್ನದ ಪರಿಯನ್ನು–ಅದರ ಉದ್ದೇಶ, ಅನಿವಾರ್ಯತೆ ಮತ್ತು ಮುನ್ನೋಟಗಳೊಂದಿಗೆ ಹೇಳುವ ಪತ್ರಗಳು. ಗಾಂಧಿ–ಅಂಬೇಡ್ಕರ್ ಮುಖಾಮುಖಿಯ ತಾತ್ವಿಕ ಭಿತ್ತಿಯನ್ನು ಅರಿಯಲೂ ಇದು ಸಹಾಯಕವಾಗಬಹದು–ಸಂ**

ಹೈದರಾಬಾದ್
೧೦ ಡಿಸೆಂಬರ್ ೧೯೫೫

ಪ್ರೀತಿಯ ಡಾ. ಅಂಬೇಡ್ಕರ್,

ಲಗತ್ತಿಸಲಾದ ಪತ್ರಿಕೆ ಮುಂತಾದವು ತಾವೇ ವಿವರಣೆ ನೀಡಬಲ್ಲವು. 'ಮ್ಯಾನ್‌ಕೈಂಡ್' ಜಾತಿ ಸಮಸ್ಯೆಯನ್ನು ಇಡಿಯಾಗಿ ಬಿಚ್ಚಿ ತೋರಿಸಲು ಪ್ರಾಮಾಣಿಕವಾಗಿ ಯತ್ನಿಸಿದೆ. ಆದ್ದರಿಂದ ನಿಮ್ಮಿಂದ ಒಂದು ಲೇಖನ ಬಂದರೆ ತುಂಬ ಸಂತೋಷ. ಲೇಖನಗಳ ಮಿತಿ ೨೫೦೦ರಿಂದ ೪೦೦೦ ಶಬ್ದಗಳಿಷ್ಟಿರಬೇಕೆಂದು ಪತ್ರಿಕೆ ನಿರೀಕ್ಷಿಸುತ್ತದೆ. ವಿಷಯದ ಆಯ್ಕೆ ಸಹಜವಾಗಿಯೇ ನಿಮ್ಮದು. ದೇಶದಲ್ಲಿ ಪ್ರಚಲಿತವಿರುವ ಜಾತಿ ಪದ್ಧತಿಯ ಯಾವುದಾದರೊಂದು ಮಗ್ಗುಲನ್ನು ಆಯ್ಕೆ ಮಾಡಿಕೊಂಡು ಭಾರತದ ಜನ ಬರೀ ಸಿಟ್ಟಿನಂದಷ್ಟೇ ಅಲ್ಲ, ದಂಗು ಬಡಿದು ಕುಳಿತುಕೊಳ್ಳುವಂತೆ ಮಾಡುವಂಥದೇನನ್ನಾದರೂ ಬರೆಯಿರೆಂದು ಮನವಿ ಮಾಡಿಕೊಳ್ಳುತ್ತೇನೆ. ಮಧ್ಯ ಪ್ರದೇಶದಲ್ಲಿ ಚುನಾವಣೆ ಪ್ರಚಾರದ ಕಾಲಕ್ಕೆ ನಾನು ನಿಮ್ಮನ್ನು ಕುರಿತು ಮಾಡಿದ ಭಾಷಣಗಳನ್ನು, ನನ್ನ ಜೊತೆಗೆ ಸಂಚರಿಸಿದ ನಿಮ್ಮ ಪ್ರತಿನಿಧಿ ನಿಮಗೆ ಅರುಹಿದನೋ ಇಲ್ಲವೋ ಗೊತ್ತಿಲ್ಲ. ಈಗಲೂ ಕೂಡ ನಮ್ಮ ಕೆಲಸಗಳಲ್ಲಿ ಕೋಪದೊಂದಿಗೆ ಸಹಾನುಭೂತಿ ಬೆರೆತುಕೊಂಡಿರಬೇಕೆಂದೇ ನಾನು ಆಶಿಸುತ್ತೇನೆ. ಅದರಂತೆ ನೀವು ಬರೀ ಅನುಸೂಚಿತ ಜಾತಿಗಳಷ್ಟೇ ಅಲ್ಲ ಇಡೀ ಭಾರತೀಯರ ನಾಯಕರಾಗಬೇಕೆಂದೂ ಬಯಸುತ್ತೇನೆ.

ನಮ್ಮ 'ವಲಯ ಅಧ್ಯಯನ ಶಿಬಿರ'ದಲ್ಲಿ ಮಧ್ಯೆ ನೀವಿರುವುದಾದರೆ ತುಂಬ ಸಂತೋಷವಾಗುತ್ತದೆ. ಜೊತೆಗಿರುವ ವಿಷಯ ಸೂಚಿ ಸ್ಥೂಲ ದಿಗ್ದರ್ಶನಕ್ಕಾಗಿ ಮಾತ್ರ. ನಿಮ್ಮ ಭಾಷಣದ ಸಂಗ್ರಹವನ್ನು ಮುಂಚಿತವಾಗಿಯೇ ಒದಗಿಸಿದರೆ ನಂತರ ಪ್ರಕಟಣೆಗೆ ಅನುಕೂಲವಾಗುತ್ತದೆ. ಒಂದು ಘಂಟೆ ಅವಧಿಯ ಭಾಷಣದ ನಂತರ ಅಷ್ಟೇ ಸಮಯದ ಚರ್ಚೆಯಾಗಬೇಕೆಂದು ನಿರೀಕ್ಷಿಸುತ್ತೇನೆ.

ಸಮಾಜವಾದಿ ಪಕ್ಷದ ಸ್ಥಾಪನಾ ಸಮ್ಮೇಳನ ನಿಮ್ಮಲ್ಲಿ ಆಸಕ್ತಿ ಕೆರಳಿಸಬಹುದೇನೋ ನನಗೆ ತಿಳಿಯದು.. ಪಕ್ಷದ ಸದಸ್ಯರಾಗಿರದಿದ್ದರೂ ಸಮ್ಮೇಳನಕ್ಕೆ ನೀವು ವಿಶೇಷ ಅತಿಥಿಗಳಾಗಿ ಬರಬೇಕೆಂದು ನಾನು ಆಶಿಸುತ್ತೇನೆ. ಇತರ ವಿಷಯಗಳೊಂದಿಗೆ ಕೃಷಿ ಕಾರ್ಮಿಕ, ಕುಶಲ ಕರ್ಮಿ, ಸಂಸತ್ತಿನ ಕಾರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಮ್ಮೇಳನ ಎತ್ತಿಕೊಳ್ಳುತ್ತದೆ. ಇವುಗಳ ಪೈಕಿ ಯಾವುದರ ಬಗ್ಗೆಯೇ ಆಗಲಿ ನೀವು ಮಹತ್ವದ್ದೇನಾದರೂ ಹೇಳಬಲ್ಲಿರಿ. ಯಾವುದಾದರೂ ಅಂಶವನ್ನು ಸಾದರಪಡಿಸುವುದಕ್ಕೋಸ್ಕರ ನೀವು ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಭಾಗ ವಹಿಸಬೇಕೆಂದು ಅನ್ನಿಸಿದರೆ, ಸಮ್ಮೇಳನ ನಿಮಗೆ ವಿಶೇಷ ಅನುಮತಿ ನೀಡಬಲ್ಲದೆಂದು ನಂಬಿದ್ದೇನೆ.

ಹಾರ್ದಿಕ ಶುಭಾಶಯಗಳೊಂದಿಗೆ,

ನಿಮ್ಮ ವಿಶ್ವಾಸದ,
**ರಾಮ ಮನೋಹರ ಲೋಹಿಯಾ**

–೦–

**ಅಖಿಲ ಭಾರತ ಅನುಸೂಚಿತ ಜಾತಿಗಳ ಸಂಘ**
೨೬, ಅಲಿಪುರ ರಸ್ತೆ
ಸಿವಿಲ್ ಲೈನ್, ದೆಹಲಿ
೨೪ ಸಪ್ಟೆಂಬರ್ ೧೯೫೬

ಪ್ರೀತಿಯ ಡಾ. ಲೋಹಿಯಾ,

ನಿಮ್ಮಿಬ್ಬರು ಸ್ನೇಹಿತರು ನನ್ನನ್ನು ಕಾಣಲು ಬಂದಿದ್ದರು. ನಿಮ್ಮ ಚುನಾವಣೆ ಕಾರ್ಯಕ್ರಮದ ಬಗ್ಗೆ ನಾವು ಚರ್ಚೆಯಲ್ಲಿ ತೊಡಗಲಿಲ್ಲವಾದರೂ ಅವರೊಂದಿಗೆ ದೀರ್ಘ ಮಾತುಕತೆ ನಡೆಸಿದೆ.

ಅಖಿಲ ಭಾರತ ಅನುಸೂಚಿತ ಜಾತಿಗಳ ಸಂಘದ ಕಾರ್ಯ ನಿರ್ವಾಹಕ ಸಮಿತಿ ೩೦ನೆಯ ಸಪ್ಟೆಂಬರ್ ೧೯೫೬ರಂದು ಸಭೆ ಸೇರಲಿದ್ದು ನಿಮ್ಮ ಸ್ನೇಹಿತರು ನನಗೆ ನೀಡಿದ ಪ್ರಸ್ತಾವನೆಯನ್ನು ಸಮಿತಿಯ ಎದುರು ಮಂಡಿಸುತ್ತೇನೆ. ಕಾರ್ಯ ನಿರ್ವಾಹಕ ಸಮಿತಿಯ ಸಭೆ ಮುಗಿದ ನಂತರ ನಮ್ಮ ಪಕ್ಷದ ಮಹತ್ವದ ಸದಸ್ಯರೊಂದಿಗೆ ನಾನು ಚರ್ಚಿಸಬೇಕೆಂದಿರುವೆ. ಆದರೆ ನಾವು ಪರಸ್ಪರ ಹತ್ತಿರ ಬರಲು ಏನು ಮಾಡಬೇಕೆನ್ನುವುದರ ಬಗ್ಗೆ ಕೊನೆಗೆ ತೀರ್ಮಾನಸಬಹುದು. ಆದ್ದರಿಂದ ನನ್ನ ನಿವಾಸಕ್ಕೆ ಮಂಗಳವಾರದಂದು, ಅಂದರೆ ೨ನೆಯ ಅಕ್ಟೋಬರ್ ೧೯೫೬ರಂದು ನೀವು ಬರುವುದಾದರೆ ಸಂತೋಷವೆನಿಸುತ್ತದೆ. ನೀವು ಬರುತ್ತಿದ್ದರೆ ದಯವಿಟ್ಟು ತಂತಿ ಮೂಲಕ ನನಗೆ ತಿಳಿಸಿರಿ. ಹಾಗಿದ್ದಲ್ಲಿ ಕಾರ್ಯ ನಿರ್ವಾಹಕ ಸಮಿತಿಯ ಕೆಲವು ಸದಸ್ಯರನ್ನು ನಿಮ್ಮ ಭೇಟಿ ಮಾಡಿಸಲು ಉಳಿಸಿಕೊಳ್ಳುತ್ತೇನೆ.

ಆದರಗಳೊಡನೆ,

ನಿಮ್ಮ ವಿಶ್ವಾಸದ,
**ಬಿ. ಆರ್. ಅಂಬೇಡ್ಕರ್**

ಹೈದರಾಬಾದ್
೧ ಅಕ್ಟೋಬರ್೧೯೫೬

ಪ್ರೀತಿಯ ಡಾ. ಅಂಬೇಡ್ಕರ್,

೨೪ನೆಯ ಸಪ್ಟೆಂಬರ್‌ನ ನಿಮ್ಮ ಪ್ರೀತಿಯ ಪತ್ರಕ್ಕಾಗಿ ಧನ್ಯವಾದಗಳು. ಹೈದರಾಬಾದ್‌ಗೆ ಮರಳಿದ ಮೇಲೆ ಇಂದು ಅದನ್ನೋದಿದೆ. ಆದ್ದರಿಂದ ನೀವು ಸೂಚಿಸಿರುವ ಭೇಟಿಗಾಗಿ ದೆಹಲಿಗೆ ಸಮಯಕ್ಕೆ ಸರಿಯಾಗಿ ಬರುವಲ್ಲಿ ಪೂರ್ತಿ ಅಸಹಾಯಕಾಗಿರುವೆ. ಆದ್ದರಿಂದ ಸಾಧ್ಯವಿದ್ದಷ್ಟೂ ಬೇಗ ನಿಮ್ಮನ್ನು ಕಾಣುವ ಅವಕಾಶಕ್ಕಾಗಿ ಹಂಬಲಿಸುತ್ತಿರುವೆ. ಬಹುಶಃ ಅಕ್ಟೋಬರ್ ಮಧ್ಯದಲ್ಲಿ ನಾನು ಉತ್ತರ ಪ್ರದೇಶದಲ್ಲಿರುವೆ. ಇದರಿಂದ ದೆಹಲಿಯಲ್ಲಿ ನಿಮ್ಮನ್ನು ಅಕ್ಟೋಬರ್ ೧೯ ಇಲ್ಲವೆ ೨೦ರಂದು ಕಾಣಬಹುದು. ಅಕ್ಟೋಬರ್ ೨೯ರಂದು ನೀವು ಮುಂಬೈಯಲ್ಲಿರುವುದಾದರೆ ನಿಮ್ಮನ್ನು ಅಲ್ಲಿಯೇ ಭೇಟಿಯಾಗುತ್ತೇನೆ. ಎರಡು ದಿನಗಳಲ್ಲಿ ನಿಮಗೆ ಯಾವುದು ಅನುಕೂಲವಿದೆಯೆನ್ನುವುದನ್ನು ದಯವಿಟ್ಟು ತಂತಿಯ ಮೂಲಕ ತಿಳಿಸಿರಿ.

ಬೇರೆ ಸ್ನೇಹಿತರಿಂದ ನಿಮ್ಮ ಆರೋಗ್ಯದ ಬಗ್ಗೆ ಕೇಳಿ ಕಳವಳವಾಯಿತು. ನೀವು ಅಗತ್ಯವಿರುವ ಎಲ್ಲ ಕಾಳಜಿ ವಹಿಸುತ್ತೀರೆಂದು ಆಶಿಸುತ್ತೇನೆ.

ಬೇರೆ ಲಕೋಟೆಯ ಮೂಲಕ ನಿಮಗೆ ಕಳುಹಿಸಿರುವ ಇಲ್ಲಿಯವರೆಗೆ ಹೊರ ಬಂದ 'ಮ್ಯಾನ್‌ಕೈಂಡ್'ನ ಮೂರು ಸಂಚಿಕೆಗಳು ನನ್ನಲ್ಲಿ ಸಹ ಇವೆ. ನಿಮಗೊಂದು ವಿಷಯ ಸೂಚಿಸಲು ಅರ್ಧಮರ್ಧ ಮನಸ್ಸಿತ್ತಾದರೂ ಹಾಗೆ ಸೂಚನೆ ನೀಡಿಲ್ಲ. 'ಮ್ಯಾನ್‌ಕೈಂಡ್'ನ ಮೂರು ಸಂಚಿಕೆಗಳು ತಾವಾಗಿಯೇ ನಿಮ್ಮನ್ನು ವಸ್ತುವನ್ನಾಯ್ದುಕೊಳ್ಳಲು ಪ್ರಚೋದಿಸಬಲ್ಲವು. ನಮ್ಮ ದೇಶವನ್ನಾವರಿಸಿದ ಸಂಪೂರ್ಣ ಬೌದ್ಧಿಕ ದಿವಾಳಿಕೋರತನವನ್ನು ನಾವೆಲ್ಲ ಈಗ ಒತ್ತಿ ಹೇಳಬೇಕೆನಿಸಿದೆ. ತಾತ್ಕಾಲಿಕವಾಗಿಯಾದರೂ ನನ್ನ ಆಸೆಯೆಂದರೆ ನಿಮ್ಮಂಥ ವ್ಯಕ್ತಿ ಯಾವ ಪೂರ್ವಗ್ರಹವಿಲ್ಲದೆ ಮಾತಾಡುವುದು ತೀರ ಅವಶ್ಯಕವಾಗಿದೆ.

ನಿಮ್ಮ ವಿಶ್ವಾಸದ
**ರಾಮ ಮನೋಹರ ಲೋಹಿಯಾ**

-೦-

ದೆಹಲಿ/ ೫ ಅಕ್ಟೋಬರ್ ೧೯೫೬

ಪ್ರೀತಿಯ ಡಾ. ಲೋಹಿಯಾ,

೧ನೆಯ ಅಕ್ಟೋಬರ್ ೧೯೫೬ರ ೮೮೨೧ನೇ ಸಂಖ್ಯೆಯ ನಂಬರಿನ ಪತ್ರ ಕೈ ಸೇರಿತು. ೨೦ನೆಯ ಅಕ್ಟೋಬರ್‌ದಂದು ನೀವು ನನ್ನನ್ನು ಭೇಟಿಯಾಗಬಯಸಿದರೆ ನಾನು ದೆಹಲಿಯಲ್ಲಿರುತ್ತೇನೆ. ನಿಮಗೆ ಸ್ವಾಗತವಿದೆ. ಸಮಯವನ್ನು ಗೊತ್ತುಪಡಿಸಲು ಟೆಲಿಫೋನ್ ಮಾಡಿದರೆ ಸಾಕು.

ಹಾರ್ದಿಕ ಶುಭಾಶಯಗಳೊಂದಿಗೆ,

ನಿಮ್ಮ ವಿಶ್ವಾಸದ
**ಬಿ. ಆರ್. ಅಂಬೇಡ್ಕರ್**

## ಅಂಬೇಡ್ಕರ್ ಬಗ್ಗೆ ಲೋಹಿಯಾ ಮಧು ಲಿಮೆಯೆಗೆ ಬರೆದ ಪತ್ರ

ಹೈದರಾಬಾದ್/ ೦೧-೦೭-೧೯೫೭

ಪ್ರೀತಿಯ ಮಧು,

ಡಾ. ಅಂಬೇಡ್ಕರ್ ಅವರೊಂದಿಗಿನ, ಅವರನ್ನು ಕುರಿತ ಪತ್ರ ವ್ಯವಹಾರ ಗಮನಿಸಿರುವೆ. ಅದನ್ನು ನಿಮಗೂ ಕಳಿಸಿರುವೆ. ಡಾ. ಅಂಬೇಡ್ಕರ್ ಅವರ ಆಕಸ್ಮಿಕ ಸಾವಿನಂದ ಆಗಿರುವ ವ್ಯಥೆ ವೈಯಕ್ತಿಕವೆನ್ನುವಂತಹುದು ಎಂಬುದನ್ನು ನೀವು ಚೆನ್ನಾಗಿ ಬಲ್ಲಿರಿ.ಅವರನ್ನು ನಮ್ಮ ವೃತ್ತದೊಳಕ್ಕೆ ಸೇರಿಸಿಕೊಳ್ಳಬೇಕೆಂಬುದು ಸಂಘಟನೆಯ ದೃಷ್ಟಿಯಂದಷ್ಟೇ ಅಲ್ಲ, ಸಂಪೂರ್ಣ ಸೈದ್ಧಾಂತಿಕ ದೃಷ್ಟಿಯಲ್ಲಿ ಕೂಡ ನನ್ನ ಉದ್ದೇಶವಾಗಿತ್ತು ಮತ್ತು ಆ ಕ್ಷಣ ಹತ್ತಿರವಾಗುತ್ತಿದೆ ಎಂದೂ ಎನಿಸಿತ್ತು.

ನೀವು ಈ ಪತ್ರ ವ್ಯವಹಾರವನ್ನು ನಮಗೆ ಸಮಾನವಾಗಿ ಆದ ವೈಯಕ್ತಿಕ ನಷ್ಟದ ಹಿನ್ನೆಲೆಯಲ್ಲಿ ಓದಿ ಗಮನಿಸಬೇಕೆಂದು ನಾನು ಅರೆಕ್ಷಣವೂ ಬಯಸುವುದಿಲ್ಲ.. ನನ್ನ ದೃಷ್ಟಿಯಲ್ಲಿ ಡಾ. ಅಂಬೇಡ್ಕರ್ ಭಾರತದ ರಾಜಕರಣದ ಅಪೂರ್ವ ವ್ಯಕ್ತಿತ್ವ. ಗಾಂಧಿಯ ಹೊರತಾಗಿ ಯಾವುದೇ ಮಹಾನ್ ಸವರ್ಣಿಯ ಹಿಂದೂವಿನಷ್ಟೇ ಅಪೂರ್ವ ವ್ಯಕ್ತಿತ್ವದವರು. ಈ ಸಂಗತಿಯು ಹಿಂದೂ ಧರ್ಮದ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶ ಮಾಡಲು ಸಾಧ್ಯ ಎಂಬ ಸಮಾಧಾನ ಮತ್ತು ವಿಸ್ವಾಸವನ್ನು ಹುಟ್ಟಿಸಿತ್ತು.

ನನಗೆ ಮೂಲಭೂತವೆನಿಸಿದ ಒಂದು ಸಂಗತಿಯನ್ನು ಈ ದೇಶದ ಹರಿಜನರಿಗೆ ಅರುಹಲು ನಾನು ಸದಾ ಯತ್ನಿಸಿದ್ದೇನೆ. ಡಾ. ಅಂಬೇಡ್ಕರ್ ಹಾಗೂ ಜಗಜೀವನರಾಮ್ ಭಾರತದಲ್ಲಿನ ಎರಡು ಬಗೆಯ ಆಧುನಿಕ ಹರಿಜನರು. ಡಾ. ಅಂಬೇಡ್ಕರ್ ವಿದ್ವಾಂಸರಾಗಿದ್ದರು; ಪ್ರಾಮಾಣಿಕತೆ, ಧೈರ್ಯ ಮತ್ತು ಸ್ವತಂತ್ರ ಆಲೋಚನೆಯ ವ್ಯಕ್ತಿಯಾಗಿದ್ದರು; ಬಾಹ್ಯ ಜಗತ್ತಿಗೆ ನೆಟ್ಟಗೆ ನಿಂತ ಭಾರತದ ಪ್ರತೀಕವೆಂದು ಅವರನ್ನು ತೋರಿಸಬಹುದಿತ್ತಾದರೆ ಅವರು ಕಹಿ ಮನಸ್ಸಿನವರೂ ಪ್ರತ್ಯೇಕಿತರೂ ಆಗಿದ್ದರು. ಅವರು ಹರಿಜನೇತರ ನಾಯಕರಾಗಲು ನಿರಾಕರಿಸಿದರು. ೫೦೦೦ ವರ್ಷಗಳ ನೋವು-ಅವಮಾನ, ಹರಿಜನರ ಮೇಲೆ ಅದರ ನಿರಂತರ ಪರಿಣಾಮವನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲೆ. ಇವೇ ನಾನು ಹೇಳ ಹೊರಟ ಮುಖ್ಯ ಅಂಶ ಕೂಡ. ಡಾ. ಅಂಬೇಡ್ಕರ್‌ರಂಥ ಮಹಾನ್ ಭಾರತೀಯ ಒಂದಿಲ್ಲೊಂದು ದಿನ ಈ ವಾಸ್ತವವನ್ನು ಮೀರಿ ನಿಲ್ಲಬಲ್ಲರೆಂದು ನಾನು ಆಶಿಸಿದ್ದೆ. ಆದರೆ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲನೆಂದು ನಂಬಿದ್ದೆ. ಆದರೆ ಮರಣವೇ ಮೊದಲು ಬಂತು. ಜಗಜೀವನರಾವ್‌ರು ಎಲ್ಲ ಭಾರತೀಯರೊಂದಿಗೆ, ಹಿಂದೂಗಳೊಂದಿಗೆ ಸ್ಪಷ್ಟ ಸದ್ಭಾವನೆ ಬೆಳೆಸಿಕೊಳ್ಳುತ್ತಾರೆ. ಸವರ್ಣೀಯರೊಂದಿಗೆ ವ್ಯವಹರಿಸುವಾಗ ಅವರ ಮುಖ ಸ್ತುತಿ ಮಾಡಿ ಅವರಿಗೆ ಡೊಗ್ಗು ಸಲಾಮು ಹೊಡೆಯುತ್ತಾರೆನ್ನುವುದು ಗೊತ್ತಿರುವಂತೆಯೇ, ಹರಿಜನರ ಪ್ರತ್ಯೇಕ ಸಭೆಗಳಲ್ಲಿ ದ್ವೇಷದ ಕಟು ಸ್ವರದಲ್ಲಿ ಅವರು ಆಲಾಪಿಸುತ್ತಾರೆನ್ನುವುದೂ ಗೊತ್ತಿರುವ ಸಂಗತಿಯಾಗಿದೆ. ಇದು ಹರಿಜನರ ಅಥವಾ ಭಾರತದ ಉತ್ಕರ್ಷದಾಧಾರವಾಗಲಾರದು. ಇಷ್ಟಾದರೂ ಡಾ. ಅಂಬೇಡ್ಕರ್ ಮಾದರಿ ಕೂಡ ಬದಲಾಗಬೇಕಾಗಿರುವುದೂ ಅವಶ್ಯಕವಾಗಿದೆ.

ಈ ಅನುಸೂಚಿತ ಜಾತಿಗಳ ಸಂಘವನ್ನು ಯಾರು ನಡೆಸುತ್ತಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಆದರೆ ಭಾರತದ ಅನುಸೂಚಿತ ಜಾತಿಗಳು ಕಳೆದ ೪೦ ವರ್ಷಗಳ ಭಾರತದ ರಾಜಕಾರಣದ ಒಂದು ವಸ್ತುನಿಷ್ಠ ಸಮೀಕ್ಷೆ ಮಾಡಲು ಅವರನ್ನು ಯಾರಾದರೂ ಪ್ರೇರೇಪಿಸಿಬೇಕೆಂಬುದು ನನ್ನ ಆಸೆ. ಅವರು ಡಾ. ಅಂಬೇಡ್ಕರ್ ಅವರನ್ನು ಗೌರವದ ಮತ್ತು ಅನುಕರಣೆಯ ಪ್ರತೀಕವನ್ನಾಗಿಸಿಕೊಳ್ಳಬೇಕೆಂದು ಬಯಸುತ್ತೇನೆ. ಅವರ ಸ್ವತಂತ್ರ ಮನೋವೃತ್ತಿಯೊಂದಿಗೆ;ಆದರೆ ಅವರ ಕಹಿಯಿಲ್ಲದೆ. ಹರಿಜನರ ಮಾತ್ರವಲ್ಲ;ಸಮಸ್ತ ಭಾರತದ ನಾಯಕರಾಗಬಲ್ಲಂತೆ ವರ್ತಿಸಬಲ್ಲ ಅಂಬೇಡ್ಕರ್ ಅವರಾಗಿರಬೇಕಷ್ಟೆ.

ನಿಮ್ಮ ಪ್ರೀತಿಯ
**ರಾಮ ಮನೋಹರ ಲೋಹಿಯಾ**

**(ಕನ್ನಡಕ್ಕೆ: ಹಸನ್ ನಯೀಂ ಸುರಕೋಡ)**

# ಪ್ರೊ. ಬಿ. ಕೃಷ್ಣಪ್ಪ ನೆನೆಪಿನ ಮಾಲೆ–೫

–ಇಂದಿರಾ ಬಿ. ಕೃಷ್ಣಪ್ಪ

## ಹರಿಹರೇಶ್ವರ ದೇವಸ್ಥಾನದಲ್ಲಿ ಹಾಡಿನ ಪ್ರತಿಭಟನೆ!

ನಾದಿನಿ ಹಾಲಮ್ಮನವರೊಂದಿಗೆ ಮಾತು ಮುಂದುವರಿದಂತೆ ನಾವು ಹರಿಹರೇಶ್ವರ ದೇವಸ್ಥಾನಕ್ಕೆ ಹೋಗಿದ್ದ ವಿಚಾರವನ್ನು ಹೇಳಿದೆ ಆಕೆ ಕೂಡಲೇ 'ಅತ್ತೆ ಈ ಮನೆಗೂ, ಆ ದೇವಸ್ಥಾನಕ್ಕೂ, ನಮ್ಮ ಜನಾಂಗಕ್ಕೂ ಅಂಟಿದ ನಂಟಿನದ್ದೇ ಒಂದು ಕಥೆ. ಅಣ್ಣ ನಿಮ್ಗೆ ಹೇಳಲಿಲ್ವೆ?' ಎಂದು ಒಂದು ಕಥೆಯನ್ನೇ ಆರಂಭಿಸಿದಳು: 'ಆಗ ನಂಗಿನ್ನು ಮದುವೆ ಆಗಿರಲಿಲ್ಲ ನಾನು ಅವ್ವ ಕೂಲಿಗಂತ ಹೊಲಕ್ಕೋಗ್ತಾ ಇದ್ವಿ. ನಮ್ಮಪ್ಪ ಮಿಲ್ಟ್ರಿ ಕ್ಯಾಂಪ್‌ಗೆ ಬೇಳೆಕಾಳು–ದಿನಸಿ ಸರಬರಾಜು ಮಾಡೋ ಕೆಲಸ ಮಾಡ್ತಿದ್ದ. ಮನೆ ತುಂಬಾ ಮಕ್ಕಳು ನಾವು ನಾಲ್ಕು ಜನ ಹೆಣ್ಮಕ್ಕಳು ನಾಲ್ಕು ಜನ ಗಂಡು ಮಕ್ಕಳು. ಮತ್ತೆ ನಮ್ಮಜ್ಜಿ ನಮ್ಮ ತಾತ ಸೇರಿ ತುಂಬಿದ ಮನೆ. ಬೆಳಗಾದ್ರೆ ಎಲ್ಲರ ಹೊಟ್ಟೆ ತುಂಬ್ಸೋ ಪ್ರಶ್ನೆ. ನಮ್ಗೇನು ಹೊಲ–ಜಮಿನು ಇರಲಿಲ್ಲ, ಕಷ್ಟದ ಮೇಲ್ ಕಷ್ಟ... ಅಣ್ಣಂಗೆ ಓದ್ಸಬೇಕು ಅಂತ ಅವ್ವಂಗೆ ಆಸೆ.'

'ಅವತ್ತು ಕಾರ್ತಿಕ. ಊರವರೆಲ್ಲಾ ಹರಿಹರೇಶ್ವರಂಗೆ ತುಪ್ಪದ ದೀಪ ಎಳ್ಳುದೀಪ ಹಚ್ಚಿ ಬೇಡ್ಕೊತಾರ'. ಕಷ್ಟ ಪರಿಹಾರ ಆಗುತ್ತೆ, ಮನೆ ಉದ್ಧಾರ ಆಗುತ್ತೆ ಅಂತ ಅವ್ವನ ನಂಬಿಕೆ. ಆವತ್ತು ಅವ್ವ ಕೆಲಸದಿಂದ ಬಂದವಳೇ ಮುಖ ಕೈಕಾಲು ತೊಳ್ಕೊಂಡು ಎಳ್ಳೆಣ್ಣೆ ಎಳ್ಳುಬತ್ತಿ ಗಂಟು ತಕ್ಕೊಂಡು ನನ್ನನ್ನು ಕರಕೊಂಡು ದೇವಸ್ಥಾನಕ್ಕೆ ಹೋದ್ಳು. ಹೆಂಗಸ್ರು ಮಕ್ಕಳು ಎಳ್ಳೆಣ್ಣೆ ದೀಪ ಹಚ್ಚಿ ದೇವರ ಗುಡಿ ಸುತ್ತಿ ಅಡ್ಡಬಿದ್ದು ಬರ್ತಾ ಇದ್ರು. ದೇವಸ್ಥಾನದ ಹೊರಗೆ ಇಟ್ಟಿದ್ದ ದೊಡ್ಡ ದೀಪದ ಹಣತೆಗೆ ಅವ್ವ ನಾನು ಎಳ್ಳು ಬತ್ತಿ ಹಾಕಲು ಹೊರಟಿದ್ದೆ ತಡ ಅಲ್ಲೇ ಹತ್ತಿರದಲ್ಲಿದ್ದ ಪೂಜಾರಿ ಓಡಿಬಂದು "ಏ ತಾಯಿ ಅಷ್ಟು ಗೊತ್ತಾಗದಿಲ್ವಾ ಇಲ್ಲೆಲ್ಲಾ ನೀವು ಬರಬಾರ್ದು ತಗಿತಗಿ ಹೋಗಾಚೆ" ಎಂದು ನಮ್ಮನ್ನು ಓಡಿಸಿದ. ಅವ್ವ ಪರಿಪರಿಯಾಗಿ ಬೇಡಿದರೂ ಆತ ಕೇಳಲಿಲ್ಲ ಅಳುತ್ತ ಮನೆಗೆ ಬಂದ ಅವ್ವ ನಡೆದ ವಿಚಾರ ತಿಳಿಸಿದಳು.'

'ಬೇಸಿಗೆ ರಜೆಕ್ಕೆಂದು ಊರಿಗೆ ಬಂದಿದ್ದ ಅಣ್ಣ ಇದನ್ನು ಕೇಳಿಸಿಕೊಂಡುವನೆ ದೇವಸ್ಥಾನದೆಡೆಗೆ ಹೆಜ್ಜೆಹಾಕಿದ. ಕೇರಿಯ ಕೆಲವರು "ಬೇಡ ಕೃಷ್ಣ ಗಲಾಟೆ ಮಾಡಬೇಡ" ಅಂತ ಕೂಗ್ತಾ ಅವನ ಹಿಂದೆ ಓಡಿದರು. ಅಲ್ಲಿ ಹೋಗಿ ಪೂಜಾರಪ್ಪನನ್ನು 'ನಮ್ಮವ್ವನನ್ನು ದೇವರ ಗುಡಿಯಲ್ಲಿ ಏಕೆ ಬಿಡಲಿಲ್ಲ' ಎಂದು ಕೇಳಿದ. ಅದಕ್ಕೆ ಅವನು 'ನೀವು ಕೀಳು ಜಾತಿಯವರು ಇಲ್ಲೆಲ್ಲಾ ಬರಬಾರದು... ರೀತಿ ರಿವಾಜು ಹೇಗೋ ಹಾಗೆ ನಡ್ಕೋಬೇಕು. ಇವನೊಬ್ಬ ದೊಡ್ಡ ಗಾಂಧಿ ಬಂದ ನೋಡು" ಎಂದು ಗೇಲಿಮಾಡಿ ಹೀನಮಾನ ಬೈದು ಅಣ್ಣನನ್ನು ಹೊರಗೆ ಒಡಿಸಿಯೇ ಬಿಟ್ಟ. ಅಣ್ಣ ಹೊರಗಡೆ ಬಂದವನೆ ಗುಡಿ ಎದುರಿಗೆ ಚಕ್ಕಂಬಕ್ಕಳ ಹಾಕಿ ಕೂತು ಇದ್ದಕ್ಕಿದ್ದಂತೆ ದೊಡ್ಡ ಗಂಟಲಲ್ಲಿ ಸುಮಧುರವಾಗಿಹಾಡಲಾರಂಬಿಸಿದ:

**ಕಲ್ಲಿನಲ್ಲಿ ಕೆತ್ತಿದನು ಶಿಲ್ಪಿಯನವವನು**
**ದೇಗುಲದಿ ಕೂಡಿದನು ವೈದಿಕನು ಅವನು**
**ಮನಬಿಟ್ಟು ಶಿವ ನಿನಗೆ ಮನೆ ಇರಲಿ ಎಂದು**
**ಕೆತ್ತಿಸಿದ ಕಲ್ಲನು ಒಳಗಿಟ್ಟರಂದು**
**ಮೇಲೆಂಬ ಮಾನವ ಮೇಲೇರಿಸಿಟ್ಟು**
**ಶಿವನಾಗ ಓಡಿದನು ಅವನ ಮನಬಿಟ್ಟು**
**ಹಾಕುವನು ಬಂದಾಗ ಜನಿವಾರವಿತ್ತೆ**
**ಶಿವಭಕ್ತ ಬಂದಾಗ ಶಿವದಾರವಿತ್ತೆ**
**ಪ್ರತಿಯೊಬ್ಬ ಮಾನವನು ಬೆತ್ತಲೆಯಲ್ಲಿಬಂದು**
**ಆಮೇಲೆ ಕಿತ್ತಾಟ ಮೇಲು ಕೀಳೆಂದು**
**ನೂರೊಂದು ಹೊಸದಾಗಿ ಕಥೆಗಳನು ಕಟ್ಟಿ**
**ಯಾಪಾರ ಮಾಡುವನು ಪೂಜಾರಿ ಶೆಟ್ಟಿ**
**ಹೊಲೆಯ ನಿನ್ನಯ ಮನದಲಿ ಶಿವನು ತಾನಿರಲು**



**ತಮ್ಮ ಹರಿಹರಪ್ಪನ ಸರಳ ವಿವಾಹ ಸಂದರ್ಭದಲ್ಲಿ ತಂದೆ ತಾಯಿಗಳು (ಬಲ ತುದಿ) ಮತ್ತು ಮನೆಯ ಇತರ ಸದಸ್ಯರೊಂದಿಗೆ ಬಿ.ಕೃಷ್ಣಪ್ಪನವರು**

**ಅಡ್ಡಿ ಮಾಡಿದರು ಈ ದೇಗುಲಕೆ ಬರಲು**
**ಕೀಳೆಂದು ಅಳಬ್ಯಾಡಿ ಶಿವನಮಗ ನೀನು**
**ಹೃದಯದಲಿ ತುಂಬಿರಲಿ ಭಕ್ತಿಯ ಜೇನು॥**

'ಜನ ಎಲ್ಲಾ ಸೇರಿದ್ರು ಅವ್ವಕ್ಕಾದ್ರು ಪೂಜಾರಪ್ಪಂಗೆ ಏನೂ ಮಾತಾಡಕ್ಕಾಗಲಿಲ್ಲ ಕೆಲವು ಹಿರಿಯರು "ಇಂಥ ಹುಡುಗಂಗೆ ಯಾಕಪ್ಪ ಹೆದ್ರಿಸಿ ಹೊರಗೆ ಹಾಕ್ತಿ. ದೇವರಿಗೆ ನಮಸ್ಕಾರ ಹಾಕಿದ್ರೆ ನಿಂದೇನಪ್ಪ ಹೋಗೋದು? ಅವರೇನು ಗರ್ಭಗುಡಿಯೊಳಗೆ ಬರ್ತಾರಾ? ಬಿಡು ಬಿಡು ಆ ಹುಡುಗಂಗೆ, ನೀನು ಹೋಗಿ ಉದ್ದಂಡ ಬಿದ್ದು ಬಾರಪ್ಪ ತಮ್ಮ" ಎಂದು ವಾತವರಣ ತಣ್ಣಗೆ ಮಾಡಿದ್ರು. ಆಲಾಗಾಯ್ತು ಇವತ್ತಿನವರೆಗೆ ಅಣ್ಣ ಅಲ್ಲಿಗೆ ಹೋಗಿಲ್ಲ. ಈವತ್ತು ನಿಮ್ಮ ಜೊತೆ ಹೋಗಿದಾನೆ ಅಂದ್ರೆ ಅವನ ಮನಸ್ಸಿನಲ್ಲಿ ಏನೋ ಕುದಿತಾ ಇದೆ ಅಂತ ಕಾಣ್ಸುತ್ತೆ.'

ಇದನ್ನು ಕೇಳ್ತಾ ಇದ್ದ ನನಗೆ ಭಕ್ತ ಕನಕದಾಸನ ಜೀವನ ಚಿತ್ರಣ ಕಣ್ಮುಂದೆ ಬಂದಿತ್ತು ಅದೇ ಹೊತ್ತಿಗೆ ಉಣ್ಣಕ್ಕೆ ಬರಬೇಕಂತೆ ಅಂತ ಮಕ್ಕಳು ಕರೆಯದೆ ಇದ್ದಿದ್ರೆ ಮಾತು ಇನ್ನೊಂದು ಎಳೆಯನ್ನು ಬಿಚ್ಚಿಕೊಂಡು ಥಾಳಾಗಿ ಹರಡಿಕೊಳ್ಳುತ್ತಿತ್ತೇನೋ ಈ ವೇಳೆಗಾಗಲೇ ನನ್ನಲ್ಲಿ ಇದ್ದ ಸಂಕೋಚ, ಆತಂಕಗಳು ದೂರಾಗಿ ನನ್ನ ಮನಸ್ಸು ನಿರಾಳವಾಗಿತ್ತು.

ಊಟವಾದ ನಂತರ ನಾವು ಭದ್ರಾವತಿಗೆ ಹೊರಟೆವು. ಚಿಕ್ಕ ಮಕ್ಕಳು ಆದಿಯಾಗಿ ರಸ್ತೆಗುಂಟ ಬಂದು ನಮ್ಮನ್ನು ಬೀಳ್ಕೊಟ್ಟರು. ತಮ್ಮಂದಿರು ತಂಗಿಯರ ಕಣ್ಣುಗಳು ತೊಯ್ದಿದ್ದವು. ಅವರನ್ನು ಸಮಾಧಾನಿಸಿ ಹೊರಟೆವು.

ಮತ್ತೆ ಶುರು ಭದ್ರಾವತಿಯ ಆತಂಕದ ದಿನಗಳು ಆಗೆಲ್ಲಾ ನನಗೆ ಅವರ ಮನೆಯವರೆಷ್ಟು ವಿವೇಕಿಗಳು! ನಮ್ಮಂತವರ ಮನೆಗಳಲ್ಲಿ ಏಕೆ ಈ ಪ್ರಜ್ಞೆ ಇರುವುದಿಲ್ಲ? ಅವರ ತಂದೆತಾಯಿಗಳು, ಮನೆಯವರು ಯಾರೂ ಸಹ ಹಿರಿಯರಿಗೆ ಹೇಳದೆ ಮದುವೆ ಮಾಡಿಕೊಂಡಿದ್ದೇಕೆ ಎಂಬ ಬಗ್ಗೆ ಚಕಾರವನ್ನೆತ್ತಿರಲಿಲ್ಲ. ಮದುವೆ ಬಹಳ ಖಾಸಗಿ ವಿಚಾರ. ಹುಡುಗ–ಹುಡುಗಿ ಅವರ ಆಯ್ಕೆಗೆ ಮಾನ್ಯತೆ ಓದಿದ ಉದ್ಯೋಗಸ್ಥ ಹುಡುಗನನ್ನು ನಮ್ಮ ಹುಡುಗಿ ಆಯ್ಕೆ ಮಾಡಿಕೊಂಡಿದ್ದಾಳೆ; ಮಗಳನ್ನು ಚನ್ನಾಗಿ ಬಾಳಿಸಬಲ್ಲವನೀತ ಜಾತ್ಯಾತೀತವಾಗಿ ಮದುವೆಯಾಗಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದೇಕೆ ನಮ್ಮ ಮನೆಗಳಲ್ಲಿ ಯೋಚಿಸುವುದಿಲ್ಲ? ವರದಕ್ಷಿಣೆ, ಅದ್ದೂರಿ ವಿವಾಹ ಸಾಲಸೋಲ ಇವುಗಳೆಲ್ಲದರಿಂದ ಮುಕ್ತಿಪಡೆಯಲು ಇಂಥಹ ಸರಳ ಮದುವೆಗಳನ್ನೇಕೆ ನಿದರ್ಶನವಾಗಿ ಸ್ವೀಕರಿಸುವುದಿಲ? ಭಿನ್ನಭೇದನೆಣಿಸುವ ಜಾತಿಯೊಳಗಿನ ಮದುವೆಯೇ ಇವರಿಗೇಕೆ ಅಪ್ಯಾಯಮಾನವಾಗುತ್ತೆ? ಮುಂತಾದ ಪ್ರಶ್ನೆಗಳು ನನ್ನ ಮನಸ್ಸನ್ನು ಆವರಿಸಿದ್ದವು.

(ಮುಂದುವರೆಯುವುದು)

# ತೇಜಸ್ವಿ ನೆನಪು

# 'ಹೊಸ ದಾರಿ ತೆರೆದ ತೇಜಸ್ವಿ' : ಅಧ್ಯಯನ ಶಿಬಿರ



ಜಗತ್ತಿಗೆ, ಸಮಾಜಕ್ಕೆ ಹೊಸ ದಾರಿ ತೋರಿದಂತಹವರನ್ನು ಕಂಡುಕೊಳ್ಳುವುದು, ಅರ್ಥ ಮಾಡಿಕೊಳ್ಳುವುದು ಪ್ರತಿ ಜನಾಂಗದ ಜವಾಬ್ದಾರಿಯ ಕೆಲಸ. ಅದನ್ನು ಹಿರಿಯ ತಲೆಮಾರು ಯುವ ಜನಾಂಗಕ್ಕೆ ದಾಟಸುವುದು ಕೂಡ ಅಷ್ಟೇ ಮುಖ್ಯ.. ಈ ಹಿನ್ನೆಲೆಯಲ್ಲಿ 'ಹೊಸ ದಾರಿ ತೆರೆದ ತೇಜಸ್ವ' ಎನ್ನುವ ಅಧ್ಯಯನ ಶಿಬಿರವನ್ನು ಮಾರ್ಚ್, ೧೬ ಹಾಗೂ ೧೭ರಂದು ಶಿವಮೊಗ್ಗದ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಾಗರದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಸಹ್ಯಾದ್ರಿ ಕಾಲೇಜಿನ ಇಂಗ್ಲಿಷ್ ವಿಭಾಗ, ಮೂಡಿಗೆರೆಯ ವಿಸ್ಮಯ ಪ್ರತಿಷ್ಠಾನ ಹಾಗೂ ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ಪರಿಷತ್ತಿನ ಸಹಯೋಗದೊಂದಿಗೆ ಆಯೋಜಿಸಿದ್ದ ಅಧ್ಯಯನ ಶಿಬಿರದಲ್ಲಿ ಸುಮಾರು ೧೫೦ ಜನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಶಿಬಿರಾರ್ಥಿಗಳಾಗಿ ಪಾಲ್ಗೊಂಡಿದ್ದರು.

ಶಿಬಿರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಒಡನಾಡಿ ಪ್ರೊ. ಬಿ.ಎನ್. ಶ್ರೀರಾಂ ಅವರು, ತೇಜಸ್ವಿ ಅಗಾಧ ವ್ಯಾಪ್ತಿಯ ವಿಷಯ ವೈವಿಧ್ಯದ ಸಾಹಿತ್ಯ ಸೃಷ್ಟಿಸಿದ್ದು, ಅಲ್ಲಿ ಸಮಾಜದ ವಿಭಿನ್ನ ಸ್ತರಗಳ ಅನುಭವ ಮತ್ತು ಪಾತ್ರಗಳು ನಿರೂಪಣೆಗೊಂಡು ತೇಜಸ್ವಿಯವರ ವಿಶಿಷ್ಟ ಸರಳ ಶೈಲಿಯಲ್ಲಿ ಕನ್ನಡ ಓದುಗ ವರ್ಗಕ್ಕೆ ಮುಟ್ಟಿವೆ ಎಂದರು. ಶಿಬಿರದ ಪ್ರವೇಶ ಭಾಷಣ ಮಾಡಿದ ಶಿಬಿರದ ನಿರ್ದೇಶಕ ಡಿ.ಎಸ್. ನಾಗಭೂಷಣ ಅವರು, ತೇಜಸ್ವಿ ನವ್ಯ ಸಾಹಿತಿಯಾಗಿ ತಮ್ಮ ಬರವಣಿಗೆ ಆರಂಭಿಸಿದರಾದರೂ, ಬಹುಬೇಗನೆ ಅದರ ಮಿತಿಗಳನ್ನು ಕಂಡುಕೊಂಡು ಹೊಸ ಸಾಹಿತ್ಯ ತತ್ವ ಪ್ರತಿಪಾದನೆ ಮತ್ತು ಕೃತಿ ರಚನೆಗಳ ಮೂಲಕ ಕನ್ನಡ ಸಂವೇದನೆಯನ್ನು ಸಂಪನ್ನಗೊಳಿಸಿ ಮಾರ್ಗಪ್ರವರ್ತಕ ಲೇಖಕ ಎನಿಸಿಕೊಂಡಿರಲ್ಲದೆ, ಇನ್ನೊಂದು ನೆಲೆಯಲ್ಲಿ ಕನ್ನಡ ನವೋದಯದ ಪುನರುಜ್ಜೀವನಕ್ಕೂ ಕಾರಣರಾದರು ಎಂದು ಹೇಳಿದರು. ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಶ್ರೀಮತಿ ಎಂ.ಕೆ ವೀಣಾ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕಿ ದೀಕ್ಷಾ ಕಾರ್ಯಕ್ರಮ ನಿರೂಪಿಸಿದರು.



ಶಿಬಿರದ ಮೊದಲ ಗೋಷ್ಠಿಯಲ್ಲಿ ತೇಜಸ್ವಿಯವರ ಕಿರಿಯ ಒಡನಾಡಿ ಧನಂಜಯ ಜೀವಾಳ ತೇಜಸ್ವಿಯವರೊಡನೆ ಕಳೆದ ರಸಕ್ಷಣಗಳನ್ನು ಹಂಚಿಕೊಳ್ಳುತ್ತಾ ಹೇಗೆ ತೇಜಸ್ವಿ ತಮ್ಮ ಅನೌಪಚಾರಿಕ ಮಾತು ಮತ್ತು ವರ್ತನೆಗಳ ಮೂಲಕ ತಮ್ಮ ಕಿರಿಯ ಸಂಗಾತಿಗಳ ಕಲಾಭಿಜ್ಞತೆಯನ್ನು ಚೂಪುಗೊಳಿಸುತ್ತಿದ್ದರು ಎಂಬುದನ್ನು ವಿವರಿಸಿದರು.

ಮಧ್ಯಾಹ್ನದ ಗೋಷ್ಠಿಯಲ್ಲಿ ವಿಮರ್ಶಕ ಡಾ. ಎಚ್.ಎಸ್ ರಾಘವೇಂದ್ರ ರಾವ್ ತೇಜಸ್ವಿಯವರ ಕಥೆಗಳ ಬಗ್ಗೆ ಮಾತನಾಡುತ್ತಾ, ಸ್ಥಳೀಯ ಸಮುದಾಯಗಳ ಜ್ಞಾನ ಪರಂಪರೆಯನ್ನು ಗುರುತಿಸಿದ ತೇಜಸ್ವಿ ಆ ಮೂಲಕ ಅಂಚಿಗೆ ತಳ್ಳಲ್ಪಟ್ಟದ್ದ ಜನರನ್ನೇ ಮುಖ್ಯ ಪಾತ್ರಗಳನ್ನಾಗಿಸಿಕೊಂಡು ಹೊಸ ರೀತಿಯ ಕಥೆಗಳನ್ನು ಕನ್ನಡಕ್ಕೆ ಕೊಟ್ಟರು ಎಂದು ಹೇಳಿದರು. ದಿನದ ಕೊನೆಯ ಗೋಷ್ಠಿಯಲ್ಲಿ ತೇಜಸ್ವಿಯವರ ಕಾದಂಬರಿಗಳ ಬಗ್ಗೆ ಮಾತನಾಡಿದ ಇನ್ನೋರ್ವ ವಿಮರ್ಶಕ ಡಾ. ರಾಜೇಂದ್ರ ಚೆನ್ನಿಯವರು ಜನಪ್ರಿಯ ತಂತ್ರಗಳ ಮೂಲಕ ತೇಜಸ್ವಿ ಜಾಗತೀಕರಣದ ಅನಹುತಗಳು, ಪರಿಸರ ಸಮಸ್ಯೆ ಮುಂತಾದ ನಮ್ಮ ಕಾಲದ ಬಹು ಗಹನವಾದ ವಿಷಯಗಳನ್ನು ಜನಸಾಮಾನ್ಯರಿಗೆ ತಮ್ಮ ಕಾದಂಬರಿಗಳ ಮುಖೇನ ಮುಟ್ಟಿಸಿದರು ಎಂದರು.

೧೭ರಂದು ಶಿಬಿರ ಕೃಪಾಕರ-ಸೇನಾನಿ ನಿರ್ದೇಶಿಸಿರುವ ತೇಜಸ್ವಿ ಕುರಿತ ಚಲಚಿತ್ರವನ್ನು ಪ್ರದರ್ಶಿಸಲಾಯಿತು. ನಂತರ ಶಿಬಿರಾರ್ಥಿಗಳು ಚಿತ್ರ ಕುರಿತ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು ಆ ನಂತರದ ಗೋಷ್ಠಿಯಲ್ಲಿ 'ತೇಜಸ್ವಿ ಸಾಹಿತ್ಯದಲ್ಲಿ ಮಹಿಳೆಯರು' ವಿಷಯ ಕುರಿತು ಮಾತನಾಡಿದ ಕಾದಂಬರಿಗಾರ್ತಿ ಡಾ. ಎಚ್. ನಾಗವೇಣಿಯವರು ಮೊದಮೊದಲು ತೇಜಸ್ವಿಯವ ಕೃತಿಗಳಲ್ಲಿ ಮಹಿಳಾ. ಪಾತ್ರಗಳು ಗೌಣವಾಗಿ ಕಂಡರೂ, ಅದೆಲ್ಲ ಕೊರತೆಯನ್ನು ಅವರ 'ಕಿರಗೂರಿನ ಗಯ್ಯಾಳಿಗಳು' ಅದರಲ್ಲಿನ ಸ್ತ್ರೀಶಕ್ತಿಯ ಸ್ಫೋಟದ ಸ್ವರೂಪದಿಂದಾಗಿ ತುಂಬಿಕೊಡಬಲ್ಲುದಾಗಿದೆ ಎಂದರು. ನಂತರ 'ತೇಜಸ್ವಿಯವರ ಪರಿಸರ ಸಾಹಿತ್ಯ: ಒಂದು ನೋಟ' ವಿಷಯವಾಗಿ ಮಾತನಾಡಿದ ವಿಮರ್ಶಕ ಕಲೀಮುಲ್ಲಾ, ಪರಿಸರ ಪ್ರಜ್ಞೆ ಅವರ ಇಡೀ ಸಾಹಿತ್ಯದ ಅವಿಭಾಜ್ಯ ಅಂಗವಾಗಿದ್ದು, ಅವರು ಜಗತ್ತನ್ನು ವಿಸ್ಮಯದಿಂದ ನೋಡಿದ ಪರಿಯೇ ಪರಿಸರ ಸಾಹಿತ್ಯವೂ ಸೇರಿದಂತೆ ಅವರ ಕಥೆ-ಕಾದಂಬರಿಗಳಿಗೆ ಹೊರತಾದ ಎಲ್ಲ ಸಾಹಿತ್ಯದ ಮೂಲವಾಗಿದೆ ಎಂದರು. ಶಿಬಿರದಲ್ಲಿ ಪ್ರತಿ ಗೋಷ್ಠಿಯ ನಂತರ ಅರ್ಧ ತಾಸಿನ ಚರ್ಚೆ ಇರುತ್ತಿತ್ತು.

ಅಂದು ಮಧ್ಯಾಹ್ನ ಆಯೋಜಿಸಲಾಗಿದ್ದ ವಿದ್ಯಾರ್ಥಿ ಚಿಂತನ ಗೋಷ್ಠಿಯಲ್ಲಿ ವಿದ್ಯಾರ್ಥಿಗಳಾದ ಟಿ.ಭಾಸ್ಕರ, ಚೈತ್ರ,, ಮೇಹಾ ಜೋಸೆಫ್, ಮಹಾಲಕ್ಷ್ಮಿ ವಿದ್ಯಾ ಮತ್ತು ಅರ್ಪಿತಾ ತೇಜಸ್ವಿಯವರ ವಿವಿಧ ಕೃತಿಗಳನ್ನು ಕುರಿತ ತಮ್ಮ ಅನ್ನಿಸಿಕೆಗಳನ್ನು ಮಂಡಿಸಿದರು.



ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳು ಶಿಬಿರ ಕುರಿತ ತಮ್ಮ ಅಭಿಪ್ರಾಯ-ಅನುಭವಗಳನ್ನು ಮಂಡಿಸಿದರು. ಸಮಾರೋಪದ ಮಾತುಗಳನ್ನಾಡಿದ ಶ್ರೀಮತಿ ರಾಜೇಶ್ವರಿ ತೇಜಸ್ವಿಯವರು, ತೇಜಸ್ವಿಯವರೊಡನೆಯ ತಮ್ಮ ಬಾಳುವೆಯ ಕೆಲವು ವಿಶೇಷ ಸಂದರ್ಭಗಳನ್ನು ನೆನಪಿಸಿಕೊಳ್ಳುವ ಮೂಲಕ ತೇಜಸ್ವಿಯವರ ಒಂದು ಆತ್ಮೀಯ ಚಿತ್ರ ಕಟ್ಟಿಕೊಟ್ಟರು. ಡಾ. ಎಸ್. ಸಿರಾಜ್ ಅಹಮದ್ ಸ್ವಾಗತಿಸಿದರು, ಜಿ.ಆರ್. ಲವ ನಿರೂಪಿಸಿದರು. ಟಿ. ಅವಿನಾಶ ವಂದಿಸಿದರು.

ಶಿಬಿರಾರ್ಥಿಗಳೆಲ್ಲರಿಗೆ ಹೆಗ್ಗೋಡಿನ ನೀನಾಸಂ ಮತ್ತು ಮೈಸೂರಿನ ಪುಸ್ತಕ ಪ್ರಕಾಶನ ಕೊಡಮಾಡಿದ ತೇಜಸ್ವಿ ಕುರಿತ ಮತ್ತು ತೇಜಸ್ವಿಯವರ ಎರಡು ಪುಸ್ತಕಗಳನ್ನು ನೀಡಲಾಯಿತು.

(ವರದಿ: ಮರ್ಗನಳ್ಳಿ ಪ್ರಕಾಶ್)

# ನಮ್ಮ ಸಮಾಜವಾದಿಗಳು: ಬಹುಮುಖ ಪ್ರತಿಭೆಯ ತೇಜಸ್ವಿ



ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿಯನ್ನು ಆರಂಭದಲ್ಲಿ ಕಟ್ಟಿದವರು ಗೋಪಾಲಗೌಡರಾದಿಯಾಗಿ ರಾಜಕೀಯ ಕಾರ್ಯಕರ್ತರೇ ಆದರೂ, ಅದನ್ನು ತಾತ್ವಿಕವಾಗಿ ಪೋಷಿಸಿ ಬಲಪಡಿಸಿದವರಲ್ಲಿ ಅನೇಕ ಬುದ್ಧಿಜೀವಿ–ಲೇಖಕರ ಪಾತ್ರವೂ ಬಹು ಮಹತ್ವದ್ದು. ಅಂಥಹವರಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಪ್ರಮುಖರು. ಕುವೆಂಪು ಅವರ ಮಗನಾಗಿದ್ದ ತೇಜಸ್ವಿಯವರು ಶಿವಮೊಗ್ಗಕ್ಕೆ ಇಂಟರ್‌ಮೀಡಿಯೇಟ್ ಓದುವುದಕ್ಕೆ ಬಂದಾಗಲೇ ಸಮಾಜವಾದಿ ಚಳುವಳಿಯು ಕಾಗೋಡು ಸತ್ಯಾಗ್ರಹದ ರೂಪದಲ್ಲಿ ಸುಂಟರಗಾಳಿಯಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಬೀಸುತ್ತಿತ್ತು. ಆಗ ಸಹ್ಯಾದ್ರಿ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ತೇಜಸ್ವಿಯವರೂ ಸಹಪಾಠಿಗಳಾಗಿದ್ದ ನಾನು ಸ್ವಾಮಿರಾವ್, ಕೋಣಂದೂರು ಲಿಂಗಪ್ಪನವರಂತೆ ಸಮಾಜವಾದಿ ಚಳುವಳಿಯ ಸುಳಿಗೆ ಸಿಕ್ಕಿಹಾಕಿಕೊಳ್ಳದೆ ಇರಲು ಸಾಧ್ಯವಿರಲಿಲ್ಲ. ಲೋಹಿಯಾ ಆಗ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಲು ಬಂದು ಆರೆಸ್ಟಾಗಿ ದೊಡ್ಡ ಸಂಚಲನವನ್ನೇ ಉಂಟು ಮಾಡಿದ್ದರು, ಗೋಪಾಲಗೌಡರು ಆಗ ಎಲ್ಲರ ಕಣ್ಮಣಿ!

ಇಂಟರ್‌ಮೀಡಿಯೇಟ್ ಮುಗಿಸಿ ಸಹ್ಯಾದ್ರಿ ಕಾಲೇಜಿಂದ ಮೈಸೂರು ಮಹಾರಾಜಾಸ್ ಕಾಲೇಜಿಗೆ ಸೇರಿದ ಮೇಲೆ ಮೈಸೂರಿನ ಹಿರಿಯ ಲಾಯರ್ ಟಿ.ಎನ್. ನಾಗರಾಜ್‌ರವರು ಹಿರಿಯ ಸಮಾಜವಾದಿಗಳಾಗಿದ್ದವರು ಸಮಾಜವಾದಿ ಯುವಜನ ಸಭಾಗೆ ಸೇರಿದ್ದ ನಮಗೆಲ್ಲ ಏನಾದರೊಂದು ಕಾರ್ಯಕ್ರಮ ರೂಪಿಸುತ್ತಿದ್ದರು. ಮೊದಲು ಕನ್ನಡದ ಕೆಲಸ ಎಂದ್ರೆ ಪ್ರತಿಯೊಂದು ಅಂಗಡಿ, ಹೋಟೆಲ್, ಸರ್ಕಾರಿ ಕಛೇರಿ ನಾಮಫಲಕಗಳು ಕನ್ನಡದಲ್ಲೇ ಇರಬೇಕು. ಇಲ್ಲ ಎಂದ್ರೆ ಕಪ್ಪು ಬಣ್ಣ – ಬ್ರಷ್ ಲಿಂಗಪ್ಪನವರ ಕೈಗೆ ಕೆಲಸ ಕೊಡ್ತು ಎಂತಲೇ ತೀರ್ಮಾನ. ಆದ್ರೆ ಮೊದಲು ಅಂತಹವರಿಗೆ ಪೋಸ್ಟ್ ಕಾರ್ಡ್ ಮೂಲಕ ಎಚ್ಚರಿಕೆಯ ಪತ್ರ ರವಾನೆಯಾಗುತ್ತಿತ್ತು. ಇಡೀ ಮೈಸೂರು ನಗರಕ್ಕೆ ಪತ್ರ ಬರೆಯುವುದೆಂದ್ರೆ ಎಷ್ಟು ಪತ್ರ ಬರೆಯಬೇಕು ಊಹಿಸಿ. ಹತ್ತಿರದಲ್ಲಿ ಸಿಕ್ಕುತ್ತಿದ್ದವರು, ನಾನು, ತೇಜಸ್ವಿ, ಬಂದಗದ್ದೆ ರಮೇಶ, ಸಾಗರದ ಪ್ರಭಾಕರ ಮುಂತಾದವರು. ಮಹಾರಾಜ ಕಾಲೇಜಿನ ಹಿಂಭಾಗದ ಓರಿಯಂಟಲ್ ಲೈಬ್ರರಿ ಜಗುಲಿಯ ಮೇಲೆ ಕುಳಿತು ನಡು ರಾತ್ರಿವರೆಗೆ ಕೈಯಿಂದ ಪತ್ರ ಬರೆದು ಟಪಾಲಿಗೆ ಹಾಕುವುದು. ತಪ್ಪನ್ನು ತಿದ್ದಿಕೊಳ್ಳದ ಬೋರ್ಡಿಗೆ ಕರಿಬಣ್ಣ ಬಳಿಯುವುದು ವಗೈರೆ, ವಗೈರೆ.

ದಸರಾ ಬಂತೆಂದರೆ ಆನೆ ಮೇಲಿನ ಅಂಬಾರಿಯಲ್ಲಿ ಮಹಾರಾಜರು ಕೂರಬಾರದು. ಕಪ್ಪು ಬಾವುಟದ ಪ್ರದರ್ಶನ ಸಮಾಜವಾದಿಗಳಿಂದ ನಡೆಸುವುದು ಲಿಂಗಪ್ಪನವರ ಜವಾಬ್ದಾರಿಯಾದ್ದರಿಂದ ಅವರಿಗೆ ಸಿಗುವ ಹತ್ತಿರದ ಕಾರ್ಯಕರ್ತರೆಂದರೆ ನಾನು ಮತ್ತು ತೇಜಸ್ವಿಯವರೊಂದೊಡಗೂಡಿದ ಯುವಕರ ದಂಡು. ಈ ಗಲಾಟೆಯಲ್ಲಿ ಪೋಲೀಸಿನವರು ನಮ್ಮ ಅಂಡು ಪುಡಿಮಾಡಿದ್ದರು. ತೇಜಸ್ವಿ ಲಾಠಿ ಏಟಿನ ರುಚಿ ಕಂಡಿದ್ದರು. ಇವೆಲ್ಲ ಬಹಿರಂಗ ಚಟುವಟಿಕೆಗಳ ಮಧ್ಯೆ ಕಾಫಿ ಹೌಸ್ ಮೈಸೂರು ಇಲ್ಲಿ ನಡೆಯುತ್ತಿದ್ದ ಸಾಹಿತ್ಯ, ಸಮಾಜವಾದಿ ಸಿದ್ಧಾಂತ ಕುರಿತ ಚರ್ಚೆಗಳಲ್ಲಿ ತೇಜಸ್ವಿ ಗಂಭೀರವಾಗಿ ಭಾಗವಹಿಸುತ್ತಿದ್ದರು. ಜರ್ಮನಿಯಿಂದ ಆಗ ತಾನೆ ಮೈಸೂರಿಗೆ ಬಂದಿದ್ದ ಎಂ.ಡಿ. ನಂಜುಂಡಸ್ವಾಮಿ ಸಮಾಜವಾದಿ ಯುವಜನ ಸಭಾದ ಕಾರ್ಯಕ್ರಮಗಳ ನೇತೃತ್ವ ವಹಿಸಿ ಲೋಹಿಯಾರ ಚಿಂತನೆಗಳ ಅಭ್ಯಾಸ ಆರಂಭಿಸಿದರು. ಇದರ ಫಲವಾಗಿ ರಾಜ್ಯದ ಸಮಾಜವಾದಿ ರಾಜಕಾರಣದ ಚರ್ಚೆ ಮತ್ತು ಚಟುವಟಿಕೆಗಲ್ಲಿ ಸಕ್ರಿಯ ಪಾತ್ರ ವಹಿಸಲಾರಂಭಿಸಿದ ತೇಜಸ್ವಿ ಸಮಾಜವಾದಿ ಯುವಜನ ಸಭಾದ ಅಧ್ಯಯನ ಶಿಬಿರಗಳಲ್ಲಿ ಹೊಸ ಹೊಸ ಕಾರ್ಯಕ್ರಮಗಳ ಚರ್ಚೆಗೆ ದಾರಿ ಮಾಡಿಕೊಡುತ್ತಿದ್ದರು. ಒಬ್ಬರಿಗೆ ಒಂದೇ ಉದ್ಯೋಗ, ಬ್ರಾಹ್ಮಣ ಸಮಾಜವಾದಿಗಳ ಜನಿವಾರ ತ್ಯಾಗ, ವರದಕ್ಷಿಣೆ ನಿಷೇಧ, ಸರಳ ವಿವಾಹ ಇತ್ಯಾದಿಗಳು ಯುವಜನಾ ಸಭಾದ ಕಾರ್ಯಕ್ರಮಗಳಾದವು. ಸ್ವತಃ ತೇಜಸ್ವಿ ಅನ್ಯ ಜಾತಿಗೆ ಸೇರಿದ ರಾಜೇಶ್ವರಿಯವರನ್ನು ಪ್ರೇಮಿಸಿ ಮದುವೆಯಾದರು. ತಂದೆ ಕುವೆಂಪು ಇವರ ವಿವಾಹವನ್ನು 'ತಾವೇ ರೂಪಿಸಿದ ಮಂತ್ರ ಮಾಂಗಲ್ಯ ವಿಧಾನದಲ್ಲಿ ನೆರವೇರಿಸಿದರು. ಇದೆಲ್ಲದರ ಪರಿಣಾಮವಾಗಿ ಗೋಪಾಲಗೌಡರ ನಿದನಾನಂತರ ತೀರ್ಥಹಳ್ಳಿ ಕ್ಷೇತ್ರದಿಂದ ತೇಜಸ್ವಿಯವರನ್ನೇ ಅಭ್ಯರ್ಥಿಯನ್ನಾಗಿ ನಿಲ್ಲಿಸಬೇಕೆಂಬ ಪ್ರಸ್ತಾಪ ಬಂದಿತಾದರೂ, ಸಂಕೋಚದ ತೇಜಸ್ವಿ ಅದನ್ನು ಬಿಲ್ ಕುಲ್ ನಿರಾಕರಿಸಿ ಕೋಣಂದೂರು ಲಿಂಗಪ್ಪನವರನ್ನು ಗೆಲ್ಲಿಸಲು ಶ್ರಮ ವಹಿಸಿದರು.

ಈ ಮಧ್ಯೆ ಲೋಹಿಯಾ ಮೈಸೂರಿಗೊಮ್ಮೆ ಬಂದಾಗ ಕುವೆಂಪು ಅವರ ಮನೆಗೂ ಬಂದು ಹೋದದ್ದೇ ನೆಪವಾಗ್ದಿ ತೇಜಸ್ವಿ ಇನ್ನಷ್ಟು ಉತ್ಸಾಹದಲ್ಲಿ ಸಮಾಜವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ನಂಜುಂಡಸ್ವಾಮಿಯವರ ಜೊತೆಗೂಡಿ ಲೋಹಿಯಾ ಚಿಂತನೆಗಳನ್ನು ಸಂಗ್ರಹಿಸಿ ಕೆಂಪು ಪುಸ್ತಕವನ್ನು ಪ್ರಕಟಿಸಿದರು. ಆಗ ಟಿ. ಎನ್ ನಾಗರಾಜ್ ಸಂಪಾದಿಸುತ್ತಿದ್ದ ಸಮಾಜವಾದಿ ಪತ್ರಿಕೆ 'ಮಾನವ'ಕ್ಕಾಗಿ ಲೋಹಿಯಾರ ಕೆಲವು ಮುಖ್ಯ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದರು. ಸಮಕಾಲೀನ ವಿಷಯಗಳ ಬಗ್ಗೆ ಕರಪತ್ರಗಳನ್ನು ಹೊರಡಿಸಿದರು. ಇದೆಲ್ಲ ಕೆಲಸಗಳಿಗೆ ಕಳಶವಿಟ್ಟಂತೆ, ಮೈಸೂರಿನಲ್ಲಿ ೧೯೭೧ರಲ್ಲಿ ಐತಿಹಾಸಿಕ 'ಜಾತಿ ವಿನಾಶ' ಸಮ್ಮೇಳನ ನಡೆಯಲು ತೇಜಸ್ವಿಯವರೇ ಸ್ಫೂರ್ತಿ. ಅದಕ್ಕಿಂತ ಹೆಚ್ಚಾಗಿ ತಾವು ಆವರೆಗೆ ಸಾಹಿತಿಯಾಗಿಯೂ ಹೆಸರು ಮಾಡಿದ್ದ ನವ್ಯ ಸಾಹಿತ್ಯದ ಹಿಂದಿನ ಸಾಂಸ್ಕೃತಿಕ ರಾಜಕಾರಣವನ್ನು ಗುರುತಿಸಿ, ೧೯೭೩ರಲ್ಲಿ ಅದರ ವಿರುದ್ಧ ಒಂದು ತಾತ್ವಿಕ ಬಂಡಾಯವಾಗಿ 'ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ದ ಸಮಾವೇಶವನ್ನು ಸಂಘಟಿಸಲು ಶ್ರಮಿಸಿದರು. ಕುವೆಂಪು ಅವರು ಇದನ್ನು ಉದ್ಘಾಟಿಸಿದರು. ಇದರ ಫಲವಾಗಿ ಕನ್ನಡ ಸಾಹಿತ್ಯದ ದಿಕ್ಕೇ ಬದಲಾಯಿತೆಂಬುದು ಸಾಹಿತ್ಯಾಸಕ್ತರೆಲ್ಲರಿಗೆ ತಿಳಿದ ವಿಷಯವೇ ಆಗಿದೆ.

ತುರ್ತು ಪರಿಸ್ಥಿತಿ ನಂತರ ಸಮಾಜವಾದಿ ಪಕ್ಷ ಜನತಾ ಪಕ್ಷದಲ್ಲಿ ವಿಲೀನಗೊಂಡು, ಆನಂತರದಲ್ಲಿ ಸಮಾಜವಾದಿಗಳು ಚಿಂದಿ ಚಿತ್ರಾನ್ನವಾದ ನಂತರ ತೇಜಸ್ವಿ ಸಮಜವಾದಿ ರಾಜಕರಣದಲ್ಲಿ ಆಸಕ್ತಿ ಕಳೆದುಕೊಂಡರು. ಬರವಣಿಗೆಯ ಕಡೆ ಹೆಚ್ಚು ಗಮನ ನೀಡಿದರು. ಲಂಕೇಶ್ ಪತ್ರಿಕೆಯಲ್ಲಿ ನಿರಂತರವಾಗಿ ಬರೆಯುವ ಮೂಲಕ ಮತ್ತು ತಮ್ಮದೇ ಸಾಹಿತ್ಯ ಕೃತಿಗಳ ಮೂಲಕ ಸಮಾಜವಾದಿ ತತ್ವಗಳ ಶಿಕ್ಷಣ ನೀಡುತ್ತಿದ್ದರು. 'ಪ್ರಗತಿರಂಗ'ದ ಮೂಲಕ ಲಂಕೇಶರ ಜೊತೆಯಲ್ಲಿ ಅರ್ಧ ಮನಸ್ಸಿನಿಂದಲೇ ರಾಜಕೀಯದಲ್ಲಿ ಆಸಕ್ತಿ ತಾಳಿದರಾದರೂ ,ಆ ಪ್ರಯೋಗ ವಿಫಲವಾಗುವುದರೊಂದಿಗೆ ಅವರ ಸಮಾಜವಾದಿ ರಾಜಕಾರಣದ ಕಾಲವೂ ಕೊನೆಗೊಂಡಿತು. ಆದರೆ ಲೋಹಿಯಾರಿಂದ ಪ್ರಭಾವಿತರಾದ ಎಲ್ಲ ಪ್ರತಿಭಾವಂತರಂತೆ ಪೂರ್ಣಚಂದ್ರ ತೇಜಸ್ವಿಯವರು ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಕುತೂಹಲ ತೋರುತ್ತಾ ತಮ್ಮ ಬದುಕನ್ನು ಸಂಪನ್ನಗೊಳಿಸಿಕೊಂಡೇ ಆರು ವರ್ಷಗಳ ಹಿಂದೆ ನಮ್ಮನ್ನಗಲಿ ಹೋದರು. ಆದರೆ ಅವರ ನೆನಪು ಕನ್ನಡಿಗರೆಲ್ಲರ ಮನಸ್ಸಿನಲ್ಲಿ ಎಂದಿಗೂ ಚಿರಸ್ಥಾಯಿಯೇ.

**– ಕಡಿದಾಳು ಶಾಮಣ್ಣ**

**ಸಾಹಿತ್ಯ–ಸಂಸ್ಕೃತಿ ಇತ್ಯಾದಿ**

# ವಚನ ಸಂಶೋಧನೆಯೆಂಬ ದೊಂಬರಾಟ

ಇತ್ತೀಚೆಗೆ ಎಚ್.ಎಸ್ ಶಿವಪ್ರಕಾಶ್ ಬಾಲ ಗಂಗಾಧರ ಮತ್ತು ಡಂಕಿನ್ ಝಳಕಿ ಎಂಬುವವರು ವಚನ ಚಳುವಳಿ ಕುರಿತು ಬರೆದದ್ದೆಂದು ಹೇಳಲಾದ ಪುಸ್ತಕವೊಂದರ ಬಗ್ಗೆ 'ಪ್ರಜಾವಾಣಿ'ಯಲ್ಲಿ ಬರೆದು ಬಿರುಸಿನ ಚರ್ಚೆಯೊಂದಕ್ಕೆ ಕಾರಣರಾಗಿದ್ದಾರೆ.

ಎಸ್.ಎನ್ ಬಾಲಗಂಗಾಧರ ರಾವ್ ಎಂಬ ವಿದ್ವಾಂಸರು ಮೂಲತಃ ಕನ್ನಡಿಗರಾಗಿದ್ದು, ಈಗ ಬೆಲ್ಜಿಯಂನಲ್ಲಿ ನೆಲೆಸಿದ್ದು ಅಲ್ಲಿನ ಘೆಂಟ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿ, ಸಮಾಜಶಾಸ್ತ್ರದ ನಿರ್ವಸಾಹತೀಕರಣ ಎಂಬ ಜಾಗತಿಕ ಅಧ್ಯಯನ ಯೋಜನೆಯೊಂದನ್ನು ಕೈಗೆತ್ತಿಕೊಂಡಿದ್ದಾರೆ ಎಂದು ಕೇಳಿರುವೆ. ಅದರ ಭಾಗವಾಗಿ ಅವರು ಆ ದೇಶದಿಂದ ಹಣ ತಂದು ಈ ದೇಶದಲ್ಲಿನ ಹಲವು ವಿಶ್ವವಿದ್ಯಾಲಯಗಳಲ್ಲಿ–ನಮ್ಮ ಕುವೆಂಪು ವಿಶ್ವವಿದ್ಯಾಲಯವೂ ಸೇರಿದಂತೆ–ಸ್ಥಳೀಯ ಸಂಸ್ಕೃತಿ ಅಧ್ಯಯನದ ಹೆಸರಿನಲ್ಲಿ ಅನೇಕ ಸ್ಥಳೀಯ ಸಂಶೋಧಕರು, ಪ್ರಾಧ್ಯಾಪಕರು ಮತ್ತು ವಿದ್ವಾಂಸರು ಹಾಗೂ ನವ ಉದಾರೀಕರಣದ ಫಲವಾಗಿ ಮತ್ತೆ ತಲೆ ಎತ್ತಿರುವ (ನವ) ಪುರೋಹಿತರುಗಳನ್ನು ತಮ್ಮ ಯೋಜನೆಯ ತೆಕ್ಕೆಗೆ, ಪ್ರಭಾವ ವಲಯದೊಳಕ್ಕೆ ಸೆಳೆದಿರುವರು. ಮತ ಪ್ರಚಾರಕರ ರೀತಿಯಲ್ಲಿ ಎಲ್ಲೆಲ್ಲೂ–ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ–ಹರಡಿಕೊಂಡಿರುವ ಇವರು ತಮ್ಮ ಈ 'ಬಾಸ್'ನ ಸಂದೇಶವನ್ನು ಪ್ರಚುರಪಡಿಸುವ ವಿವಿಧ ಮಾರ್ಗಗಳನ್ನು ಅನ್ವೇಷಿಸಿಕೊಂಡು ಬಳಸುವುದರಲ್ಲಿ ನಿರತರಾಗಿದ್ದಾರೆ.

ಈ ಸೆಳೆತದ(ಇದರ ಎಲ್ಲ ಅರ್ಥಗಳಲ್ಲೂ) ಭಾಗವಾಗಿಯೇ ಝಳಕಿ ಮತ್ತು ಬಾಲಗಂಗಾಧರರ ವಚನ ಚಳುವಳಿ ಕುರಿತ ಈ ಸಂಶೋಧನೆ ನಡೆದಿರುವುದು. ವಸಾಹಾತುಶಾಹಿಯು ನಮ್ಮನ್ನು ನಾವು ಸರಿಯಾಗಿ(ಹಾಗೆಂದರೇನು?) ಅರ್ಥ ಮಾಡಿಕೊಳ್ಳುವಲ್ಲಿ ಅನೇಕ ಗ್ರಹಿಕೆ ಮತ್ತು ತಾತ್ವಿಕ ಅಡ್ಡಿಗಳನ್ನು ಉಂಟು ಮಾಡಿದೆ ಎಂದು ಇವರು ಹೇಳುವರು. ನಮಗಾರಿಗೂ ಹೊಸದೇನಲ್ಲದ ಈ ಪ್ರತಿಪಾದನೆಯ ಭಾಗವಾಗಿ ಜಾತಿ ವ್ಯವಸ್ಥೆ ಕುರಿತ ನಮ್ಮ–ಅದು ಅಸಮಾನತೆಯ ಸಾಧನ ಎಂಬ–ಗ್ರಹಿಕೆ, ಈ ಕಾರಣದಿಂದಾಗಿ ತಪ್ಪಾಗಿದೆಯೆಂದೂ ಇವರು ವಾದಿಸುವರು. ಆದರೆ ಈ ಗ್ರಹಿಕೆ ಹೇಗೆ ತಪ್ಪೆಂಬುದನ್ನು ವಿವರಿಸಲು ಮಾತ್ರ ಇವರು ಎದುರುಗಿರುವವರು ಯಾರು ಎಂಬುದರ ಆಧಾರದ ಮೇಲೆ ವೈವಿಧ್ಯಮಯ ನಿರೂಪಣೆಗಳನ್ನು ಮಂಡಿಸುವರು! ಈ ಬಗ್ಗೆ ನಾನು ಒಮ್ಮೆ ಸ್ವತಃ ಬಾಲಗಂಗಾಧರರ ಬಳಿಯೇ ಚರ್ಚಿಸುವ ಸಾಹಸ ಮಾಡಲು ಹೋಗಿ ಬೀದಿ ಜಗಳಕ್ಕಿಳಿಯಬೇಕಾದ ಪ್ರಸಂಗವೊಂದು ಎದುರಾದದ್ದರ ಬಗ್ಗೆ ಈ ಹಿಂದೆ ಬೇರೆಡೆ ಬರೆದಿರುವೆ.

ಅದಿರಲಿ, ವಚನ ಚಳುವಳಿ ಕುರಿತ ಅವರ 'ಸಂಶೋಧನೆ'ಯನ್ನೇ ನೋಡಿ. ಇದರ ಪ್ರಕಾರ ವಚನ ಚಳುವಳಿ ಜಾತಿ ವಿರೋಧದ ಆಶಯವನ್ನೇ ಹೊಂದಿಲ್ಲವಂತೆ. ಇದನ್ನು ಪರಿಶೀಲಿಸುವ ಮುನ್ನ ಬಾಲ ಗಂಗಾಧರರ ಮೂಲ ಪ್ರತಿಪಾದನೆಯೊಂದನ್ನು ನಾವು ಗಮನಿಸಬೇಕಾಗುತ್ತದೆ. ಅದೆಂದರೆ, ಜಾತಿ ವ್ಯವಸ್ಥೆ ಎಂಬುದು ಒಂದು 'ವ್ಯವಸ್ಥೆ'ಯಲ್ಲ, ಒಂದು ಸಂಪ್ರದಾಯ ಮಾತ್ರ ಎಂಬುದು. ವ್ಯವಸ್ಥೆ ಎಂದರೆ ಇವರ ಪ್ರಕಾರ ಅದು ಅಖಿಲ ಭಾರತೀಯ ಮಟ್ಟದಲ್ಲಿ ಸಾಮಾನ್ಯವಾಗಿ ಅನ್ವಯವಾಗುವ ನಿಯಮಗಳ '.ವ್ಯವಸ್ಥೆ'ಯಾಗಿರಬೇಕು!. ಇದು ವೈದಿಕ ರಾಜಕಾರಣ(ತತ್ವ ಚಿಂತನೆ ಅಲ್ಲ) ಆರಂಭದಿಂದಲೂ ಅನುಸರಿಸಿಕೊಂಡು ಬಂದಿರುವ ತಂತ್ರವೇ ಆಗಿದೆ. ಅದೆಂದರೆ, ಒಂದು 'ವ್ಯವಸ್ಥೆ'ಯಾಗಿ ಹಿಂದೆಂದೂ ಇಲ್ಲದ ಭಾರತವೆಂಬುದೊಂದನ್ನು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರೂಪಾಂತರಗಳಲ್ಲಿ ಎಲ್ಲರ ಮೇಲೆ ಹೊರಿಸುತ್ತಾ ಅದರ ಚೌಕಟ್ಟಿನಲ್ಲೇ ಎಲ್ಲ ಜಿಜ್ಞಾಸೆ, ತತ್ವ ರಚನೆ, ವಾದ ಚರ್ಚೆ, ಸಂಶೋಧನೆ ನಡೆಸುವುದು. ಭಾರತವೆಂಬುದು ಇಂದು ಒಂದು ಸಾಂವಿಧಾನಿಕ ಅಸ್ತಿತ್ವ ಮಾತ್ರ. ಅದರ ಹೊರತಾಗಿ ಅದೊಂದು ಅರ್ಧ ಚಾರಿತ್ರಿಕ–ಅರ್ಧ ಪೌರಾಣಿಕ ಕಲ್ಪನೆ, ಅಷ್ಟೆ. ನಮ್ಮ ಸ್ಥಳೀಯ ಸಂಸ್ಕೃತಿ ಚಿಂತಕರೆಲ್ಲರೂ(ಕನ್ನಡದಲ್ಲಿ ತೇಜಸ್ವಿಯಿಂದ ಹಿಡಿದು ಡಿ. ಆರ್. ನಾಗರಾಜರವರೆಗೆ) ಇದನ್ನು ಕಂಡುಕೊಳ್ಳುತ್ತಾ, ವಿಷದೀಕರಿಸುತ್ತಾ ಹೋಗಿದ್ದಾರೆ. ಆದರೆ ಈ ಸಂಶೋಧಕ ಮಹಾಶಯರು ಅದೇ ಸ್ಥಳೀಯ ಸಂಸ್ಕೃತಿಂ ಅಧ್ಯಯನದ ಹೆಸರಿನಲ್ಲಿ ಇದನ್ನೆಲ್ಲ ಬುಡಮೇಲುಗೊಳಿಸ ಹೊರಟಿದ್ದಾರೆ, ಇದು ಯಾರಿಗೂ ತಿಳಿಯು ಲಾರದೆಂಬ ವೈದಿಕ ಮಾಯೆಯಲ್ಲಿ ನಂಬಿಕೆ ಇರಿಸಿ!



ವಚನಗಳನ್ನು ಕುರಿತ ಇವರ ಈ ಹಾಸ್ಯಾಸ್ಪದ ಸಂಶೋಧನೆ ಈ ಪೆದ್ದುತನದ ಭಾಗವೇ ಆಗಿದೆ. ಏಕೆಂದರೆ. ವಚನಗಳ ಸಂಖ್ಯೆಯು ಶೇಕಡಾವಾರು ಲೆಕ್ಕಾಚಾರ ಮಾಡಿ ಅವುಗಳಲ್ಲಿ ಜಾತಿ ಚಹರೆಗಳನ್ನು ಹುಡುಕಲು ಇವರು ಹೊರಟಿದ್ದಾರೆ! ಜಾತಿಯನ್ನು ಸೇರು, ಪಾವು, ಚಟಾಕುಗಳಲ್ಲಿ ಅಳೆಯಲು ಸಾಧ್ಯವೆಂದು–ಅದೂ ಅಖಿಲ ಭಾರತದ ಅಳತೆಯ ಮಾನದಲ್ಲಿ–ನಮ್ಮನ್ನು ನಂಬಿಸಲು ಇವರು ಹೊರಟಿದ್ದಾರೆ. ಇವರ ಪ್ರತಿಪಾದನೆಯ ಆರಂಭಿಕ ಊಹೆ ನೋಡಿ: ಹೆಚ್ಚಿನ ವಚನಗಳಲ್ಲಿ ಜಾತಿ ಪ್ರಸ್ತಾಪ ಕಂಡುಬರದಿದ್ದರೆ ವಚನ ಚಳುವಳಿ ಜಾತಿ ವಿರೋಧಿ ಚಳುವಳಿಯಲ್ಲ ಎಂದು ತೀರ್ಮಾನಿಸಬೇಕಾಗುತ್ತದೆ! ಸಮಾಜಶಾಸ್ತ್ರದ ನಿರ್ವಸಾಹತೀಕರಣ ಎಂದರೆ ಸಂಶೋಧನೆಯನ್ನು ಅಂಕಗಣಿತದ ಆಟವನ್ನಾಗಿ ಮಾರ್ಪಡಿಸುವುದು ಎಂದು ಇವರು ತಿಳಿದಿದ್ದಾರೆಂದು ಕಾಣುತ್ತದೆ! ವಚನ ಚಳುವಳಿ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಆಯಾಮಗಳಿದ್ದ ಒಂದು ರಾಜಕೀಯ ಚಳುವಳಿಯೂ ಆಗಿದ್ದು, ಅದರ ಸೃಜನಶೀಲ ಅಭಿವ್ಯಕ್ತಿ ರೂಪವಷ್ಟೇ ವಚನ ಸಾಹಿತ್ಯವೆನಿಸಿಕೊಂಡಿದ್ದು, ಸಾಹಿತ್ಯವೆನ್ನುವುದು ಇವರ ಸಂಶೋಧನೆ ನಂಬಿರುವ ಇಂತಹ ಹಸಿ ಹಸಿ ಲೆಕ್ಕಾಚಾರಗಳನ್ನು, ಅಳತೆಗಳನ್ನು ಮೀರಿದ ಒಂದು ಅನುಭಾವಿಕ ಸ್ತರದ ವಿದ್ಯಮಾನ ಎಂದು ಈ ಮೂರ್ಖರಿಗೆ ಯಾರಾದರೂ ಹೇಳಬೇಕಿದೆ.

ವಚನ ಸಾಹಿತ್ಯ ಎಂಬುದು ಜೇಡರ ದಾಸಿಮಯ್ಯನಿಂದ ಹಿಡಿದು ಬಸವ–ಅಲ್ಲಮ–ಅಕ್ಕಗಳ ನಂತರವೂ ಹಲವು ಸಾಮಾಜಿಕ–ಸಾಂಸ್ಕೃತಿಕ ಸಂಕೀರ್ಣತೆಗಳೊಂದಿಗೆ ವಿಸ್ತರಿಸಿಕೊಂಡ ಅನುಭಾವದ ಆಕಾಶದಲ್ಲಿ ಬೆಳಗಿದ ಗುಡುಗು–ಸಿಡಿಲು ಮಿಂಚುಗಳು; ಹೊಸ ದರ್ಶನವೊಂದರ, ಹೊಸ ತಿಳುವಳಿಕೆಯ ಮೇಘ ಸ್ಫೋಟಗಳು. ಅದರ ಪ್ರತಿಧ್ವನಿಗಳನ್ನು ನಂತರದ ಹಲವು ವರ್ಷಗಳ ಕಾಲ ಮಾದೇಶ್ವರ, ಮಂಟೆಸ್ವಾಮಿ, ಕೊಡೇಕಲ್ ಬಸವ, ಸಿದ್ಧಾರೂಢ ಇತ್ಯಾದಿ ಸ್ಥಳೀಯ ಕಿರು ಸಂಪ್ರದಾಯಗಳಲ್ಲಿ ಕೇಳಬಹುದಾಗಿದ್ದು, ಇವನ್ನೂ ನೀವೊಮ್ಮೆ ಜಾತಿ ಮಾನದಲ್ಲಿ ಅಳೆದುನೋಡಲು ಯತ್ನಿಸಿರಿ ಎಂದೂ ಬಾಲಗಂಗಾಧರ ನಾಟಕ ಕಂಪನಿಗೆ ಯಾರಾದರೂ ಹೇಳಬೇಕಿದೆ. ಹಾಗೇ ಇವರ ಮೇಲೆ ಕನಿಕರವಿಟ್ಟಾದರೂ ಎ.ಕೆ. ರಾಮಾನುಜನ್‌ರ 'ಅಂಗುಲ ಹುಳುವಿನ ಪರಕಾಯ ಪ್ರವೇಶ' ಕವನವನ್ನೊಮ್ಮೆ ಓದಲು ಈ ಸಂಶೋಧನಾ ಸರಕಿನ ಅಂತಾರಾಷ್ಟ್ರೀಯ ವ್ಯಾಪಾರಿಗಳಿಗೆ ಸೂಚಿಸಬೇಕಿದೆ. ಇವರ ಇಂತಹ ವ್ಯಾಪಾರ ನಮ್ಮ ಒಳ್ಳೊಳ್ಳೆಯ ಸಂಶೋಧಕರನ್ನು ಅಗ್ಗದ ಅನುವಾದಕರನ್ನಾಗಿ ಅವನತಿಗೊಳಿಸಿರುವ ದುರಂತವನ್ನು ಗಮನಿಸಿ ನಾನು ಈ ಖಾರವಾದ ಮಾತುಗಳನ್ನಾಡುತ್ತಿರುವೆ.

ಹಾಗೆ ನೋಡಿದರೆ ಮೊದಲು ಇಂತಹ ಮಾತುಗಳನ್ನು ಹೇಳಬೇಕಿರುವುದು ಸ್ವತಃ ಕವಿಯಾದ ಶಿವಪ್ರಕಾಶರಿಗೆ. ಬಹುಶಃ ಅವರೀಗ ಕವಿಯಲ್ಲ. ಹಾಗಾಗಿಯೇ ಏನೋ, ಈವರೆಗೆ ಯಾರೂ ಮೂಸಿನೋಡದಿದ್ದ ಈ ಕಗ್ಗವನ್ನು ಗಮನಾರ್ಹ ಸಂಗತಿಯೆಂಬಂತೆ ಅವರೀಗ ಎಲ್ಲರ ಮೂಗಿನ ಬಳಿ ತಂದಿದ್ದಾರೆ. ಇದೆಲ್ಲ ಯಾಕೆ? ನಿಜವಾಗಿ ತಿಳಿಯದಾಗಿದೆ!

ನಿಜ, ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ಇಂದು ತಲುಪಿರುವ ಸ್ಥಿತಿಯನ್ನು ಗಮನಿಸಿದರೆ ಜಾತಿ ವ್ಯವಸ್ಥೆ ಕುರಿತ ನಮ್ಮ ಗ್ರಹಿಕೆ ಮತ್ತು ನಿರೂಪಣೆಗಳಲ್ಲಿ ಏನೋ ಮುಖ್ಯ ಐಬಿರುವಂತಿದೆ. ಆದರೆ ಅದು ಖಂಡಿತ ಇವರು ಈಗ ಕಂಡುಹಿಡಿದಿರುವಂತಹುದಲ್ಲ.

**–ಡಿ.ಎಸ್.ನಾಗಭೂಷಣ**

## ಪುಸ್ತಕಾವಲೋಕನ

ಪುಸ್ತಕ: **ಸುರಗಿ** (ಯು.ಆರ್.ಅನಂತಮೂರ್ತಿ ಅವರ ಆತ್ಮಕಥನ) ನಿರೂಪಣೆ: **ಜ.ನಾ, ತೇಜಶ್ರೀ** ಪ್ರ: **ಅಕ್ಷರ ಪ್ರಕಾಶನ, ಹೆಗ್ಗೋಡು** ಪು: **೪೩೬** ಬೆಲೆ: **ರೂ.೨೫೦/-**

# ‘ಪಬ್ಲಿಕ್ ಇಂಟೆಲೆಕ್ಚುಲ್’ನ ಸಂದಿಗ್ಧಗಳು




**ಕ**ನ್ನಡದಲ್ಲಿ ಇಂದು ನೆನಪುಗಳ ಕ್ರಸ್ಟ್ ಗೇಟ್ ತೆರೆದಿಟ್ಟಂತೆ ಅನುಭವ ಕಥನಗಳು, ಆತ್ಮಕಥನಗಳು, ಪ್ರವಾಸ ಕಥನಗಳು ಮುಂತಾದ ನಾನ್-ಫಿಕ್ಷನ್ ಪ್ರಕಾರಗಳು ಸಾಂಪ್ರದಾಯಿಕ ಪ್ರಕಾರಗಳಿಗಿಂತ ಹೆಚ್ಚಿನ ಮನ್ನಣೆ ಗಳಿಸುತ್ತಿವೆ. ಇಂತಹ ಹೊತ್ತಿನಲ್ಲಿ ಅನಂತಮೂರ್ತಿ ಅವರ ಆತ್ಮಕಥನ ‘ಸುರಗಿ’ ಬಂದಿರುವುದು ಸಾಮಾಯಿಕ ಎನ್ನಿಸುತ್ತದೆ.

‘ಕತೆಯನ್ನು ನಂಬು ಕತೆಗಾರನನ್ನಲ್ಲ’ ಎಂದ ಲಾರೆನ್ಸನ ಅಭಿಮಾನಿಯಾದ ಅನಂತಮೂರ್ತಿ ಅವರ ‘ಸುರಗಿ’ ಎಂತಹ ಆತ್ಮ’ಕಥನವಾಗಿರಬಹುದು ಎಂಬ ಕುತೂಹಲ ಅವರ ಓದುಗರಿಗೆ ಇದೆ. ಆತ್ಮಕಥನದ ಮಾದರಿಯಲ್ಲಿ ನಾನು ಎಂಬ ಆತ್ಮ ಪ್ರತ್ಯಯ ಮುಖ್ಯವಾಗಿರುವುದಾದರೂ ‘ಸುರಗಿ’ಯು ಇಪ್ಪತ್ತನೇ ಶತಮಾನದ ಬಹುಮುಖ್ಯ ಘಟನೆಗಳಿಗೆ ಸಾಕ್ಷಿಯಾದ ಬದುಕನ್ನು ವೈಯಕ್ತಿಕವಾಗಿ ‘ನಾನು ಅನಂತಮೂರ್ತಿ’ ಎನ್ನುವ ಆತ್ಮ ಪ್ರತ್ಯಯದಲ್ಲಿ ಹೇಳುವುದಕ್ಕಿಂತ ಮುಖ್ಯವಾಗಿ ತಾವು ಬದುಕಿದ ಕಾಲದ ರುಜುವಾತನ್ನು ಕಂಡುಕೊಳ್ಳುವತ್ತ ಆಸಕ್ತಿ ಹೊಂದಿದೆ. ಬ್ರಾಹ್ಮಣ ಸಮುದಾಯದಲ್ಲಿ ಹುಟ್ಟಿದ ಅನಂತಮೂರ್ತಿ ಆಧುನಿಕರಾಗುವ ಹೊರಳು ಈ ಕಥನಕ್ಕೊಂದು ವಿಶಾಲವಾದ ರಾಜಕೀಯ ಹಾಗೂ ಸಾಮಾಜಿಕ ಆಯಾಮಗಳನ್ನು ಒದಗಿಸುತ್ತದೆ. ಜಾತಿ ಹಾಗು ಇಂಗ್ಲಿಷಿನ ಮುಷ್ಟಿಯಲ್ಲಿ ಸಿಕ್ಕಿಕೊಂಡ ಭಾರತೀಯ ಸಮಾಜದಲ್ಲಿ ಬದುಕಬೇಕಾದ ಭಾರತೀಯನ ಸಂದಿಗ್ಧ ಹಾಗು ಮುಜುಗರಗಳನ್ನು ‘ಸುರಗಿ’ ತೆರೆದಿಡುವ ಯತ್ನ ಮಾಡುತ್ತದೆ.

ಅನಂತಮೂರ್ತಿ ಅವರ ಆತ್ಮಕಥನ ನೆನಪುಗಳಿಂದ ಇಡುಕಿರಿದಿದ್ದು ಅವನ್ನು ಆತ್ಮಕಥನಕ್ಕೆ ಅಪೇಕ್ಷಿತವಾದ ಆತ್ಮನಿರೀಕ್ಷಣೆಯ ಅಂಶವನ್ನು ಕೈಬಿಡದೆ ಆತ್ಮಪ್ರತ್ಯಯವನ್ನು ತೋರುವ ರೀತಿಯಲ್ಲಿ ನಿರೂಪಿಸಲಾಗಿದೆ. ಸಾಧಾರಣವಾಗಿ ಕಥನದಲ್ಲಿರುವ ಉತ್ತಮಪುರುಷ ನಿರೂಪಣೆಯಲ್ಲಿ ಕಾಣಿಸುವ ನಿವೇದನೆ, ತಪ್ಪೊಪ್ಪಿಗೆಗಳು ಒಂದೆಡೆ ಇದ್ದರೆ ಇನ್ನೊಂದು ಕಡೆ ಅವನ್ನು ಪಠ್ಯವೇ ಒಡೆಯುವಂತೆ ಇರುವ ವ್ಯಂಗ್ಯ ಇವು ಕೂಡ ಆತ್ಮಕಥನವಾದ ‘ಸುರಗಿ’ಯಲ್ಲಿ ಇವೆ. ಆದರೆ ಕೃತಿಯ ಸೊಗಸು ಇರುವುದು ಕಾಲದ ಮಿಡಿತವನ್ನು ಕಂಡ ಅನೇಕ ಮಹನೀಯರ ಒಡನಾಟದ ವಿವರಗಳು ಹಾಗು ನೈತಿಕವಾದ ಆತ್ಮಸಾಕ್ಷಿಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಮಹತ್ವದ್ದು ಎಂದು ಭಾವಿಸಿ ಅವನ್ನು ನಿವೇದಿಸುವಲ್ಲಿ.

‘ಪಬ್ಲಿಕ್ ಇಂಟಲೆಕ್ಚುಯಲ್’ ಆಗಿ ಬೆಳೆದ ಅನಂತಮೂರ್ತಿ ಅವರ ಬದುಕು ಬರವಣಿಗೆಗಳಿಗೆ ವಿಚಿತ್ರವಾದ ಫೋಕಸ್ ಇದೆ. ಅವರು ಸಾರ್ವಜನಿಕ ವ್ಯಕ್ತಿಯಾಗಿ ಗಳಿಸಿದ ಕೀರ್ತಿ ಅಪಕೀರ್ತಿ ಎಲ್ಲವೂ ಜನಪ್ರಿಯವಾಗಿ ಅವರ ವೈಯಕ್ತಿಕ ಬದುಕಿನ ಬಗೆಗೆ ಕೆಟ್ಟ ಕುತೂಹಲ ಮೂಡಿಬಿಟ್ಟಿದೆ. ಇದರಿಂದಲೋ ಏನೋ ಅವರು ಏನನ್ನು ಹೇಳಬೇಕಾದರೂ ತಮ್ಮ ಇಮೇಜನ್ನು ಗಮನಿಸಿ ಹೇಳಬೇಕಾಗಿದೆ. ಈ ಅಂಶ ಅವರ ಆತ್ಮಕಥನಕ್ಕೂ ಅನ್ವಯಿಸುವಂತದ್ದು. ಅನೇಕ ವಿವಾದಗಳೂ ಪುರಸ್ಕಾರಗಳು ಹಿಂಬಾಲಿಸುತ್ತಿರುವುದನ್ನು ಅವರು ಬಲ್ಲರು ಆದರೆ ಅವನ್ನು ಒಲ್ಲೆ ಎನ್ನುವವರಲ್ಲ. ಆತ್ಮದ ಶಿಲ್ಕುಗಳನ್ನು ‘ಪಬ್ಲಿಕ್’ ಆಗಿಯೇ ನಿರ್ಧರಿಸಬೇಕೆನ್ನುವ ಜಾಯಮಾನವನ್ನು ಅವರ ಬರಹಗಳು ತೋರುತ್ತಾ ಬಂದಿರುವುದರಿಂದ ಅವರದು ‘ಕೇಳುವಂತಾ ಆಲೋಚನೆಗಳು’. ಈ ಅಂಶ ಅವರ ಗದ್ಯದ ಹೈಲೈಟ್ ಕೂಡ. ‘ಸುರಗಿ’ಯಲ್ಲಿ ಈ ಅಂಶವನ್ನುನಾವು ಮುಖ್ಯವಾಗಿಗಮನಿಸಬಹುದು.

ಸಮಾಜವಾದಿಗಳೊಡನೆ ಒಡನಾಡಿದ ಅನಂತಮೂರ್ತಿ ತಮ್ಮ ಜಾತಿಯನ್ನು ಸಾರ್ವಜನಿಕವಾಗಿ ಚರ್ಚಿಸಬೇಕಾದ ಅಗತ್ಯವಾಗಿ ಕಾಣುತ್ತಾರೆ. ಅವರು ತಮ್ಮ ಜಾತಿಯನ್ನು ವಿಮರ್ಶಿಸಬಲ್ಲರು. ಆದರೆ ಜಾತಿ ಸೃಜನಶೀಲ ಎಂದು ಹೇಳಿ ವಿವಾದಕ್ಕೆ ಕಾರಣರಾಗಬಲ್ಲರು. ಜಾತಿ ಮತ್ತು ಆಧುನಿಕತೆಯನ್ನು ಜೊತೆಯಲ್ಲಿಟ್ಟು ಚರ್ಚಿಸುವ ಅನಂತಮೂರ್ತಿ ಅವರಿಗೆ ಜಾತಿ ತಮ್ಮೊಬ್ಬರದೇ ಸಮಸ್ಯೆಯಲ್ಲ; ಎಲ್ಲ ಭಾರತೀಯರ ಸಮಸ್ಯೆ. ಜಾತಿ ಕಳಚಿಕೊಳ್ಳುವಿಕೆಯನ್ನೂ ಅವರು ಅಂತರ್ಜಾತೀಯ ವಿವಾಹ, ಅನೇಕ ಜಾತಿಯ ಜನರ ಜೊತೆಗಿನ ಒಡನಾಟ ಈ ಕ್ರಿಯೆಗಳಿಂದ ಪ್ರಯತ್ನಿಸಿದ್ದಾರೆ. ಇಷ್ಟಾದರೂ ಅನಂತಮೂರ್ತಿ ಅವರ ನಿಲುವು ಅನೇಕರಿಗೆ ಪಾರದರ್ಶಕ ಎನ್ನಿಸಿಲ್ಲ ಎನ್ನುವದನ್ನು ಅವರೇ ವಿವರಿಸುತ್ತಾರೆ. ಉದಾಹರಣೆಗೆ ಗೋಪಾಲಗೌಡರು ‘ಬ್ರಾಹ್ಮಣಿಕೆ’ ಮಾಡುತ್ತಿದ್ದೀರಿ ಎಂದಿದ್ದು(ಪು.೮೩), ಬರಹಗಾರರ ಒಕ್ಕೂಟದ ಸಂದರ್ಭದಲ್ಲಿ ಬಹಿಷ್ಕರಿಸಲ್ಪಟ್ಟಿದ್ದು (ಪು.೧೮೧) ಇತ್ಯಾದಿ ಘಟನೆಗಳು ಇಲ್ಲಿ ದಾಖಲಾಗಿವೆ.

ಆತ್ಮಕಥನ ಆತ್ಮನಿರೀಕ್ಷಣೆಯನ್ನು ಅಪೇಕ್ಷಿಸುತ್ತದೆ. ಅಂತೆಯೇ ಸಾರ್ವಜನಿಕ ಬದುಕಿನಲ್ಲಿ ಗುರುತಿಸಿಕೊಂಡ ಅನಂತಮೂರ್ತಿ ಅವರ ಆತ್ಮಕಥನವು ಕೆಲಮಟ್ಟಿಗೆ ಆತ್ಮನಿರೀಕ್ಷಣೆಯನ್ನು ಮಾಡಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಅನಂತಮೂರ್ತಿ ಅನೇಕ ತಪ್ಪೊಪ್ಪಿಗೆಗಳನ್ನು ಮಾಡಿಕೊಳ್ಳುತ್ತಾರೆ. ಅವುಗಳಲ್ಲಿ ಪಟೇಲರನ್ನು ಸಂದರ್ಶಿಸುವಾಗ ಗೆಳೆಯನಗೆ ಮುಜುಗರ ಮಾಡಬಾರದೆನ್ನುವ ಕಾರಣಕ್ಕೆ ಕಪ್ಪುಹಣದ ಬಗ್ಗೆ ಕೇಳದೆ ಮೌನವಾಗಿದ್ದುದು(ಪು.೨೭೯), ‘ನೇರ ಭ್ರಷ್ಟನಾಗದಿದ್ದರೂ ಭ್ರಷ್ಟತೆಗೆ ಮೂಕನಾಗಿಬಿಟ್ಟೆನೇನೊ ಎನ್ನುವ ಅನುಮಾನ ಈಗ ಬಾಧಿಸುತ್ತದೆ’(ಪು.೫೮೯) ಎನ್ನುವುದು ಸೇರಿದಂತೆ ಅವರ ಹಲವು ತಪ್ಪೊಪ್ಪಿಗೆಗಳು ‘ಸುಂದರ ತಪ್ಪೊಪ್ಪಿಗೆ’ಗಳಂತೆ ಕಾಣುತ್ತವೆ. ಅವರು ರಕ್ಷಣಾತ್ಮಕವಾಗಿ ಹೇಳುವ ಮಾತು ಹೀಗಿದೆ: ‘ಒಟ್ಟಿನಲ್ಲಿ ನಾವು ಸುಖೀಜನ. ನಾನೂ ಸುಖವಾಗಿ ಬದುಕಿದವನೇ, ನನ್ನನ್ನು ಅಟ್ಯಾಕ್ ಮಾಡುವವರೂ ಸುಖವಾಗಿ ಬದುಕಿದವರೇ’(ಪು.೨೫೪) ಇದು ವಾಸ್ತವವೇ ಇರಬಹುದು. ಆದರೆ. ಇದರಿಂದ ನೈತಿಕವಾಗಿ ಎತ್ತಬಹುದಾದ ಪ್ರಶ್ನೆಗಳನ್ನು ಪಕ್ಕಕ್ಕೆ ಸರಿಸಿದಂತಾಗಿದೆ.

ಅನಂತಮೂರ್ತಿ ಅವರು ಕನ್ನಡದ ಬಹುಮುಖ್ಯ ಲೇಖಕರಷ್ಟೇ ಅಲ್ಲ; ಅವರು ಪ್ರಪಂಚದಾದ್ಯಂತ ‘ಭಾರತೀಯ ಲೇಖಕರಾಗಿಯೂ ಪ್ರಸ್ತುತರು. ತಮ್ಮ ಭಾರತೀಯತೆಗೆ ಮೂಲ ನೆಲೆ ಕನ್ನಡ ಎನ್ನುವ ದೇಸಿ ಭಾಷೆಯ ಅಸ್ಮಿತೆ ಎನ್ನುವುದು ಅವರ ಬಲವಾದ ನಂಬಿಕೆ. ಹಾಗೆಂದೇ ಕನ್ನಡಕ್ಕಾಗಿ ಅವರು ತೋರುವ ಕಾಳಜಿಗಳು ಅವರ ಆತ್ಮಕಥನದಲ್ಲಿ ಅಥೆಂಟಿಕ್ ಆಗಿ ದಾಖಲಾಗಿವೆ.

ಬಾಲ್ಯದ ನೆನಪುಗಳಿಂದ ಸಮಕಾಲೀನ ಜೀವನದ ಅನೇಕ ನೆನಪುಗಳವರೆಗೆ ಹೆಜ್ಜೆ ಹಾಕುವಾಗ ಮೊದಲ ಭಾಗದ ನಾಸ್ಟಾಲ್ಜಿಕ್ ಆದ ನಿರೂಪಣೆ ಆನಂತರ ಸಾರ್ವಜನಿಕ ಜೀವನದ ವಿಷಾದವನ್ನು ಪ್ರಕಟಿಸುತ್ತಾ ಹೋಗುತ್ತದೆ. ಈ ಹಂತದಲ್ಲಿ ಅವರ ಆತ್ಮಕಥನದ ವೈಯಕ್ತಿಕ ಬದುಕಿನ ವಿವರಗಳ ಹಸಿ ಹಸಿ ವಿವರಣೆಗಿಂತ ಅವರಿಗೆ ರಾಜಕೀಯ ಚೌಕಟ್ಟಿನ ಸಾರ್ವಜನಿಕ ಆಗುವಿಕೆ ಮುಖ್ಯವೆನ್ನಿಸಿದೆ. ಸಮಾಜವಾದದ ಜೊತೆ ನಡಿಗೆ ಅವರನ್ನು ಸಾರ್ವಜನಕವಾಗಿ ಒಡ್ಡಿಕೊಳ್ಳಬೇಕಾದ ಎಚ್ಚರವನ್ನು ಕೊಟ್ಟಿದೆ. ಆದುದರಿಂದಲೇ ಅನೇಕ ಸ್ವ-ಮರುಕ, ಹಳಹಳಿಕೆಗಳನ್ನು ಮೀರಿ ಈ ಆತ್ಮಕಥನ ಸಾರ್ವತ್ರಿಕವಾಗುವ ನಿಟ್ಟಿನಲ್ಲಿದೆ.

**-ಆರ್.ತಾರಿಣಿ ಶುಭದಾಯಿನಿ**

ಕರ್ನಾಟಕ ಸರ್ಕಾರ

ಭಾರತ ರತ್ನ, ಸಂವಿಧಾನ ಶಿಲ್ಪಿ

# ಡಾ. ಬಿ.ಆರ್ ಅಂಬೇಡ್ಕರ್ ಜಯಂತಿ

# 14-4-2013



ನಾನು ಧರ್ಮವನ್ನು ಇಷ್ಟಪಡುತ್ತೇನೆ. ಏಕೆಂದರೆ ಅದು ಸ್ವಾತಂತ್ರ್ಯತೆ
ಸಮಾನತೆ ಮತ್ತು ಸೋದರತೆಯನ್ನು ಕಲಿಸುತ್ತದೆ
-ಡಾ. ಬಿ.ಆರ್ ಅಂಬೇಡ್ಕರ್

ಡಾ. ಬಿ.ಆರ್ ಅಂಬೇಡ್ಕರ್ ರವರ
೧೨೩ನೇ ಜನ್ಮದಿನಾಚರಣೆಯ ಹಾರ್ದಿಕ ಶುಭಾಶಯಗಳು!

-ಕರ್ನಾಟಕ ವಾರ್ತೆ




HOSA MANUSHYA, a kannada monthly ¸solely owned, edited, published and primted by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Printers, Beengaluru-560 026 Ph. No:080-267571**59**

## ತಿಂಗಳ ಸಾಲುಗಳು...




ತಂತ್ರಜ್ಞಾನ ನಮ್ಮ ಮಾನವ ಸಂಬಂಧಗಳನ್ನು ಮೀರಿ ಬೆಳೆದು ಈ ಜಗತ್ತು ಮೂರ್ಖ ಜನಾಂಗವೊಂದನ್ನು ಪಡೆಯುವ ದಿನ ಬಂದೀತೆಂಬ ಭಯ ನನ್ನನ್ನು ಆವರಿಸಿದೆ.

*–ಆಲ್ಬರ್ಟ್ ಐನ್‌ಸ್ಟೀನ್*

**ಪತ್ರಿಕೆಗೆ ಶುಭವನ್ನು ಕೋರುವ...**

**–ಬಿ.ಸುರೇಶ**

**ಡಾ. ವಿಜಯಾ**

**Regd. News Paper**
RNI No. KARKAN/2012/47568 Rgd No. KA/SK/
SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa anushya, 'HIG-5, 'Nudi', Kallahalli Extesion.
Vinoba Nagara, Shivamogga - 577204 (Karnataka)